ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 27 ಮಂಗಳವಾರ 2022

ಸಂಪುಟ: 43 | ಸಂಚಿಕೆ: 162 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹೊಸ ದಾಖಲೆ ಬರೆದ ಮೈಸೂರು ದಸರಾ

ದಸರಾ ಉದ್ಘಾಟಿಸಿದ ಮೊದಲ ರಾಷ್ಟ್ರಪತಿ ದ್ರೌಪದಿ ಮುರ್ಮು

ಮೈಸೂರು, ಸೆ. 26(ಆರ್‌ಕೆ)– ಇದೇ ಮೊದಲ ಬಾರಿ ಭಾರತದ ಘನತೆವೆತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು, ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸುವ ಮೂಲಕ ಹೊಸ ಇತಿಹಾಸಕ್ಕೆ ಮುನ್ನುಡಿ ಬರೆದಿದ್ದಾರೆ.

ವೈಭವದ ನವರಾತ್ರಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಅಗ್ರಪೂಜೆ ನೆರವೇರಿಸಿದ ದ್ರೌಪದಿ ಮುರ್ಮು ಅವರು, 9 ದಿನಗಳ ವಿಶ್ವವಿಖ್ಯಾತ ಶರನ್ನವರಾತ್ರಿ ಉತ್ಸವಕ್ಕೆ ಇಂದು ಚಾಲನೆ ನೀಡಿದರು. ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇದೇ ಪ್ರಥಮ ಬಾರಿ ಕರ್ನಾಟಕಕ್ಕೆ ಆಗಮಿಸಿದ ಮುರ್ಮು ಅವರು, ದೆಹಲಿಯಿಂದ ನೇರವಾಗಿ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿ, ಬೆಳಗ್ಗೆ 9.55 ಗಂಟೆಗೆ ಕಾರಿನಲ್ಲಿ ಚಾಮುಂಡಿಬೆಟ್ಟ ತಲುಪಿದರು.

ನೇರವಾಗಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಜಿ.ಟಿ. ದೇವೇಗೌಡರೊಂದಿಗೆ ನಾಡದೇವತೆ ▸ 4ನೇ ಪುಟಕ್ಕೆ

ಮೈಸೂರು ದಸರಾ ಭಾರತದ ಸಾಂಸ್ಕೃತಿಕ ಪರಂಪರೆಯ ಪ್ರತೀಕ

ರಾಷ್ಟ್ರಪತಿ ದ್ರೌಪದಿ ಮುರ್ಮು ಬಣ್ಣನೆ

ಮೈಸೂರು: ವಿಶ್ವಪ್ರಸಿದ್ಧ ಮೈಸೂರು ದಸರಾ ಮಹೋತ್ಸವವು ಭಾರತದ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ಪ್ರತೀಕವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಣ್ಣಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ 2022ರ ದಸರಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನಾಡಹಬ್ಬಕ್ಕೆ ಚಾಲನೆ ನೀಡುತ್ತಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಎಂದರು. 'ತಾಯಿ ಚಾಮುಂಡೇಶ್ವರಿಗೆ ನನ್ನ ನಮಸ್ಕಾರಗಳು, ಎಲ್ಲಾ ಸಹೋದರ, ಸಹೋದರಿಯರಿಗೆ ▸ 4ನೇ ಪುಟಕ್ಕೆ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಚಾಮುಂಡಿಬೆಟ್ಟದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವಕ್ಕೆ ದೀಪ ಬೆಳಗಿಸಿ, ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ಚಿತ್ರದಲ್ಲಿದ್ದಾರೆ.

ಅರಮನೆ ಅಂಗಳದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸಾಧಕಿ ಲಲಿತ್ ಜೆ.ರಾವ್ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ' ಪ್ರದಾನ



ಮೈಸೂರು ಅರಮನೆ ಅಂಗಳದ ಸಾಂಸ್ಕೃತಿಕ ವೇದಿಕೆಯಲ್ಲಿ ವಿದುಷಿ ಲಲಿತ್ ಜೆ.ರಾವ್ ಅವರಿಗೆ ಸೋಮವಾರ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು. ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ, ಸಚಿವರಾದ ಎಸ್.ಟಿ.ಸೋಮಶೇಖರ್, ಸುನಿಲ್‌ಕುಮಾರ್, ಶಾಸಕ ಎಸ್.ಎ.ರಾಮದಾಸ್, ಮೇಯರ್ ಎಂ.ಶಿವಕುಮಾರ್, ಉಪ ಮೇಯರ್ ಜಿ.ರೂಪಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು,ಸೆ.26(ಎಸ್‌ಬಿಡಿ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅರಮನೆ ಅಂಗಳದ ಭವ್ಯ ವೇದಿಕೆಯಲ್ಲಿ ಸೋಮವಾರ ಸಂಜೆ ವಿಧ್ಯುಕ್ತ ಚಾಲನೆ ದೊರಕಿತು.

ತಾಯಿ ಚಾಮುಂಡೇಶ್ವರಿಯ ಶ್ರೀರಕ್ಷೆ ಬೇಡುವ 'ಕಾಯೌ ಶ್ರೀ ಗೌರಿ ಕರುಣಾ ಲಹರಿ...' ಕೃತಿಯ ಗಾಯನ ಹಾಗೂ ನಾಡಗೀತೆಯೊಂದಿಗೆ ಆರಂಭವಾದ ಸಮಾರಂಭದಲ್ಲಿ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್, ಶಾಸಕ ಎಸ್.ಎ.ರಾಮದಾಸ್ ಇನ್ನಿತರ ಗಣ್ಯರು ದೀಪ ಬೆಳಗಿಸುವ ಮೂಲಕ ಅರಮನೆ ಸೇರಿದಂತೆ ವಿವಿಧ 8 ವೇದಿಕೆಗಳಲ್ಲಿ ನಡೆಯಲಿರುವ ವೈಭವದ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಉಸ್ತಾದ್ ಫಯಾಜ್ ಖಾನ್ ಅವರ ಶಿಷ್ಯೆ, ಪ್ರಸಿದ್ಧ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸಾಧಕಿ ಲಲಿತ್ ಜೆ.ರಾವ್ ಅವರಿಗೆ ಮೈಸೂರು ಪೇಟ ತೊಡಿಸಿ, ಪ್ರಶಸ್ತಿ ಫಲಕ, 5 ಲಕ್ಷ ರೂ. ಗೌರವ ಧನ, ಸ್ಮರಣಿಕೆ ಮತ್ತು ಸರಸ್ವತಿ ಪ್ರತಿಮೆ ಸಹಿತ ▸ 3ನೇ ಪುಟಕ್ಕೆ

ನಾಡಿನ ಸರ್ವತೋಮುಖ ಅಭಿವೃದ್ಧಿ ನಮ್ಮ ಸಂಕಲ್ಪ

ಮುಖ್ಯಮಂತ್ರಿ ಬೊಮ್ಮಾಯಿ ದಸರಾ ಸಂದೇಶ

ಮೈಸೂರು, ಸೆ.26(ಆರ್‌ಕೆ)– ಸರ್ವ ಶ್ರೇಷ್ಠ ಕನ್ನಡ ನಾಡಿನ ಸರ್ವತೋಮುಖ ಅಭಿವೃದ್ಧಿ ನಮ್ಮ ಸಂಕಲ್ಪ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮೈಸೂರು ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಸಂಕಷ್ಟದಲ್ಲಿರುವ ಜನರ ಸಬಲೀಕರಣ ಮಾಡುವ ಉದ್ದೇಶ ಹೊಂದಿರುವ ನಮಗೆ ತಾಯಿ ಚಾಮುಂಡೇಶ್ವರಿಯು ಆಶೀರ್ವದಿಸಲಿ ಎಂದರು.

ಗತ ವೈಭವ ನೆನಪಿಸುವ ಮೈಸೂರು ದಸರಾ ಮಹೋತ್ಸವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಿರುವುದು ಹೆಮ್ಮೆ ಎನಿಸಿದೆ. ರೈತರು, ▸ 4ನೇ ಪುಟಕ್ಕೆ

ರಾಷ್ಟ್ರಪತಿಗಳು ಧರಿಸಿದ್ದು ಮೈಸೂರು ರೇಷ್ಮೆ ಸೀರೆ



ಮೈಸೂರು: ಮೈಸೂರು ರೇಷ್ಮೆ ಸೀರೆ ಧರಿಸಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನಾಡಿನ ವಿಶೇಷ ಗೌರವಕ್ಕೆ ಪಾತ್ರರಾದರು. ಚಿನ್ನದ ಝರಿವುಳ್ಳ ಬಿಳಿ ರೇಷ್ಮೆ ಸೀರೆ ಧರಿಸಿ ಆಗಮಿಸಿದ್ದ ರಾಷ್ಟ್ರಪತಿಗಳು ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಉದ್ಘಾಟಿಸಿದರು. ಅವರಿಗಾಗಿಯೇ ವಿಶೇಷವಾಗಿ ಮೈಸೂರಿನ ಸಿಲ್ಕ್ ಫ್ಯಾಕ್ಟರಿಯಲ್ಲಿ ನೇಯ್ದ ಸೀರೆ ಇದು. ಸೆ.22ರಂದು ದೆಹಲಿಗೆ ತೆರಳಿ ರಾಷ್ಟ್ರಪತಿ ಭವನದಲ್ಲಿ ಅವರಿಗೆ ಆಹ್ವಾನ ನೀಡಿದ್ದಾಗ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದ ನಿಯೋಗ, ಫಲತಾಂಬೂಲದೊಂದಿಗೆ 70,000 ರೂ. ಬೆಲೆಯ ಈ ರೇಷ್ಮೆ ಸೀರೆಯನ್ನು ದ್ರೌಪದಿ ಮುರ್ಮು ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಅಪ್ಪಟ ರೇಷ್ಮೆ ಮತ್ತು ಚಿನ್ನದ ಎಳೆಗಳನ್ನು ಬಳಸಿ ನೇಯ್ಗೆ ಮಾಡಲಾಗಿದ್ದ, ಅವರ ಅಚ್ಚುಮೆಚ್ಚಿನ ಬಿಳಿ ಬಣ್ಣದ ರೇಷ್ಮೆ ಸೀರೆಯನ್ನು ಸಮರ್ಪಿಸಲಾಗಿತ್ತು. ಅದೇ ಸೀರೆಯನ್ನು ಧರಿಸಿ ಮೈಸೂರಿಗೆ ಬಂದು ನವರಾತ್ರಿ ಉತ್ಸವ ಉದ್ಘಾಟಿಸಿದ ಮುರ್ಮು, ನಾಡಿನ ಜನರಲ್ಲಿ ಸಂತಸ ಹಾಗೂ ಹೆಮ್ಮೆ ತಂದರು.

ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್

● ಮೈಸೂರು ಅರಮನೆಯಲ್ಲಿ ನವರಾತ್ರಿ ಸಡಗರ ● ಕೆಲವೇ ಮಂದಿಗಷ್ಟೇ ದರ್ಬಾರ್ ದರ್ಶನ





ಅಂಬಾವಿಲಾಸ ಅರಮನೆ ದರ್ಬಾರ್ ಹಾಲ್‌ನಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸಿದರು. ಅವರ ಪತ್ನಿ ತ್ರಿಷಿಕಾ ಸಂಪ್ರದಾಯದಂತೆ ಪತಿಯ ಪಾದಕ್ಕೆ ಪುಷ್ಪಾರ್ಚನೆ ನೆರವೇರಿಸಿದ್ದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಸೆ.26(ಎಂಟಿವೈ)– ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಹಲವು ಧಾರ್ಮಿಕ ಕಾರ್ಯದಲ್ಲಿ ಪ್ರಮುಖ ಆಚರಣೆ ಖಾಸಗಿ ದರ್ಬಾರ್ ಸೋಮವಾರ ಆರಂಭವಾಯಿತು. ನವರಾತ್ರಿಯ ಮೊದಲ ದಿನವಾದ ಸೋಮವಾರ ಬೆಳಗ್ಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿವಿಧ ಧಾರ್ಮಿಕ ಕೈಂಕರ್ಯಗಳಲ್ಲಿ ಪಾಲ್ಗೊಂಡು, ರತ್ನಖಚಿತ ಸಿಂಹಾಸನರೂಢರಾಗಿ ಗಮನ ಸೆಳೆದರು. ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸೋಮವಾರ ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ನಡೆದ ನವರಾತ್ರಿಯ ವಿವಿಧ ಪೂಜಾ ಕೈಂಕರ್ಯಗಳಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ್ ಒಡೆಯರ್ ಪಾಲ್ಗೊಂಡರಲ್ಲದೆ, ಯದು ವಂಶದ ಸಾಂಪ್ರದಾಯಿಕ ಆಚರಣೆಗಳಲ್ಲಿ ಮಹತ್ವದ ಖಾಸಗಿ ದರ್ಬಾರ್‌ನಲ್ಲಿ ಯದುವೀರ್ ಸಿಂಹಾಸನರೂಢರಾಗಿ ದರ್ಬಾರ್ ನಡೆಸಿದರು. ನವರಾತ್ರಿ ಪೂಜಾ ಮಹೋತ್ಸವಕ್ಕಾಗಿ ▸ 3ನೇ ಪುಟಕ್ಕೆ

ಸಿಎಫ್‌ಟಿಆರ್‌ಐನಲ್ಲಿ ವೈವಿಧ್ಯಮಯ ಆಹಾರೋತ್ಪನ್ನ ಪ್ರದರ್ಶನ

■ ಆಹಾರ ತಯಾರಿಕೆಯ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಸಹ ಆಯೋಜನೆ ■ ಸಿಎಸ್‌ಐಆರ್ 81ನೇ ಸಂಸ್ಥಾಪನಾ ದಿನದ ಪ್ರಯುಕ್ತ 2 ದಿನಗಳ ಪ್ರದರ್ಶನ ವೀಕ್ಷಣೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ

ಮೈಸೂರು,ಸೆ.26(ಪಿಎಂ)– 'ಆಹಾರ ತಂತ್ರಜ್ಞಾನ ; ಉದ್ಯಮ ಸಂಪರ್ಕ' ಶೀರ್ಷಿಕೆಯಡಿ ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ವತಿಯಿಂದ ಏರ್ಪಡಿಸಿರುವ ಎರಡು ದಿನಗಳ ಆಹಾರೋತ್ಪನ್ನ, ಆಹಾರ ತಯಾರಿಕೆಯ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗೆ ಸೋಮವಾರ ಚಾಲನೆ ದೊರೆಯಿತು.

ಸಿಎಸ್‌ಐಆರ್ (ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್) 81ನೇ ಸಂಸ್ಥಾಪನಾ ದಿನದ ಪ್ರಯುಕ್ತ ಸಂಸ್ಥೆ ಆವರಣದಲ್ಲಿ ಈ ಪ್ರದರ್ಶನ ಹಮ್ಮಿಕೊಂಡಿದ್ದು, 'ಮುಕ್ತ ದಿನ'ದ ಶೀರ್ಷಿಕೆಯಡಿ ಪ್ರದರ್ಶನದಲ್ಲಿನ ಆಹಾರೋತ್ಪನ್ನ ಹಾಗೂ ಆಹಾರ ತಯಾರಿಕೆಯ ಯಂತ್ರೋಪಕರಣಗಳ ವೀಕ್ಷಣೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಸಿಎಫ್‌ಟಿಆರ್‌ಐ ಆಹಾರ ತಂತ್ರಜ್ಞಾನ ಅಳವಡಿಸಿಕೊಂಡಿರುವ 20 ಆಹಾರೋತ್ಪನ್ನ ಕಂಪನಿಗಳು ಇಲ್ಲಿ ತಲಾ ಒಂದು ಮಳಿಗೆ ತೆರೆದು ತಮ್ಮ ಆಹಾರ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಮಾಡುತ್ತಿವೆ. ಈ ಮಳಿಗೆಗಳಲ್ಲಿ ತೆಂಗಿನಕಾಯಿ ಉತ್ಪನ್ನ, ಮಶ್ರೂಮ್ ಸೂಪ್ ಮಿಕ್ಸ್, ಡ್ರೈ ಫ್ರೂಟ್ಸ್, ಅರಿಶಿನ ಪುಡಿ, ಕಾಫಿ ಪುಡಿ, ರಾಗಿ ಹಿಟ್ಟು ಸೇರಿದಂತೆ ವೈವಿಧ್ಯಮಯವಾದ ಪೌಷ್ಟಿಕ ಆಹಾರ ಉತ್ಪನ್ನಗಳನ್ನು ಕಾಣಬಹುದು. ಸಿಎಫ್‌ಟಿಆರ್‌ಐನ ಆಹಾರ ಉತ್ಪನ್ನಗಳ ಪ್ರದರ್ಶನದ ಮಳಿಗೆ ಕೂಡ ಇದ್ದು, ಇಲ್ಲಿ ಇತ್ತೀಚೆಗೆ ಆವಿಷ್ಕಾರಗೊಳಿಸಿದ ಆಹಾರೋತ್ಪನ್ನಗಳು ಗಮನ ಸೆಳೆಯುತ್ತಿವೆ. ಮುಂದಿನ ದಿನಗಳಲ್ಲಿ ಅವು ಕೂಡ ಮಾರುಕಟ್ಟೆಗೆ ಲಗ್ಗೆ ಇಡಲಿವೆ.

ಅಲ್ಲದೆ, ಮೊಬೈಲ್ ಆಹಾರ ಸಂಸ್ಕರಣೆ ಮತ್ತು ಪ್ರದರ್ಶನ ಘಟಕ (ಬಸ್‌ನಲ್ಲಿ ವಿನ್ಯಾಸ) ಇಲ್ಲಿನ ಪ್ರಮುಖ ಆಕರ್ಷಣೆಯಲ್ಲಿ ಒಂದಾಗಿದೆ. ಜೊತೆಗೆ ಯಂತ್ರೋಪಕರಣ ಪ್ರದರ್ಶನ ವಿಭಾಗದಲ್ಲಿ 12 ಆಹಾರ ತಯಾರಿಕಾ ಯಂತ್ರಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿದೆ. ದೋಸೆ ಮಾಡುವ ಯಂತ್ರ, ರಾಗಿ ಮುದ್ದೆ ತಯಾರಿಕಾ ಯಂತ್ರ, ಕಡಲೆ ಬೀಜ ಮತ್ತು ಕಾಫಿ ಬೀಜ ಹುರಿಯುವ ಯಂತ್ರಗಳು (ಸ್ಪೌಟೆಡ್ ಬೆಡ್ ರೋಸ್ಟರ್) ಗಮನ ಸೆಳೆಯುತ್ತಿವೆ.

ಉದ್ಘಾಟನೆ: ಮೈಸೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಪ್ರದರ್ಶನಕ್ಕೆ ಚಾಲನೆ ನೀಡಿದರು. ಅಲ್ಲದೆ, ಪ್ರದರ್ಶನದಲ್ಲಿರುವ ಮಳಿಗೆಗಳು ಹಾಗೂ ಅಲ್ಲಿನ ಆಹಾರ ಪದಾರ್ಥಗಳ ವಿವರ ಒಳಗೊಂಡ ಕೈಪಿಡಿ ಯನ್ನೂ ಇದೇ ವೇಳೆ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ನಮ್ಮ ಆರೋಗ್ಯ ಮತ್ತು ಸದೃಢತೆಯಲ್ಲಿ ಪೌಷ್ಟಿಕ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಮಧುಮೇಹ, ರಕ್ತದೊತ್ತಡ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ದೂರವಿಡುವಲ್ಲಿ ಉತ್ತಮ ಆಹಾರ ಪದ್ಧತಿ ಅನುಸರಿಸುವುದು ಅತ್ಯಗತ್ಯ. ಉತ್ತಮ ಆಹಾರ ಪದ್ಧತಿ, ಸುತ್ತಮುತ್ತಲಿನ ಪರಿಸರ, ವ್ಯಾಯಾಮ, ಒತ್ತಡ ನಿಯಂತ್ರಣ ನಮ್ಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಲಿವೆ ಎಂದರು.

ಗುಣಮಟ್ಟದ ಮತ್ತು ಪೌಷ್ಟಿಕ ಆಹಾರದ ಸೇವನೆ ನಮ್ಮ ದೈಹಿಕ ಯೋಗಕ್ಷೇಮಕ್ಕೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಸಿಎಫ್‌ಟಿಆರ್‌ಐ ಆಹಾರ ವಿಜ್ಞಾನ ಮತ್ತು ಸಂಶೋಧನೆಯಲ್ಲಿ ಅಸಾಧಾರಣ ಸೇವೆ ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಿಎಫ್‌ಟಿಆರ್‌ಐನ ಮುಖ್ಯ ವಿಜ್ಞಾನಿಯೂ ಆದ ಪ್ರಭಾರ ನಿರ್ದೇಶಕ ಡಾ.ಹೆಚ್.ಎಸ್.ಸತೀಶ್, ಈ ಪ್ರದರ್ಶನದ ಮೂಲ ಉದ್ದೇಶ ಸಾರ್ವಜನಿಕರಿಗೆ ಸಿಎಫ್‌ಟಿಆರ್‌ಐ ಕಾರ್ಯವೈಖರಿ ಬಗ್ಗೆ ಪರಿಚಯಿಸಿ, ಅವರಲ್ಲಿ ಉದ್ಯಮಶೀಲತೆ ಪ್ರೇರೇಪಿಸುವುದಾಗಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಆಹಾರ ತಂತ್ರಜ್ಞಾನದ ಬಗ್ಗೆ ಉತ್ತೇಜನ ನೀಡುವುದೂ ಆಗಿದೆ. ವರ್ಷಕ್ಕೆ ಇಲ್ಲವೇ ಎರಡು ವರ್ಷಕ್ಕೆ ಸಂಸ್ಥೆಯಲ್ಲಿ ಈ ರೀತಿಯ ಪ್ರದರ್ಶನ ಆಯೋಜಿಸಲಾಗುತ್ತದೆ ಎಂದರು. ಸಂಸ್ಥೆಯ ವಿಜ್ಞಾನಿಗಳಾದ ಡಾ.ಬಿ.ವಿ. ಸತ್ಯೇಂದ್ರರಾವ್, ಡಾ.ಎನ್.ಕೆ.ರಸ್ತೋಗಿ, ಡಾ.ಮಾದವನಾಯ್ಡು, ಡಾ.ಉಮೇಶ್ ಹೆಬ್ಬಾರ್ ಸೇರಿದಂತೆ ಸಂಸ್ಥೆಯ ಸಿಬ್ಬಂದಿ, ವಿವಿಧ ಕಂಪನಿಗಳ ಪ್ರತಿನಿಧಿಗಳು ಹಾಜರಿದ್ದರು.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಹಮ್ಮಿಕೊಂಡಿರುವ ಆಹಾರೋತ್ಪನ್ನ ಪ್ರದರ್ಶನಕ್ಕೆ ಚಾಲನೆ ನೀಡಿದ ಶ್ರೀ ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಮಳಿಗೆಗಳಲ್ಲಿನ ಆಹಾರ ಪದಾರ್ಥಗಳನ್ನು ವೀಕ್ಷಿಸಿದರು.



ದೋಸೆ ಮಾಡುವ ಯಂತ್ರ ವೀಕ್ಷಿಸಿದ ವಿದ್ಯಾರ್ಥಿಗಳು.



ಫ್ರೂಟ್ ಮಿಲ್ ಯಂತ್ರ.

ಸ್ಪೌಟೆಡ್ ಬೆಡ್ ರೋಸ್ಟರ್



ಆಹಾರ ತಯಾರಿಕಾ ಯಂತ್ರಗಳ ಪ್ರಾತ್ಯಕ್ಷಿಕೆಯಲ್ಲಿ ಸ್ಪೌಟೆಡ್ ಬೆಡ್ ರೋಸ್ಟರ್ ಹೆಚ್ಚು ಗಮನ ಸೆಳೆಯುತ್ತಿದೆ. ಈ ಯಂತ್ರದ ಮೂಲಕ ಕಡಲೇ ಬೀಜ ಹುರಿಯುವ ಪ್ರಕ್ರಿಯೆ ನಡೆಸುತ್ತಿದ್ದ ಸಂಸ್ಥೆಯ ಫುಡ್ ಇಂಡಸ್ಟ್ರಿ ವಿಭಾಗದ ಹಿರಿಯ ತಂತ್ರಜ್ಞ ಎಂ.ಶಿವಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಡಲೇ ಬೀಜ ಅಥವಾ ಕಾಫಿ ಬೀಜ ಹುರಿಯುವ ಪ್ರಕ್ರಿಯೆಯು ಈ ಯಂತ್ರದಲ್ಲಿ ಬಹುಬೇಗನೆ ಆಗಲಿದೆ ಎಂದರು.

ಗಂಟೆಗೆ 30 ಕೆಜಿ ಕಡಲೇ ಬೀಜ ಅಥವಾ ಕಾಫಿ ಬೀಜವನ್ನು ಈ ಯಂತ್ರದಲ್ಲಿ ಹುರಿಯಬಹುದು. ಇದರ ಮತ್ತೊಂದು ವಿಶೇಷವೆಂದರೆ, ಕಾಳುಗಳು ಕರಕಲು ಆಗದೇ ಒಂದೇ ರೀತಿಯಲ್ಲಿ ಹುರಿದಿರುತ್ತವೆ. ಇದು ನಮ್ಮ ಸಂಸ್ಥೆಯ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಿರುವ ಯಂತ್ರ. ಇದರ ಬಳಕೆಯಿಂದ ಸಮಯ ಹಾಗೂ ಶ್ರಮ ಉಳಿತಾಯ ಆಗಲಿದೆ ಎಂದು ವಿವರಿಸಿದರು.

ಇಂದಿನಿಂದ ಲೋಕಾಯುಕ್ತ ಅಹವಾಲು ಸ್ವೀಕಾರ

ಮೈಸೂರು,ಸೆ.26–ಕರ್ನಾಟಕ ಲೋಕಾಯುಕ್ತ ಮೈಸೂರು ಜಿಲ್ಲಾ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ಸೆ.27ರಿಂದ ಅ.20ರವರೆಗೆ ಸಾರ್ವಜನಿಕರಿಂದ ಅಹವಾಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸೆ.27ರಂದು ಪಿರಿಯಾಪಟ್ಟಣ ತಾಲೂಕಿನ, ಪಿರಿಯಾಪಟ್ಟಣ ತಾಪಂ ಆವರಣ, ಸೆ.30ರಂದು ಎಚ್‌ಡಿ ಕೋಟೆ ಡಾ. ಅಂಬೇಡ್ಕರ್ ಭವನ, ಅ.1ರಂದು ಸಾಲಿಗ್ರಾಮ ತಾಲೂಕಿನ ಸಾಲಿಗ್ರಾಮ ಪ್ರವಾಸಿ ಮಂದಿರ, ಅ.6ರಂದು ಟಿ.ನರಸೀಪುರ ತಾಲೂಕಿನ ಟಿ.ನರಸೀಪುರ ಗುರುಭವನ ಆವರಣ, ಅ.10ರಂದು ಮೈಸೂರು ನಗರ ಮತ್ತು ತಾಲೂಕಿನ ಮೈಸೂರು ನಗರ ಪಾಲಿಕೆ ಸಭಾಂಗಣ, ಅ.12ರಂದು ಹುಣಸೂರು ನಗರಸಭೆ ಆವರಣ, ಅ.14ರಂದು ಕೆ.ಆರ್.ನಗರ ತಾಲೂಕಿನ ಕೆ.ಆರ್.ನಗರ ಪಿ.ಡಬ್ಲ್ಯೂಡಿ ಅತಿಥಿ ಗೃಹ, ಅ.17ರಂದು ನಂಜನಗೂಡು ತಾಲೂಕಿನ ನಂಜನಗೂಡು ತಾಲೂಕು ಕಚೇರಿ ಆವರಣ, ಅ.20ರಂದು ಸರಗೂರು ತಾಲೂಕಿನ ಪಿಡಬ್ಲ್ಯೂಡಿ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ನವರಾತ್ರಿ: ಇಂದಿನಿಂದ ವಿಶೇಷ ಪ್ರವಚನ ಮಾಲಿಕೆ

ಮೈಸೂರು,ಸೆ.26–ನವರಾತ್ರಿ ಹಬ್ಬದ ಪ್ರಯುಕ್ತ ಮೈಸೂರಿನ ಅಗ್ರಹಾರದ ಹತ್ತಿರವಿರುವ ರೋಗಮೋಚನ ಧನ್ವಂತರಿ ಸನ್ನಿಧಾನ ಉತ್ತರಾದಿ ಮಠದಲ್ಲಿ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಅನುಗ್ರಹದೊಂದಿಗೆ ಸೆ.27ರಿಂದ ಅ.5ರವರೆಗೆ ಸಂಜೆ 6.30ರಿಂದ 7.30ರವರೆಗೆ 'ಶ್ರೀನಿವಾಸ ಕಲ್ಯಾಣ' ಹಾಗೂ 'ವೆಂಕಟಾಚಲ ಮಹಿಮೆ' ವಿಷಯದ ಕುರಿತು ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ ಅವರಿಂದ ವಿಶೇಷ ಪ್ರವಚನ ಮಾಲಿಕೆಯನ್ನು ಏರ್ಪಡಿಸಲಾಗಿದೆ. ಮಾಹಿತಿಗೆ ಮೊಬೈಲ್ 9448147459 ಸಂಪರ್ಕಿಸುವುದು.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.26–ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಮೈಸೂರು ತಾಲೂಕಿನ ಬೀರಿಹುಂಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 6000 ರೂ. ಗೌರವಧನದ ಆಧಾರದ ಮೇರೆಗೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಸ್ಥಳೀಯ ಸಮರ್ಥ ವಿಕಲಚೇತನ ವ್ಯಕ್ತಿಗಳು ಅರ್ಜಿ ನಮೂನೆಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಅರ್ಜಿಗಳನ್ನು ಪಡೆದು ಅ.3ರೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ:6360483829 ಸಂಪರ್ಕಿಸಬಹುದು.

ಮೇಲ್ವರ್ಗವನ್ನು ಕಾಂಗ್ರೆಸ್ ಸದಾ ತುಳಿಯುತ್ತಾ ಬಂದಿದೆ

ಕಾಂಗ್ರೆಸ್ ವಿರುದ್ಧ ಮತ್ತೊಂದು 'ಅಸ್ತ್ರ' ಪ್ರಯೋಗಿಸಿದ ಸಚಿವ ಡಾ.ಸುಧಾಕರ್



ಬೆಂಗಳೂರು, ಸೆ. 26 (ಕೆಎಂಶಿ)– ಮೇಲ್ವರ್ಗದವರನ್ನು ಕಾಂಗ್ರೆಸ್ ಸದಾ ಕಾಲ ತುಳಿಯುತ್ತಲೇ ಬಂದಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಸುಧಾಕರ್ ಇಂದಿಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೀರಶೈವರು ಎಂಬ ಕಾರಣಕ್ಕಾಗಿ ಅವರ ಮೇಲೆ ಭ್ರಷ್ಟಾಚಾರದ ಆರೋಪಗಳನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಬಿಜೆಪಿ ಹೇಳಿಕೆ ನೀಡಿದ ಬೆನ್ನಲ್ಲೇ ಸುಧಾಕರ್ ಈ ಹೇಳಿಕೆ ನೀಡಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಗೆ ಆರೇಳು ತಿಂಗಳ ಮುನ್ನವೇ ಜಾತಿ ರಾಜಕಾರಣವನ್ನು ಮುಂದಿಡಲು ಬಿಜೆಪಿ ಪ್ರಯತ್ನಿಸುತ್ತಿರುವುದಕ್ಕೆ ಸುಧಾಕರ್ ಪುಷ್ಟಿ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಕಾಶ್ಮೀರದಲ್ಲಿ ಚುನಾವಣೆ ನಡೆಸಿದರು, ಈಶಾನ್ಯ ರಾಜ್ಯಗಳಿಗೆ ಆರು ಸಾವಿರ ಕೋಟಿ ರೂ. ಅನುದಾನ ಕೊಟ್ಟಿದ್ದರು. ಅವರ ಅಧಿಕಾರವನ್ನೇ ಕಾಂಗ್ರೆಸ್ ಸಹಿಸಿಕೊಳ್ಳಲಿಲ್ಲ. ಅವರು ರಷ್ಯಾ ಪ್ರವಾಸದಲ್ಲಿದ್ದಾಗ ಒಂದು ಸಣ್ಣ ಕಾರಣಕ್ಕಾಗಿ ದೇವೇಗೌಡರ ಆಡಳಿತಕ್ಕೆ ನೀಡಿದ್ದ ಬೆಂಬಲವನ್ನು ಆ ಪಕ್ಷ ಹಿಂತೆಗೆದುಕೊಂಡಿತ್ತು. 26 ವರ್ಷ ಕಳೆದರೂ ಕಾಂಗ್ರೆಸ್ ಇನ್ನೂ ಕಾರಣ ಕೊಟ್ಟಿಲ್ಲ. ಇದು ಕೇವಲ ದೇವೇಗೌಡರಿಗೆ ಅಷ್ಟೇ ಅಲ್ಲ ಕರ್ನಾಟಕದಲ್ಲಿ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ, ರಾಜಶೇಖರಮೂರ್ತಿ ಅವರಿಗೆ ಏನು ಮಾಡಿದ್ದರು, ಅದನ್ನೇ ಬೊಮ್ಮಾಯಿ ಅವರಿಗೆ ಮಾಡಲು ಕಾಂಗ್ರೆಸ್ ಪಕ್ಷ ಹೊರಟಿದೆ ಎಂದು ದೂರಿದರು.

ಎಸ್.ಎಂ.ಕೃಷ್ಣ ಅವರ ಆಡಳಿತವನ್ನು ಸಹಿಸಿಕೊಳ್ಳಲಿ. ನಂತರ ಅವರಿಗೆ ಮತ್ತೆ ದೊರಕಬೇಕಾದ ಮುಖ್ಯಮಂತ್ರಿ ಹುದ್ದೆಯನ್ನು ತಪ್ಪಿಸಿದರು. ಅಷ್ಟೇ ಅಲ್ಲ ಅವರನ್ನು ರಾಜಕೀಯವಾಗಿ ಮೂಲೆಗುಂಪು ಮಾಡಿದ್ದೇ ಕಾಂಗ್ರೆಸ್ ಪಕ್ಷ. ಈಗ ಬೊಮ್ಮಾಯಿ ಅವರನ್ನು ಕಾಂಗ್ರೆಸ್ ಟಾರ್ಗೆಟ್ ಮಾಡಿದೆ. ನಮ್ಮ ಮುಖ್ಯಮಂತ್ರಿಯವರು 15 ಗಂಟೆಗಳ ಕಾಲ ರಾಜ್ಯದ ಕೆಲಸ ಮಾಡುತ್ತಾರೆ. ಇವರನ್ನೇ ಮುಂದಿಟ್ಟುಕೊಂಡು ಹೋದರೆ ನಮಗೆ ಕಷ್ಟ ಎಂದು ಭ್ರಷ್ಟಾಚಾರದ ಆರೋಪಗಳ ಸುರಿಮಳೆ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ರಕ್ತದಾನದ ಮೂಲಕ ಎನ್‌ಎಸ್‌ಎಸ್ ದಿನ ಆಚರಣೆ



ಮೈಸೂರು,ಸೆ.26(ಆರ್‌ಕೆಬಿ)–ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕಗಳು ಕಾಲೇಜುಗಳಲ್ಲಿ ನಿರಂತರವಾಗಿ ಸ್ವಯಂಪ್ರೇರಿತ ರಕ್ತದಾನದಂತಹ ಕಾರ್ಯ ಕೈಗೊಳ್ಳಲು ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಎನ್‌ಎಸ್‌ಎಸ್ ದಿನಾಚರಣೆ ಅಂಗವಾಗಿ ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಭಾನುವಾರ ಮೈಸೂರಿನ ಲಯನ್ಸ್ ಜೀವಧಾರ ಸೆಂಟರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕಗಳು ಸಂಯುಕ್ತವಾಗಿ ಆಯೋಜಿಸಿದ್ದ ರಕ್ತದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆಯ ಮನೋಭಾವ ಹೆಚ್ಚಿಸಲು ಎನ್‌ಎಸ್‌ಎಸ್‌ನ ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ. ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡಿದಂತಾಗಿದೆ ಎಂದು ಹೇಳಿದರು.

ವಿವಿಧ ಕಾಲೇಜುಗಳ ಎನ್‌ಎಸ್‌ಎಸ್ ಕಾರ್ಯಕ್ರಮಗಳ ಸಂಯೋಜನಾಧಿಕಾರಿಗಳಾದ ಟಿಟಿಎಲ್ ಕಾಲೇಜಿನ ಗಿರೀಶ್, ಕಾವೇರಿ ಫಸ್ಟ್ ಗ್ರೇಡ್ ಕಾಲೇಜಿನ ಕೆ.ವಿ. ನಾಗಭೂಷಣ್, ಎಂಎಂಕೆ–ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಬಿ.ಎನ್. ಮಾರುತಿ ಪ್ರಸನ್ನ, ಎನ್‌ಐಇ ಕಾಲೇಜಿನ ಎಂ.ರಾಜೇಶ್, ಟೆರಿಷಿಯನ್ ಕಾಲೇಜಿನ ಬಿ.ರೇಖಾ, ಎಟಿಎಂಇ ಕಾಲೇಜಿನ ಎ.ಎನ್. ರುದ್ರೇಶ್, ಕುವೆಂಪುನಗರದ ಫಸ್ಟ್ ಗ್ರೇಡ್ ಕಾಲೇಜಿನ ಎಸ್.ಜಿ.ರಾಮದಾಸರೆಡ್ಡಿ, ಎನ್‌ಐಇ ಕಾಲೇಜಿನ ಸಿ.ಕೆ.ವನಮಾಲಾ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಅಧಿಕಾರಿಗಳಾದ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಲಯನ್ಸ್ ಬ್ಲಡ್ ಬ್ಯಾಂಕ್ ವೈದ್ಯಾಧಿಕಾರಿ ಡಾ.ರಾಧಾ, ಜಿಲ್ಲಾ ಐಸಿಟಿಸಿ ಮೇಲ್ವಿಚಾರಕಿ ಸವಿತಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಡಾ.ಮಮತಾ, ರಶ್ಮಿ, ಸುರೇಶ್, ಪ್ರಭು, ವಿಜಿ, ಸೂರಜ್, ಸದಾಶಿವ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.09.2022 ಮಂಗಳವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ದ್ವಿತೀಯ ನಕ್ಷತ್ರ : ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ:** ಹಿರಿಯ ಅರಿವು, ಆರೋಗ್ಯಕರ ವಯಸ್ಸಾದ ಮತ್ತು ನವ ಯೌವನ ಪಡೆಯುವುದು ಹೇಗೆ ಕುರಿತು ವಿಚಾರ ಸಂಕಿರಣ, ಸ್ಥಳ: ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಎಂ.ಜಿ.ರಸ್ತೆ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಶಾಖೆ:** ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಎಫ್‌ಪಿಎ ಇಂಡಿಯಾ ಆಸ್ಪತ್ರೆ ಆವರಣ, ಬೆಳಗ್ಗೆ 10.30ರಿಂದ.

■ **ಜೆಎಸ್‌ಎಸ್ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ:** ಹಿರಿಯ ನಾಗರಿಕರಿಗೆ ಅರಿವು ಕಾರ್ಯಾಗಾರ, ಆರೋಗ್ಯ ಶಿಬಿರ, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9ಕ್ಕೆ.

■ **ಅಪೂರ್ವ ಸ್ನೇಹ ಬಳಗ:** ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಪ್ರವಾಸಿಗರಿಗೆ ಸಿಹಿ ವಿತರಿಸಿ ಗುಲಾಬಿ ನೀಡುವ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸ್ಥಳ: ಮೈಸೂರು ಮೃಗಾಲಯದ ಆವರಣ, ಬೆಳಗ್ಗೆ 11ಕ್ಕೆ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ಅಂತಾರಾಷ್ಟ್ರೀಯ ವನ್ಯಜೀವಿ ಛಾಯಾಚಿತ್ರ ಕಲಾವಿದ ಕೃಪಾಕರ–ಸೇನಾನಿ, ರುಡ್‌ಸೆಟ್ ಸಂಸ್ಥೆ ನಿರ್ದೇಶಕ ಕೆ.ಎನ್.ಆನಂದ ನಾಯಕ, ಪ್ರಾಚಾರ್ಯ ಸಿ.ಕಣ್ಮೇಶ್, ಪ್ರಾಸ್ತಾವಿಕ ನುಡಿ: ಪ್ರಾಚಾರ್ಯ ಮಹದೇವಶೆಟ್ಟಿ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ:** ಪದೋನ್ನತಿ ಹೊಂದಿರುವ ಉಪನಿರ್ದೇಶಕರಿಗೆ, ನಿವೃತ್ತ ಪ್ರಾಂಶುಪಾಲರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಕೆ.ಶ್ರೀನಿವಾಸಮೂರ್ತಿ, ಉಪನಿರ್ದೇಶಕ ಮರಿಸ್ವಾಮಿ, ಪದೋನ್ನತಿ ಉಪನಿರ್ದೇಶಕ ಮೃಣಾಲ್ ಸಾಹುಕಾರ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಶಿವೇಗೌಡ, ಸ್ಥಳ: ಡಿ.ಬನುಮಯ್ಯ ಪದವಿಪೂರ್ವ ಕಾಲೇಜು, ಮಧ್ಯಾಹ್ನ 3ಕ್ಕೆ.

ದಸರಾ ಕಾರ್ಯಕ್ರಮಗಳು



■ **ರಂಗೋಲಿ ಚಿತ್ತಾರ:** ಉದ್ಘಾಟನೆ: ಗಣಿ ಮತ್ತು ಭೂ ವಿಜ್ಞಾನ ಸಚಿವ ಆಚಾರ್ ಹಾಲಪ್ಪ ಬಸಪ್ಪ, ಸ್ಥಳ: ಅಂಬಾವಿಲಾಸ ಅರಮನೆ ಹಿಂಭಾಗ, ಬೆಳಗ್ಗೆ 7.30ಕ್ಕೆ

■ **ಯೋಗ ವಾಹಿನಿ :** ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಸ್ಥಳ: ಜವರೇಗೌಡ ಪಾರ್ಕ್, ಸರಸ್ವತಿಪುರಂ, ಬೆಳಗ್ಗೆ 8ಕ್ಕೆ.

■ **ಪುನೀತ್ ಚಲನಚಿತ್ರೋತ್ಸವ :** ಉದ್ಘಾಟನೆ : ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಸ್ಥಳ : ಐನಾಕ್ಸ್ ಮಾಲ್ ಆಫ್ ಮೈಸೂರು, ಬೆಳಗ್ಗೆ 10ಕ್ಕೆ.

■ **ಮಹಿಳಾ ಉದ್ಯಮಿಗಳು ತಯಾರಿಸಿರುವ ವಸ್ತುಪ್ರದರ್ಶನ :** ಉದ್ಘಾಟನೆ : ಗಣಿ ಮತ್ತು ಭೂ ವಿಜ್ಞಾನ ಸಚಿವ ಆಚಾರ್ ಹಾಲಪ್ಪ ಬಸಪ್ಪ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 11ಕ್ಕೆ.

■ **ವೈದ್ಯಕೀಯ ವಸ್ತುಪ್ರದರ್ಶನ :** ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 2ಕ್ಕೆ.


■ **ಅರಮನೆ ಆವರಣ :** ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು, ಕಂಸಾಳೆ ಮಹೇಶ್ ಮತ್ತು ತಂಡದಿಂದ ಕಂಸಾಳೆ, ಇಂದೂ ನಾಗರಾಜು ಮತ್ತು ಲಕ್ಷ್ಮೀನಾಗರಾಜು ತಂಡದಿಂದ ಭಕ್ತಿ ಸಂಗೀತ, ಲಲಿತಾರ್ಣವ ಲಯಾಭಿನಯ ಕಲ್ಚರಲ್ ಫೌಂಡೇಷನ್‌ನಿಂದ ನೃತ್ಯರೂಪಕ, ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಅರಮನೆ ಆವರಣ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಶೀಲಾವತಿ ಕೊಳಂಬೆ, 6.20 ದಸರಾ ವಿಶೇಷ ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್. ಎಸ್., 9.10 ಹರಿಕೇಶಾಂಗಿ ಮಾತಂಗಿ–ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ–ಮೈಸೂರು ಎಸ್.ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬ ಜಯತಿ–ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಗೀತೆಗಳನ್ನಾಧರಿಸಿದ ವಿಶೇಷ ಸರಣಿ **ಮಧ್ಯಾಹ್ನ:** 12.05 ವನಿತಾವಿಹಾರ–ಸ್ತ್ರೀ ಚೇತನ, ವಸ್ತ್ರ ವಿನ್ಯಾಸಕಿ ಹಾಗೂ ಮೈಸೂರು ಸಾಹಿತ್ಯ ಹಬ್ಬದ ಸಂಯೋಜಕಿ ಶುಭಾ ಸಂಜಯ್ ಅರಸ್ ಅವರೊಂದಿಗೆ ಮಾತುಕತೆ, 12.30 ದೇವರನಾಮ–ಎಸ್.ಜಾನಕಿ, ಬಾಲಕೃಷ್ಣ ಪ್ರಸಾದ್, 12.45 ಚಳುವಳಿ ಇಲ್ಲದ ಸಾಹಿತ್ಯ–ಪ್ರೊ.ಎಲ್. ಚಂದ್ರಶೇಖರ್ ಅವರೊಡನೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಜಂಬೂ ಸವಾರಿ–ಮೈಸೂರು ದಸರಾ ಆನೆ ಸ್ಟೋರಿ, ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ– ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 3.00 ಆರ್.ಕೆ.ರಾಘವನ್–ವೀಣಾವಾದನ, 4.00 ಕಥಾ ಕಾಲಕ್ಷೇಪ 'ಗಿರಿಜಾ ಕಲ್ಯಾಣ', ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.30 ಚಾಮುಂಡಿ ಹಬ್ಬ–ಜನಪದ ನಾಲಗೆಯಲ್ಲಿ ಮೈಸೂರು ದೇವತೆ, ಲೇಖನ ಡಾ–ಪಿ.ಕೆ.ರಾಜಶೇಖರ್, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ಕೃಷಿರಂಗ–ಕಿಸಾನ್‌ವಾಣಿ, ಹೈನುರಾಸುಗಳಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು ಡಾ.ಎಲ್.ಆರ್.ಕರಿಬಸವರಾಜು ಅವರೊಂದಿಗೆ ಸಂದರ್ಶನ, 9.05 ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಬೆಂಗಳೂರಿನಲ್ಲಿ ಭಾಗವಹಿಸಲಿರುವ ಸಮಾರಂಭಗಳ ಬಾನುಲಿ ವರದಿ, 9.30 ಡಾ. ಸಿ.ಎ. ಶ್ರೀಧರ್ – ವೇಣುವಾದನ, 10.00 ಕಾವ್ಯವಾಚನ

ಶರನ್ನವರಾತ್ರಿ ಕಾರ್ಯಕ್ರಮ



■ **ಶ್ರೀ ರಾಜ ರಾಜೇಶ್ವರಿ ದೇವಸ್ಥಾನ:** ಶರನ್ನವರಾತ್ರಿ. ಕುಂಕುಮ ಅಲಂಕಾರ, ರಾಜರಾಜೇಶ್ವರಿ ಭಜನಾ ಮಂಡಳಿಯವರಿಂದ ಲಲಿತಾ ಸಹಸ್ರನಾಮ, ವೀಣಾವಾದನ: ವಿದುಷಿ ಶ್ರೀಮತಿ ಲತಾ ರಾಮರಾವ್ ಅವರಿಂದ ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ, ಬೆಳಗ್ಗೆಯಿಂದ.

■ **ತ್ರಯೀನ್ಯಾಸ್:** ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಚಂದ್ರಘಂಟಾ, ಶ್ರೀಜಾತವೇದ ದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ನವದುರ್ಗಾ ಹೋಮ ಮತ್ತು ಶ್ರೀಮೃತ್ಯುಂಜಯ ಅಮೃತೇಶ್ವರೀ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ:** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಮಾಹೇಶ್ವರಿ ವೃಷಭವಾಹಿನಿ ಅಲಂಕಾರ, ಶ್ರೀಸೂಕ್ತ ಹೋಮ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಮಾಹೇಶ್ವರಿ ವೃಷಭವಾಹಿನಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6 ಗಂಟೆಯಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದುಷಿ ಮಾನಸ ನಯನ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಗಜ ಮಹಾಲಕ್ಷ್ಮಿ ಅಲಂಕಾರ, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದ್ವಾನ್ ರಯಸ್ ಬಲೆ ಖಾನ್ ಮತ್ತು ವಿದ್ವಾನ್ ಹಪೀಸ್ ಬಲೆ ಖಾನ್ ಅವರಿಂದ ಹಿಂದೂಸ್ಥಾನಿ ಸಂಗೀತ ದ್ವಂದ್ವ ಗಾಯನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ರಾಜರಾಜೇಶ್ವರಿ ಪೂಜೆ, ಹೋಮ, ಪೂರ್ಣಾಹುತಿ, ಮ. 3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ ನವಗ್ರಹ ಮೃತ್ಯುಂಜಯ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸಾಂಸ್ಕೃತಿಕ ಕಾರ್ಯಕ್ರಮ, ಸಂಸ್ಕೃತ ಕೋವಿದ ವಿದ್ವಾನ್ ಡಾ.ಟಿ.ವಿ. ಸತ್ಯನಾರಾಯಣ ಅವರಿಂದ ಪ್ರವಚನ 'ನವರಾತ್ರಿ ವೈಭವ' ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಮೈಸೂರಿನ ಆಯಾಮ ರಂಗ ತಂಡದಿಂದ ಪೋಲೀಸರಿದ್ದಾರೆ ಎಚ್ಚರಿಕೆ ನಾಟಕ ಪ್ರದರ್ಶನ, ನಿರ್ದೇಶನ: ನಾಗಾರ್ಜುನ ಆರಾಧ್ಯ, ರಚನೆ : ಪಿ. ಲಂಕೇಶ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ವಿದ್ವಾನ್ ಬೇ.ನಾ. ವಿಜಯೇಂದ್ರಚಾರ್ಯರಿಂದ ಶ್ರೀ ರಾಘವೇಂದ್ರ ವಿಜಯ ಕುರಿತು ಪ್ರವಚನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವ, ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30ರಿಂದ.

ಮೈಸೂರು ಮಿತ್ರ

ಅರಮನೆ ಅಂಗಳದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ





ಅರಮನೆ ಸಾಂಸ್ಕೃತಿಕ ವೇದಿಕೆಯಲ್ಲಿ ಮೊದಲ ದಿನದ ಆರಂಭಿಕ ಕಾರ್ಯಕ್ರಮ 'ಅಮೃತ ಭಾರತಿಗೆ ಕನ್ನಡದಾರತಿ' ನೃತ್ಯರೂಪಕವನ್ನು ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್ ಮತ್ತಿತರರ ಗಣ್ಯರು ವೀಕ್ಷಿಸಿದರು.

ಒಂದನೇ ಪುಟದಿಂದ

'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿ, ಸತ್ಕರಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿ, ಎಲ್ಲರಿಗೂ ದಸರಾ ಶುಭಾಶಯ ತಿಳಿಸಿದ ವಿದುಷಿ ಲಲಿತ್ ಜೆ.ರಾವ್, ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ನಮ್ಮ ಗುರುಗಳಾದ ಉಸ್ತಾದ್ ಫಯಾಜ್ ಖಾನ್ ಅವರು ಸಂಗೀತ ಕಛೇರಿ ನೀಡಿದ್ದರು. ಆ ವೇಳೆ ಮಹಾರಾಜರು 'ಅಫ್ತಾಬ್-ಎ-ಮೌಸಿಕಿ(ಸಂಗೀತದ ಸೂರ್ಯ)' ಬಿರುದು ನೀಡಿ ಅಭಿನಂದಿಸಿದ್ದರಂತೆ. ಆಗಿನಿಂದ ಗುರುಗಳನ್ನು ಆ ಬಿರುದಿನೊಂದಿಗೆ ಗುರುತಿಸಲಾಗಿತ್ತು. ಇದೀಗ ಅರಮನೆ ಅಂಗಳದಲ್ಲೇ ಕರ್ನಾಟಕ ಸರ್ಕಾರದಿಂದ ನಾನು ಪ್ರಶಸ್ತಿ ಸ್ವೀಕರಿಸಿದ್ದಕ್ಕೆ ಅತೀವ ಸಂತೋಷವಾಗಿದೆ. ಮಾತನಾಡುವುದಕ್ಕೂ ಆಗುತ್ತಿಲ್ಲ ಎಂದು ಭಾವುಕರಾಗಿ ನುಡಿದರು.

ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ ಮಾತನಾಡಿ, ಸಂಗೀತ ಕ್ಷೇತ್ರದ ಸಾಧಕಿ, ಸಂಗೀತ ಮತ್ತು ಸಂಸ್ಕೃತಿ ಬಗ್ಗೆ ಅಪಾರ ಒಲವಿರುವ ಹಿರಿಯರಾದ ಲಲಿತ್ ಜೆ.ರಾವ್ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ನೀಡಿದ್ದು ಅತ್ಯಂತ ಹೆಮ್ಮೆಯ ಸಂಗತಿ. ಈ ಬಾರಿ ದಸರಾ ಮಹೋತ್ಸವ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು. ಹಿಂದೆ ರಾಷ್ಟ್ರಪತಿಗಳು ದಸರಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರಬಹುದು. ಆದರೆ ರಾಷ್ಟ್ರಪತಿಯವರೇ ದಸರಾಗೆ ಚಾಲನೆ ನೀಡಿದ್ದು ಇದೇ ಮೊದಲು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಸಲ್ಲಿಸಿ, ದಸರಾ ಉದ್ಘಾಟಿಸುವ ಮೂಲಕ ಶ್ರೇಷ್ಠ ಪರಂಪರೆ ಜಗತ್ತಿನಲ್ಲಿ ಮತ್ತಷ್ಟು ಪಸರಿಸಲು ಕಾರಣವಾಗಿದೆ. ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸೂಕ್ತ ವಾತಾವರಣ ಸೃಷ್ಟಿಸುತ್ತವೆ. ನಮ್ಮ ನಾಡಿನ ಸಮೃದ್ಧ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಈ ಸಂಕಲ್ಪ ಮನೆ ಮನೆಯಲ್ಲೂ ಅನುಷ್ಠಾನವಾಗಬೇಕು ಎಂದು ಆಶಿಸಿದರು.

ದುಷ್ಟಶಕ್ತಿ ಬಗ್ಗೆ ಎಚ್ಚರ: ಸ್ವಾತಂತ್ರ್ಯ ಅಮೃತಮಹೋತ್ಸವದ ಸಂದರ್ಭದಲ್ಲಿ ಹಿಂದಿರುಗಿ ನೋಡಿದರೆ ದೇಶದಲ್ಲಿ ಸಾಕಷ್ಟು ಸಾಧನೆಗಳಾಗಿದೆ. ಹಾಗೆಯೇ ಸಾಕಷ್ಟು ಸವಾಲುಗಳೂ ನಮ್ಮ ಮುಂದಿವೆ. ಶತ್ರು ರಾಷ್ಟ್ರಗಳ ದುಷ್ಟಶಕ್ತಿಯನ್ನು ಸಂಹರಿಸಲು ಗಡಿಗಳಲ್ಲಿ ಸೈನಿಕರಿದ್ದಾರೆ. ಆದರೆ ನಮ್ಮ ನಡುವೆಯೇ ಇರುವ ದುಷ್ಟಶಕ್ತಿಗಳ ಬಗ್ಗೆ ಎಚ್ಚರವಾಗಿರಬೇಕು. ಭಾರತೀಯ ಪಾರಂಪರಿಕ, ಸಾಂಸ್ಕೃತಿಕ ವಿಚಾರಗಳ ವಿರುದ್ಧ, ಶ್ರೀರಾಮ, ಭಗವದ್ಗೀತೆ, ಗೋವು ಸೇರಿದಂತೆ ಹಿಂದೂಗಳ ನಂಬಿಕೆ ಹಾಗೂ ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡುವ ದುಷ್ಟಶಕ್ತಿಗಳಿವೆ. ಉಗ್ರವಾದ, ನಕ್ಸಲ್‌ವಾದ ಯಾವುದೋ ಸಂಘಟನೆಗಳ ಹೆಸರಿನಲ್ಲಿ ತಲೆ ಎತ್ತುತ್ತಿವೆ. ಈ ಬಗ್ಗೆ ನಿರ್ಲಕ್ಷ್ಯರಾದರೆ ಸ್ವಾತಂತ್ರ್ಯ ಸವಿಯನ್ನು ಮುಂದಿನ ಪೀಳಿಗೆಗೆ ಉಳಿಸುವುದು ಕಷ್ಟವಾಗುತ್ತದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾರಂಗದಲ್ಲೂ ಮೌಲ್ಯ ಕುಸಿಯುತ್ತಿದೆ. ಈ ವಿಷವರ್ತುಲದಿಂದ ಹೊರಬಂದು ಪ್ರೀತಿ-ವಿಶ್ವಾಸದಿಂದ ಬದುಕುವ ವಾತಾವರಣ ಸೃಷ್ಟಿಯಾಗಬೇಕು. ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಹೊರಬಂದು ಭಾರತದ ಶ್ರೇಷ್ಠ ಪರಂಪರೆ ಮರುಕಳಿಸಬೇಕು. ಮಾನವ ಸಹಜ ದೋಷಗಳನ್ನು ನಿವಾರಿಸಿಕೊಂಡು, ದುಷ್ಟಶಕ್ತಿಗಳ ಬಗ್ಗೆ ಜಾಗೃತರಾಗಿ ಆದರ್ಶ ಸಮಾಜದ ನಿರ್ಮಾಣಕ್ಕೆ ಎಲ್ಲರೂ ಬದ್ಧರಾಗಬೇಕು. ಇದಕ್ಕೆ ಈ ದಸರಾ ಮಹೋತ್ಸವ ಪ್ರೇರಣೆಯಾಗಲಿ ಎಂದು ನುಡಿದರು.

ಮಾದರಿ ರಾಜಪರಂಪರೆ: ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಮಾತನಾಡಿ, ಸ್ವಾತಂತ್ರ್ಯಪೂರ್ವದಲ್ಲಿದ್ದ 500ಕ್ಕೂ ಹೆಚ್ಚು ರಾಜಮನೆತನಗಳಲ್ಲಿ ಮೈಸೂರು ರಾಜಪರಂಪರೆ ಮಾದರಿಯಾಗಿದೆ. ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಪರಿಚಯಿಸಿದ್ದರು. ಹಾಗೆಯೇ ಮೈಸೂರಿನಲ್ಲಿ ರಾಜರ ಆಳ್ವಿಕೆಯಿದ್ದರೂ ಅದು ಪ್ರಜಾತಂತ್ರ ವ್ಯವಸ್ಥೆಯಂತೆ ನಡೆದಿತ್ತು ಎಂದು ಬಣ್ಣಿಸಿದರು.

ವೈವಿಧ್ಯಮಯ ಕಾರ್ಯಕ್ರಮ: ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಈ ಬಾರಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಅ.2ರಂದು ಅರಮನೆ ಮುಂಭಾಗ ಸೂರ್ಯೋದಯದಿಂದ ಸೂರ್ಯಾಸ್ತಮನದವರೆಗೆ ಸುದೀರ್ಘ ಸಂಗೀತ ಕಾರ್ಯಕ್ರಮದಲ್ಲಿ ಮೂರು ತಲೆಮಾರಿನ ಕಲಾವಿದರು ರಸದೌತಣ ನೀಡಲಿದ್ದಾರೆ. ಪ್ರಧಾನಿ ಮೋದಿ ಅವರು ಇಲ್ಲಿ ಯೋಗ ದಿನಾಚರಣೆಯಲ್ಲಿ ಭಾಗಿಯಾದ ನಂತರ ಅರಮನೆಗೆ ಭೇಟಿ ನೀಡುವವರ ಸಂಖ್ಯೆ ದ್ವಿಗುಣವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮಹಾತ್ಮರ ಸ್ಮರಣೆ: ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ ಮಾತನಾಡಿ, ಮೈಸೂರು ರಾಜಪರಂಪರೆಯ 10ನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್, ಮಹಾರಾಣಿ ವಾಣಿ ವಿಲಾಸ ಸನ್ನಿಧಿ ಹೀಗೆ ರಾಜಮನೆತನದವರ ಸ್ಮರಿಸಿಕೊಳ್ಳದಿದ್ದರೆ ದಸರಾ ಉತ್ಸವ ಅಪೂರ್ಣವಾಗುತ್ತದೆ. ಇವರೊಂದಿಗೆ ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಪಿಟೀಲು ಚೌಡಯ್ಯ ಅವರಂತಹ ಮಹಾನ್ ಸಂಗೀತ ಸಾಧಕರನ್ನೂ ನೆನಪಿಸಿಕೊಳ್ಳಬೇಕು. ಕನ್ನಡ ಇರುವುದೇ ಸಾಂಸ್ಕೃತಿಕ ವೈಭವದಿಂದ, ಇದಕ್ಕೆ ದಸರಾ ಉತ್ಸವ ವೇದಿಕೆಯಾಗಿದೆ ಎಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದಲ್ಲಿ ಮೇಯರ್ ಎಂ.ಶಿವಕುಮಾರ್, ಉಪ ಮೇಯರ್ ಜಿ.ರೂಪಾ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಸಾಂಸ್ಕೃತಿಕ ಉಪ ಸಮಿತಿ ಅಧ್ಯಕ್ಷ ಸೋಮಸುಂದರ್ ಮತ್ತಿತರರು ಉಪಸ್ಥಿತರಿದ್ದರು.

ಅಮೃತ ಭಾರತಿಗೆ ಕನ್ನಡದಾರತಿ ಮೂಲಕ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ

ಅರಮನೆ ಸಾಂಸ್ಕೃತಿಕ ವೇದಿಕೆಯ ಮೊದಲ ಕಾರ್ಯಕ್ರಮ ಅತ್ಯಾಕರ್ಷಕ ಹಾಗೂ ಅರ್ಥಪೂರ್ಣವಾಗಿತ್ತು. ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ದಸರಾ ವೇದಿಕೆಯಲ್ಲೂ ಸಂಭ್ರಮಿಸುವಂತಹ ಕಾರ್ಯಕ್ರಮ ಪ್ರಸ್ತುತಗೊಂಡಿತು. ಬೆಂಗಳೂರಿನ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್ ಸಂಸ್ಥೆಯ ಮಂಜುಳಾ ಪರಮೇಶ್ ನೇತೃತ್ವದ ಕಲಾವಿದರ ತಂಡ 'ಅಮೃತ ಭಾರತಿಗೆ ಕನ್ನಡದಾರತಿ' ನೃತ್ಯರೂಪಕವನ್ನು ಅಮೋಘವಾಗಿ ಪ್ರದರ್ಶಿಸಿದರು. 40ಕ್ಕೂ ಹೆಚ್ಚು ನೃತ್ಯಗಾರ್ತಿಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹನೀಯರ ಕೊಡುಗೆ, ತ್ಯಾಗ, ಬಲಿದಾನವನ್ನು ಕಣ್ಣಿಗೆ ಕಟ್ಟಿದರು. ಒಂದು ಗಂಟೆ ಕಾಲ ಪ್ರಸ್ತುತಗೊಂಡ ಈ ಅತ್ಯಾಕರ್ಷಕ ವಿಶೇಷ ಕಾರ್ಯಕ್ರಮವನ್ನು ನೆರೆದಿದ್ದವರು ಅತ್ತಿತ್ತ ದೃಷ್ಟಿಹಾಯಿಸದೆ ಕಣ್ತುಂಬಿಕೊಂಡು ಸಂಭ್ರಮಿಸಿದರು.

ಸಂಗೀತ ನಿನಾದ: ಹಿರಿಯ ಸುಗಮ ಸಂಗೀತ ಕಲಾವಿದೆ ಹೆಚ್.ಆರ್.ಲೀಲಾವತಿ ಹಾಗೂ ತಂಡದ ಕಲಾವಿದರು ಅರಮನೆ ವೇದಿಕೆಯಲ್ಲಿ ಸಂಗೀತದ ಸುಧೆ ಹರಿಸಿದರು. ಹಲವು ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿದರು. ಸುಗಮ ಸಂಗೀತದ ಅಲೆಯಲ್ಲಿ ತೇಲಿದ ಪ್ರೇಕ್ಷಕರು ಚಪ್ಪಾಳೆ ಮೂಲಕ ಗೀತ ಗಾಯನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಗೀತ ವಿದ್ವಾನ್ ಲಲಿತ್ ಜೆ.ರಾವ್ ಪರಿಚಯ

ಬೆಂಗಳೂರಿನಲ್ಲಿ ನೆಲೆಸಿರುವ ವಿದುಷಿ ಲಲಿತ್ ಜೆ.ರಾವ್ ಅವರು ಹಿಂದೂಸ್ತಾನಿ ಸಂಗೀತದ ಮೇರು ಕಲಾವಿದರು. 1942ರ ನವೆಂಬರ್ 6ರಂದು ಜನಿಸಿದ ಇವರು 3 ವರ್ಷವಿದ್ದಾಗಲೇ ಸಂಗೀತ ಲೋಕಕ್ಕಿಳಿದವರು. ಫಯಾಜ್ ಖಾನ್ ಅವರ ಬಳಿ ಸಂಗೀತಾಭ್ಯಾಸ ಮಾಡಿ, ಬೆಂಗಳೂರಿನ ಸಂಗೀತ ಕಛೇರಿಯಲ್ಲಿ ಮೊದಲ ಬಾರಿ ಪಾಲ್ಗೊಂಡಿದ್ದರು. ದೇಶದ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿನಿಯಾಗಿದ್ದರೂ ಸಂಗೀತವನ್ನೇ ಉಸಿರಾಗಿಸಿಕೊಂಡರು. ಆಕಾಶವಾಣಿ, ದೂರದರ್ಶನದ ಉನ್ನತ ಶ್ರೇಣಿಯ ಕಲಾವಿದರಾಗಿ ಅಪಾರ ಸಾಧನೆ ಮಾಡಿದ್ದು, ಆಗ್ರಾ-ಘರಾನಾ ಶೈಲಿಯ ಗಾಯನದಲ್ಲಿ ಪ್ರಸಿದ್ಧರು.

ದೇಶ-ವಿದೇಶದಲ್ಲಿ ಅನೇಕ ಸಂಗೀತ ಕಛೇರಿ ನೀಡಿದ್ದಾರೆ. ಸಿಯಾಟೆಲ್‌ನ ವಾಷಿಂಗ್ಟನ್ ವಿಶ್ವವಿದ್ಯಾಲಯಕ್ಕೆ ಆಗ್ರಾ ಘರಾನಾದ ಸುಮಾರು 500 ಬಂಧಿಷ್‌ಗಳನ್ನು ಹಾಡಿ ಧ್ವನಿ ಮುದ್ರಿಸಿಕೊಟ್ಟಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಸರ್ವತೋಮುಖ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ಇದೀಗ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಂಪ್ರದಾಯ ಮರೆತ ಸಂಸ್ಕೃತಿ ಸಚಿವರು...

ದಸರಾ ಉದ್ಘಾಟನೆ ದಿನದಂದೇ ಅರಮನೆ ಅಂಗಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಸಮಾರಂಭವೂ ಮಹತ್ವದ್ದಾಗಿದೆ. ಈವರೆಗೆ ಮುಖ್ಯಮಂತ್ರಿಗಳೇ ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರತಿಷ್ಠಿತ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಯನ್ನು ಪ್ರದಾನ ಮಾಡುವುದು ರೂಢಿಗತವಾಗಿದೆ. ಆದರೆ ಇಂದು ಹುಬ್ಬಳ್ಳಿ-ಧಾರವಾಡದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮವಿದ್ದ ಹಿನ್ನೆಲೆಯಲ್ಲಿ ದಸರಾ ಉದ್ಘಾಟನೆ ನಂತರ ಮುಖ್ಯಮಂತ್ರಿ ಬೊಮ್ಮಾಯಿ ಅವರು ತೆರಳಿದರು. ಅವರ ಅನುಪಸ್ಥಿತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾದರೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ನಂತರ ಇಂಧನ ಸಚಿವರೂ ಆದ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ದೀಪಾಲಂಕಾರ ಉದ್ಘಾಟನೆಗೆಂದು ತೆರಳಿದರು. ಸುಮಾರು 40 ನಿಮಿಷದ ಬಳಿಕ ಸಚಿವ ಸೋಮಶೇಖರ್ ವಾಪಸ್ಸಾದರೂ ಸುನಿಲ್ ಕುಮಾರ್ ಬರಲೇ ಇಲ್ಲ. ಅವರ ಬರುವಿಕೆಗಾಗಿ ಕಾದರೂ ಬರಲೇ ಇಲ್ಲ. ಅವರ ಗೈರು ಖಚಿತವಾದ ನಂತರ ವೇದಿಕೆಯಲ್ಲಿದ್ದ ಗಣ್ಯರೇ ಪ್ರಶಸ್ತಿ ಪ್ರದಾನ ಮಾಡಿದರು. ಸಂಸ್ಕೃತಿ ಸಚಿವರು ಸಂಪ್ರದಾಯ ಮರೆತಿದ್ದಕ್ಕೆ ನೆರೆದಿದ್ದ ಜನ ಬೇಸರಿಸಿದ್ದು ಕಂಡು ಬಂದಿತು. ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್ ಸೇರಿದಂತೆ ರಾಮದಾಸ್ ಹೊರತುಪಡಿಸಿ ಉಳಿದೆಲ್ಲಾ ಆಹ್ವಾನಿತರು ಗೈರಾಗಿದ್ದರು.

ಯದುವೀರ್ ಒಡೆಯರ್ ಖಾಸಗಿ ದರ್ಬಾರ್‌ನ ದೃಶ್ಯಾವಳಿ







ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್

ಒಂದನೇ ಪುಟದಿಂದ

ಅರಮನೆಯ ನೆಲಮಾಳಿಗೆಯಲ್ಲಿದ್ದ ಚಿನ್ನದ ಸಿಂಹಾಸನದ ಬಿಡಿ ಭಾಗಗಳನ್ನು ಸೆ.20ರಂದು ದರ್ಬಾರ್ ಹಾಲ್‌ನಲ್ಲಿ ಜೋಡಿಸಲಾಗಿತ್ತು. ಸಿಂಹಾಸನಕ್ಕೆ ಇಂದು ಮುಂಜಾನೆಯೇ ಅರಮನೆಯಲ್ಲಿ ವಿಶೇಷ ಪೂಜಾ ಕೈಂಕರ್ಯ ಜರುಗಿದವು. ಬಳಿಕ ಯದುವೀರ್ ಅವರಿಗೆ ಎಣ್ಣೆಶಾಸ್ತ್ರ ನಡೆಯಿತು. ಬೆಳಗ್ಗೆ 6.15ರಿಂದ 6.30ರೊಳಗೆ ಸಲ್ಲುವ ಶುಭ ಗಳಿಗೆಯಲ್ಲಿ ಸಿಂಹಾಸನಕ್ಕೆ 'ಸಿಂಹ' ಜೋಡಿಸಲಾಯಿತು. ಬಳಿಕ ಅರಮನೆಯ ಚಾಮುಂಡಿತೊಟ್ಟಿಯಲ್ಲಿ ಬೆಳಿಗ್ಗೆ 9.45ರಿಂದ 10.05ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕಂಕಣಧಾರಣೆ ಮಾಡಲಾಯಿತು. ನಂತರ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ವಾಣಿ ವಿಲಾಸ ಸನ್ನಿಧಾನದಲ್ಲಿ ಕಂಕಣಧಾರಣೆ ಮಾಡಲಾಯಿತು. ಬೆ.10.45ಕ್ಕೆ ಕೆಲ ಪೂಜಾ ಕಾರ್ಯ ಜರುಗಿದ ನಂತರ ಪಟ್ಟದ ಆನೆ ಧನಂಜಯ, ನಿಶಾನೆ ಆನೆ ಭೀಮಾ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆಯನ್ನು ಮಂಗಳವಾದ್ಯದೊಂದಿಗೆ ಕಳಸಹೊತ್ತ ಮುತ್ತೈದೆಯರೊಂದಿಗೆ ಸವಾರಿ ತೊಟ್ಟಿಗೆ ಕರೆತರಲಾಯಿತು. ನಂತರ ಅರಮನೆಯ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ಹಾಗೂ ಶ್ರೀ ಕೋಡಿ ಕಾಲಭೈರವ ಸ್ವಾಮಿ ದೇವಾಲಯದ ಕಳಸದೊಂದಿಗೆ ದೇವರನ್ನು ತರಲಾಯಿತು. ಅರಮನೆಯ ಪುರೋಹಿತರು ಕಂಕಣ ಧರಿಸಿದ್ದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಹರಸಿದರು.

ಬೆಳಗ್ಗೆ 11.15ಕ್ಕೆ ಸವಾರಿ ತೊಟ್ಟಿಯಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದರ್ಬಾರ್ ಹಾಲ್‌ಗೆ ಕಟ್ಟಿಗೆಯವರು, ದೀವಟಿಗೆಯವರು ಸಕಲ ಬಿರುದು ಬಾವಲಿಯೊಂದಿಗೆ ಬಹುಪರಾಕ್ ಹಾಕಿ ದರ್ಬಾರ್ ಹಾಲ್‌ಗೆ ಕರೆತಂದರು. ದರ್ಬಾರ್ ಹಾಲ್‌ನಲ್ಲಿ ಕಳಸ ಪೂಜೆ ಸೇರಿದಂತೆ ನಾನಾ ಧಾರ್ಮಿಕ ಕೈಂಕರ್ಯ ನಡೆದವು. ನಂತರ ಸಿಂಹಾಸನಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಯದುವೀರ ಒಡೆಯರ್, ಸಿಂಹಾಸನದ ಸಿಂಹಕ್ಕೆ ಹಾರ ಹಾಕಿ ಪೂಜೆ ಸಲ್ಲಿಸಿದ ಬಳಿಕ ಮಧ್ಯಾಹ್ನ 12.15ರಿಂದ 12.25ರೊಳಗೆ ಸಿಂಹಾಸನದಲ್ಲಿ ವಿರಾಜಮಾನರಾದರು.

ನಂತರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಮೇಲುಕೋಟೆಯ ಶ್ರೀ ಚೆಲುವ ನಾರಾಯಣಸ್ವಾಮಿ ದೇವಾಲಯ, ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯ, ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳು ಸೇರಿದಂತೆ 23 ದೇವಾಲಯಗಳಿಂದ ತಂದಿದ್ದ ಪ್ರಸಾದವನ್ನು ನೀಡಿ, ತೀರ್ಥ ಪ್ರೋಕ್ಷಣೆ ಮಾಡಿ ಶುಭ ಕೋರಲಾಯಿತು.

ಎಲ್ಲಾ ದೇವಾಲಯಗಳಿಂದ ಆಗಮಿಸಿದ್ದ ಅರ್ಚಕರಿಂದ ಪ್ರಸಾದ ವಿನಿಯೋಗವಾದ ಬಳಿಕ ಸಿಂಹಾಸನದ ಮುಂದೆ ಪರದೆಯನ್ನು ಬಿಟ್ಟು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ದೃಷ್ಟಿ ತೆಗೆಯಲಾಯಿತು. ನಂತರ ಯದುವೀರ್ ಅವರು ಸಿಂಹಾಸನದ ಮೇಲೆ ನಿಂತು ಸೆಲ್ಯೂಟ್ ಹೊಡೆದು ಹೊಗಳುಭಟರು ಹಾಗೂ ದೀವಟಿಗೆಕಾರರಿಂದ ಗೌರವವಂದನೆ ಹಾಗೂ ಬಹುಪರಾಕ್ ಪಡೆದು ಸವಾರಿ ತೊಟ್ಟಿಯತ್ತ ತೆರಳಿದರು. ಅಲ್ಲಿ ತ್ರಿಷಿಕಾ ಕುಮಾರಿ ಒಡೆಯರ್, ಯದುವೀರರ ಪಾದ ಪೂಜೆ ಮಾಡಿದರು. ಈ ವೇಳೆ ಪ್ರಮೋದಾದೇವಿ ಒಡೆಯರ್, ಅವರ ಮೊಮ್ಮಗ ಆದ್ಯವೀರ ನರಸಿಂಹರಾಜ ಒಡೆಯರ್ ಹಾಗೂ ರಾಜವಂಶದ ಪ್ರಮುಖರು ಉಪಸ್ಥಿತರಿದ್ದು, ಖಾಸಗಿ ದರ್ಬಾರ್‌ಗೆ ಸಾಕ್ಷಿಯಾದರು. ಅಂತಿಮವಾಗಿ ಮಧ್ಯಾಹ್ನ 1.50ರಿಂದ 2.05ರೊಳಗೆ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಚಾಮುಂಡಿತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ತಂದು ಪೂಜಿಸಿದ ಬಳಿಕ ದರ್ಬಾರ್ ಸಂಪನ್ನಗೊಂಡಿತು.

ಪೊಲೀಸ್ ಬ್ಯಾಂಡ್‌ನವರು ನುಡಿಸಿದ ಕೀರ್ತನೆಗಳ ಸಂಗೀತ ಖಾಸಗಿ ದರ್ಬಾರ್‌ಗೆ ಕಳೆಕಟ್ಟಿತ್ತು. ಯದುವಂಶದ ರಾಷ್ಟ್ರಗೀತೆಯಾದ ಕಾಯೋ ಶ್ರೀ ಗೌರಿ ಗೀತೆಯನ್ನು ನುಡಿಸಿದ ವೇಳೆ ಸಿಂಹಾಸನದಲ್ಲಿ ಆಸೀನರಾಗಿದ್ದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಎದ್ದು ನಿಂತು ಸೆಲ್ಯೂಟ್ ಹೊಡೆದು ಗಮನ ಸೆಳೆದರು.

ಬಿಗಿ ಬಂದೋಬಸ್ತ್: ಖಾಸಗಿ ದರ್ಬಾರ್ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೂ ಅರಮನೆಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಬಂದೋಬಸ್ತ್ ಏರ್ಪಡಿಸಿದ್ದರಿಂದ ಅರಮನೆ ಆವರಣ ಬಿಕೋ ಎನ್ನುತ್ತಿತ್ತು. ರಾಜಮನೆತನದ ಸಂಬಂಧಿಗಳು ಸೇರಿದಂತೆ ಬೆರಳೆಣಿಕೆಯಷ್ಟು ಜನರು ಮಾತ್ರ ಖಾಸಗಿ ದರ್ಬಾರ್ ವೀಕ್ಷಿಸಲು ಅವಕಾಶ ನೀಡಲಾಗಿತ್ತು.



ದರ್ಬಾರ್ ಹಾಲ್‌ಗೆ ದೀವಟಿಗೆದಾರರು, ಹೊಗಳುಭಟರು ಬಿರುದು ಬಾವಲಿಂಯೊಂದಿಗೆ ಯದುವೀರ ಅವರನ್ನು ಕರೆತರುತ್ತಿರುವುದು.



ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರೊಂದಿಗೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ್ ನರಸಿಂಹರಾಜ ಒಡೆಯರ್.

ಅರಮನೆ ಆವರಣದಲ್ಲೊಂದು ಪುಷ್ಪಕಾಶಿ!

ಮಹಾಮಹನೀಯರಿಗೆ ಪ್ರತಿಕೃತಿಗಳ ಮೂಲಕ ಪುಷ್ಪನಮನ





ಮೈಸೂರು,ಸೆ.26(ಎಸ್‌ಬಿಡಿ)-ವಿಶ್ವವಿಖ್ಯಾತ ಅಂಬಾ ವಿಲಾಸ ಅರಮನೆ ಮುಂಭಾಗದ ಉದ್ಯಾನದಲ್ಲಿ ಸೃಷ್ಟಿಯಾಗಿರುವ ಪುಷ್ಪಲೋಕದಲ್ಲಿ ಹಲವು ಮಹನೀಯರಿಗೆ ಗೌರವ ಸಮರ್ಪಿಸಲಾಗಿದೆ. ಮೈಸೂರು ಅರಮನೆ ಮಂಡಳಿ ವತಿಯಿಂದ ಏರ್ಪಡಿಸಿರುವ ಫಲಪುಷ್ಪ ಪ್ರದರ್ಶನ ಈ ಬಾರಿ ವಿಶೇಷ ಹಾಗೂ ಅತ್ಯಾಕರ್ಷಕವಾಗಿದೆ. ಹೂಗಳಿಂದಲೇ ನಿರ್ಮಿಸಿರುವ ಸ್ವಾಗತ ಕಮಾನು ಮೂಲಕ ಉದ್ಯಾನಕ್ಕೆ ಹೆಜ್ಜೆ ಇಟ್ಟರೆ ಬಣ್ಣ ಬಣ್ಣದ ಪುಷ್ಪಲೋಕ ತೆರೆದುಕೊಳ್ಳುತ್ತದೆ. ಔಷಧೀಯ ಗಿಡಗಳು ಸೇರಿದಂತೆ ಎಲ್ಲಾ ರೀತಿಯ ಸಸ್ಯಗಳನ್ನೂ ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಒಂದು ಸುತ್ತು ಹಾಕುವಷ್ಟರಲ್ಲಿ ಕಣ್ಮನ ಉಲ್ಲಾಸಿತವಾಗುತ್ತದೆ.

ದೆಹಲಿಯ ಕೆಂಪುಕೋಟೆ, ದಸರಾ ಜಂಬೂಸವಾರಿ, ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಖಾಸಗಿ ದರ್ಬಾರ್ ಪುಷ್ಪರಾಶಿಯಲ್ಲಿ ಪಡಿಮೂಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜ ಒಡೆಯರ್, ಸರ್ದಾರ್ ವಲ್ಲಭಬಾಯ್ ಪಟೇಲ್, ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ಪಿಂಗಳಿ ವೆಂಕಯ್ಯ, ಸುಭಾಷ್ ಚಂದ್ರ ಬೋಸ್, ಕಿತ್ತೂರು ರಾಣಿ ಚೆನ್ನಮ್ಮ, ಕಾರ್ಗಿಲ್ ವಿಜಯ ದಿವಸ್, ಭಾರತೀಯ ವಾಯುಪಡೆ ಜೊತೆಯಲ್ಲಿ ಅಭಿನಂದನ್, ಭಾರತೀಯ ಭೂ ಸೇನೆ ಜೊತೆ ಜನರಲ್ ದಿವಂಗತ ಬಿಪಿನ್ ರಾವತ್, ಐಎನ್‌ಎಸ್ ವಿಕ್ರಾಂತ್ ನೌಕಾಪಡೆ ಪ್ರತಿಕೃತಿಗಳು ಅತ್ಯಾಕರ್ಷಕವಾಗಿವೆ.

ಈ ಬಾರಿ ದಸರಾ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಪ್ರತಿಮೆಯನ್ನು ನವಣೆ, ಸಜ್ಜೆ ಇನ್ನಿತರ ಸಿರಿಧಾನ್ಯಗಳಿಂದ ನಿರ್ಮಿಸಿರುವುದು ವಿಶೇಷವಾಗಿದೆ. ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರವನ್ನಿಟ್ಟು ಗೌರವ ಸಲ್ಲಿಸಲಾಗಿದೆ. ಕೆಂಪು-ಹಳದಿ ಗುಲಾಬಿ ಹೂಗಳಿಂದ 'ಐ ಲವ್ ಇಂಡಿಯಾ' ನಿರ್ಮಿಸಿ ಫೋಟೋ ತೆಗೆಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಕರ್ನಾಟಕ ಹಾಗೂ ಭಾರತದ ಭೂಪಟದ ಮುಂದೆಯೂ ಸೆಲ್ಫೀ ಕ್ಲಿಕ್ಕಿಸಿಕೊಳ್ಳಬಹುದು. ಮೈಸೂರು ರಾಜಪರಂಪರೆಯನ್ನು ಕಣ್ಣಿಗೆ ಕಟ್ಟುವ ಛಾಯಾಚಿತ್ರ ಪ್ರದರ್ಶನ, ಅತ್ಯಾಕರ್ಷಕ ಬೊಂಬೆಗಳ ಪ್ರದರ್ಶನ ಪುಷ್ಪ ಪ್ರದರ್ಶನದ ಮೆರುಗು ಹೆಚ್ಚಿಸಿವೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೋಮವಾರ ಸಂಜೆ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಿ, ಸುತ್ತು ಹಾಕಿ ಕಣ್ತುಂಬಿಕೊಂಡರು. ಶಾಸಕ ಎಸ್.ಎ.ರಾಮದಾಸ್, ಮೇಯರ್ ಶಿವಕುಮಾರ್, ಉಪಮೇಯರ್ ಜಿ.ರೂಪಾ, ಬಿಜೆಪಿ ವಿಭಾಗೀಯ ಉಸ್ತುವಾರಿ ಮೈ.ವಿ.ರವಿಶಂಕರ್, ವಕ್ತಾರ ಮಹೇಶ್, ಸ್ತಬ್ಧಚಿತ್ರ ಉಪಸಮಿತಿ ಉಪಾಧ್ಯಕ್ಷ ಜೋಗಿ ಮಂಜು, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಮತ್ತಿತರರು ಸಾಥ್ ನೀಡಿದರು.

ನಕ್ಕರೆ ಅದೇ ಸ್ವರ್ಗ

ಜ್ಯೋತಿಷಿ : ಹಾಗಿದ್ರೆ ನೀವು ನಿಮ್ಮ ಪತಿಯ ಭವಿಷ್ಯ ತಿಳಿದುಕೊಳ್ಳಲು ಬಯಸುತ್ತೀರಾ?

ಆಕೆ : ಇಲ್ಲ. ಅವರ ಭವಿಷ್ಯ ನನ್ನ ಕೈಯಲ್ಲೇ ಇದೆ. ಅವರ ಭೂತಕಾಲವನ್ನು ತಿಳಿದುಕೊಳ್ಳಲು ಬಯಸುವೆ.

ಮೈಸೂರು ಮಿತ್ರ

ಮಂಗಳವಾರ, 27 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮದುವೆ ದರ್ಪದ ಆಳ್ವಿಕೆಯಲ್ಲ, ಹೃದಯದ ಮಿಡಿತ –ಕೃಷ್ಣಮೂರ್ತಿ ಪುರಾಣಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕೊಡುವವನ ಕೈ ಅನುಗಾಲವೂ ಮೇಲೆಯೇ

ನಿಮ್ಮ ಪತ್ರಗಳು

ಬ್ಯಾಂಕ್‌ಗಳು ಸ್ಥಳೀಯ ಭಾಷೆಗೆ ಆದ್ಯತೆ ನೀಡಲಿ!

ಮಾನ್ಯರೆ,

ಬ್ಯಾಂಕ್‌ಗಳಲ್ಲಿ ಜನರ ಜತೆಗೆ ನೇರವಾಗಿ ವ್ಯವಹಾರ ಮಾಡುವವರಿಗೆ ಸ್ಥಳೀಯ ಭಾಷೆ ತಿಳಿದಿರಬೇಕು. ಹಿಂದಿ ಭಾಷೆ ತಿಳಿಯದೇ ಇದ್ದ ಗ್ರಾಹಕರು ದೇಶಭಕ್ತಿ ಹೊಂದಿಲ್ಲ ಎಂದು ಪರಿಗಣಿಸಬಾರದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬ್ಯಾಂಕ್‌ಗಳ ಆಡಳಿತ ಮಂಡಳಿಗಳಿಗೆ ಸೂಚಿಸಿರುವುದು ಸ್ವಾಗತಾರ್ಹವಾಗಿದೆ.

ಸ್ಥಳೀಯ ಭಾಷೆಗಳನ್ನು ತಿಳಿಯದೇ ಇರುವವರನ್ನು ಬ್ಯಾಂಕ್‌ನ ಶಾಖೆಗಳಲ್ಲಿ ಉದ್ಯೋಗದಲ್ಲಿ ಇರಿಸುವುದು ಔಚಿತ್ಯ ಅನಿಸದು. ಜೊತೆಗೆ ಬ್ಯಾಂಕ್‌ನ ಅಧಿಕಾರಿಗಳು ನಿಗದಿತ ಸ್ಥಳೀಯ ಭಾಷೆಯಲ್ಲಿಯೇ ಮಾತನಾಡಿ ಗ್ರಾಹಕರೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ಇದರಿಂದ ಬ್ಯಾಂಕ್ ವ್ಯವಸ್ಥೆಯ ಮೇಲೆ ನಂಬಿಕೆ ಇರಿಸಿ ವ್ಯವಹರಿಸುವ ಗ್ರಾಹಕನಿಗೆ ಹೆಚ್ಚು ಅನುಕೂಲವಾಗುತ್ತದೆ. ಏಕೆಂದರೆ ಬ್ಯಾಂಕ್‌ನಲ್ಲಿ ವ್ಯವಹರಿಸುವವರು ಎಲ್ಲರೂ ಅಕ್ಷರಸ್ಥರೇ ಆಗಿರುವುದಿಲ್ಲ. ಬಹುಪಾಲು ಜನರು ಅನಕ್ಷರಸ್ಥರೇ ಆಗಿರುತ್ತಾರೆ. ವೃದ್ಧಾಪ್ಯದಲ್ಲಿ ಸಿಗುವ ಪಿಂಚಣಿ ಹಾಗೂ ಮತ್ತದೋ ಕಾರಣಕ್ಕೆ ಬ್ಯಾಂಕ್‌ನಲ್ಲಿ ಖಾತೆ ತೆರೆದು ವ್ಯವಹರಿಸುತ್ತಿರುತ್ತಾರೆ. ಇವರಿಗೆ ಸ್ಥಳೀಯ ಭಾಷೆ ಬಿಟ್ಟು ಅನ್ಯಭಾಷೆ ಬಹುತೇಕರಿಗೆ ತಿಳಿಯದು ಹಾಗೂ ಬ್ಯಾಂಕ್‌ಗೆ ಬರುವ ಗ್ರಾಹಕರೆಲ್ಲರೂ ಬಹುಭಾಷಾ ಪಂಡಿತರು ಕೂಡ ಆಗಿರುವುದಿಲ್ಲ! ಹೀಗಾಗಿ ಭಾಷೆ ಗೊತ್ತಿಲ್ಲದ ಸಿಬ್ಬಂದಿ ಜೊತೆ ಅನಗತ್ಯ ಜಗಳ ಕಿರಿಕಿರಿ ಮಾಡಿಕೊಂಡು ತೊಂದರೆ ಪಡುವ ಬದಲು, ನಿಗದಿತ ಬ್ಯಾಂಕ್ ಶಾಖೆಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ವ್ಯವಹರಿಸಲು ಸಾಧ್ಯವಾಗದಿರುವ ಸಿಬ್ಬಂದಿ ಹಾಗೂ ಅಧಿಕಾರಿಯನ್ನು ಗ್ರಾಹಕರ ಜತೆಗಿನ ನೇರ ವ್ಯವಹಾರದಿಂದ ದೂರವಿಡುವುದೇ ಹೆಚ್ಚು ಸಮಂಜಸ.

ಇಷ್ಟಕ್ಕೂ ಬ್ಯಾಂಕ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸ್ಥಳೀಯ ಭಾಷೆ ಕಲಿಯಲು ಅಡ್ಡಿ ಏನಿದೆ? ಕರ್ಮ ಭೂಮಿಯಲ್ಲಿ ಅವರು ಇದ್ದು ಕೆಲಸ ಮಾಡುವಾಗ ಸ್ಥಳೀಯ ಭಾಷೆಯನ್ನು ಕಲಿಯಲೇಬೇಕಿರುವುದು ತುಂಬಾ ಅವಶ್ಯಕ ಹಾಗೂ ಅನಿವಾರ್ಯ. ಅಲ್ಲದೇ ಸ್ಥಳೀಯ ಭಾಷೆ ಅರಿಯದ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ಆ ಪ್ರದೇಶಕ್ಕೆ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳು ಹೇಗೆ ವರ್ಗಾಯಿಸುತ್ತಾರೆ ಎಂಬುದು ಕೂಡ ಅರ್ಥಹೀನ. ಈ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಲ್ಲಿ ಜನರ ಜತೆಗೆ ನೇರವಾಗಿ ವ್ಯವಹಾರ ಮಾಡುವವರು ಸ್ಥಳೀಯ ಭಾಷೆ ತಿಳಿದಿರಬೇಕಿರುವುದು ಹೆಚ್ಚು ಸೂಕ್ತ ಹಾಗೂ ಅವಶ್ಯಕ ಅನಿಸುತ್ತದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಸಂಭ್ರಮ ದಸರಾದಲ್ಲಿ ಇದು ಸರಿಯೇ?

ಮಾನ್ಯರೆ,

ನಾಡ ಹಬ್ಬ 'ಮೈಸೂರು ದಸರಾ' ಸೋಮವಾರ ಚಾಲನೆ ಪಡೆದಿದೆ. ಅತ್ಯಂತ ಸಂತೋಷದ ಸಂಗತಿ. ಆದರೆ ಉದ್ಘಾಟನಾ ಸಮಾರಂಭದಲ್ಲಿ ಮೈಸೂರಿನ ಜನಪ್ರತಿನಿಧಿಗಳಿಗೆ 'ಅವಮಾನ' ಮಾಡಿದಂತಿತ್ತು. ಮೈಸೂರಿನ ಪ್ರಥಮ ಪ್ರಜೆ ಮೇಯರ್ ಆಗಲೀ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಿಗಾಗಲೀ, ವೇದಿಕೆ ಮೇಲೆ ಅವಕಾಶ ಕಲ್ಪಿಸದೇ ಮೈಸೂರಿಗರಿಗೆ ಜಿಲ್ಲಾಡಳಿತ ಅವಮಾನ ಮಾಡಿದೆ ಅನ್ನಿಸಿತು.

ವೇದಿಕೆಯ ಮೇಲೆ ಮೈಸೂರಿನ ಪ್ರಥಮ ಪ್ರಜೆ ಇರಬೇಕೆಂಬ ಶಿಷ್ಟಾಚಾರ ಇಲ್ಲವೇ? ಅಧ್ಯಕ್ಷತೆ ವಹಿಸಬೇಕಾಗಿದ್ದ ಚಾಮುಂಡಿ ಕ್ಷೇತ್ರದ ಶಾಸಕರನ್ನು ಕೈಬಿಟ್ಟಿದ್ದೇಕೆ.

ಇನ್ನು ರಾಷ್ಟ್ರಪತಿಯವರಿಗೆ, ಮೈಸೂರಿನ ಮಲ್ಲಿಗೆ ಹಾರ ಹಾಕಿ, ಮೈಸೂರು ಸಿಲ್ಕ್ ಶಾಲು ಹೊದಿಸಿ ಗೌರವಿಸಬೇಕಾಗಿತ್ತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ಲಾಸ್ಟಿಕ್‌ನಿಂದ ತಯಾರಿಸಿದ ಹಾರ ಹಾಕಿದರೆ, ರಾಜ್ಯಪಾಲರು ಶಾಲನ್ನು ರಾಷ್ಟ್ರಪತಿಯವರ ಕೈಗೆ ನೀಡಿ, ಮೈಸೂರಿನ ಜನತೆಯನ್ನು ಒಂದು ರೀತಿಯಲ್ಲಿ ಅವಮಾನಿಸಿದರು. ಮುಂದಿನ ವರ್ಷಗಳಲ್ಲಿ ಇಂತಹ ಅವ್ಯವಸ್ಥೆ ಆಗದಂತೆ ಜಿಲ್ಲಾಡಳಿತ ಗಮನಹರಿಸಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು.

ಸರ್ವೇ ಜನಾಃ ಸುಖಿನೋ ಭವಂತು ಎಂದು ಹೇಳುವ ದೇಶದಲ್ಲಿ ಈ ಹೇಯ ಕೃತ್ಯವೇ!

ಮಾನ್ಯರೆ,

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಉಳ್ಳೆರನಹಳ್ಳಿಯ ಗ್ರಾಮ ದೇವತೆ ಭೂತಮ್ಮದೇವಿ ಮೆರವಣಿಗೆಯ ಉತ್ಸವದಲ್ಲಿ ಗುಜ್ಜುಕೋಲು ಎತ್ತಿಕೊಟ್ಟಿದ್ದಕ್ಕೆ ದಲಿತ ಸಮುದಾಯದ ಬಾಲಕನ ಕುಟುಂಬಕ್ಕೆ ಅರವತ್ತು ಸಾವಿರ ದಂಡವನ್ನು ವಿಧಿಸಿರುವ ಹೇಯ ಕೃತ್ಯ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ.

ಶಾಂತಿ, ಸಂಯಮ, ಸಹಭಾಳ್ವೆ, ಸಹೋದರತ್ವಕ್ಕೆ ಪುಣ್ಯ ನೆಲ ಈ ಭಾರತ ಎಂದು ಹೇಳುವ ಬಾಯಿಗಳಿಗೆ ಆಗಾಗ ದಲಿತರ ಮೇಲೆ ನಡೆಯುವ ನೀಚ ಕೃತ್ಯ ದೌರ್ಜನ್ಯಗಳ ಬಗ್ಗೆ ಖಂಡಿಸುವ ಗಟ್ಟಿ ಧ್ವನಿ ಬರಲಿಲ್ಲವೆಂಬದಕ್ಕೆ ವಿಷಾದವಿದೆ

ವಾಚ್ ಕಟ್ಟಿದ್ದಕ್ಕೆ ದೈಹಿಕ ಹಲ್ಲೆ, ದೇವಸ್ಥಾನಕ್ಕೆ ಪ್ರವೇಶ ಮಾಡಿದ್ದಕ್ಕೆ ಬಹಿಷ್ಕಾರ ಮತ್ತು ದಂಡ, ಅಂತರ್ಜಾತಿ ವಿವಾಹ ಮಾಡಿಕೊಂಡಿದ್ದಕ್ಕೆ ಮರ್ಯಾದೆ ಹತ್ಯೆ, ದಲಿತ ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ ಕೃತ್ಯಗಳ ವಿರುದ್ಧ ಬಲಿಷ್ಠ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ವಿಳಂಬ ಕಂಡು ಬಂದಲ್ಲಿ ದಲಿತ ಪರ ಸಂಘ ಸಂಸ್ಥೆಗಳು ನೊಂದ ಕುಟುಂಬಗಳಿಗೆ ಹೋರಾಟದ ಮೂಲಕ ನ್ಯಾಯ ಕೊಡಿಸುವ ಕೆಲಸ ಮಾಡಬೇಕಾಗಿದೆ.

ಇಂತಹ ಘಟನೆಗಳು ಮತ್ತೆ ಮರುಕಳಿಸದಿರಲು ಬಹಿಷ್ಕಾರ ಹಾಗೂ ದಂಡ ವಿಧಿಸುವ ವಿಕೃತ ಮನಸ್ಥಿತಿ ಇರುವವರನ್ನು ಊರಿನಿಂದ ಗಡಿಪಾರು ಮಾಡಿ ಊರಿನ ಶಾಂತಿ ಸುವ್ಯವಸ್ಥೆಗೆ ದಾರಿ ಮಾಡಿಕೊಡಬೇಕಾಗುತ್ತದೆ. ಸಾರ್ವಜನಿಕವಾಗಿ ಅವಮಾನಿಸುವ ಕೃತ್ಯಗಳನ್ನು ಊರಿನ ವಿದ್ಯಾವಂತರು ಪ್ರತಿಭಟಿಸಿ ಇಂತಹ ಹೇಯ ಕೃತ್ಯಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ.

–ಕಂಗಾಣಿಸೋಮು ಪಿ ಸಿ, ಕ್ಯಾತಮಾರನಹಳ್ಳಿ ಮೈಸೂರು

ಪೇಸಿಎಂ:ಬಿಜೆಪಿ ಕಾಂಗ್ರೆಸ್‌ಗೆ ಮೆಚ್ಚುಗೆ ವ್ಯಕ್ತಪಡಿಸಬೇಕು!

ಮಾನ್ಯರೆ,

ಪೇಸಿಎಂ ಭಿತ್ತಿಪತ್ರವನ್ನು ಅಂಟಿಸುವ ಮೂಲಕ ಕಾಂಗ್ರೆಸ್ ಭಾರತೀಯ ಜನತಾ ಪಕ್ಷಕ್ಕೆ ಮಹದುಪಕಾರ ಮಾಡಿದೆ. ಇದಕ್ಕಾಗಿ ಬಿಜೆಪಿ ಕಾಂಗ್ರೆಸ್ ಪಕ್ಷಕ್ಕೆ ಧನ್ಯವಾದಗಳನ್ನು ತಿಳಿಸಬೇಕು. ಸರಕಾರ ಈಗ ಪೇಸಿಎಂ ಅನ್ನು ಅಧಿಕೃತಗೊಳಿಸಲು ಹೊರಟಿದೆ. ಬಿಜೆಪಿಗೆ ಒಳ್ಳೆಯ ಪ್ರಮುಖ ಪ್ರಚಾರವನ್ನು ಕಾಂಗ್ರೆಸ್ ನೀಡಿದೆ. ಮುಂದಿನ ಚುನಾವಣೆಗೆ ಬಲ ತಂದಿದೆ. ನಿಜಕ್ಕೂ ಇಂತಹ ಪ್ರಚಾರ ಅದೂ ವಿರೋಧ ಪಕ್ಷಗಳಿಂದ ಬಂದರೆ ಖುಷಿಯಾಗಬೇಕು ಅಲ್ಲವೇ?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಶ್ರೀ ಶಾರದಾಶರನ್ನವರಾತ್ರೋತ್ಸವ



ನವರಾತ್ರಿ ನಮ್ಮ ನಾಡಹಬ್ಬವಾಗಿದ್ದು, ದೇಶದ ಎಲ್ಲೆಡೆಯೂ ನವರಾತ್ರಿಯಲ್ಲಿ ಲೋಕ ಕಂಟಕರಾಗಿದ್ದ ಮಧು–ಕೈಟಭ, ಶುಂಭ–ನಿಶುಂಭ, ಮಹಿಷಾಸುರ ಮೊದಲಾದ ಮಹಾ ರಾಕ್ಷಸರನ್ನು ಸಂಹರಿಸಿದ ಆ ಜಗನ್ಮಾತೆಯನ್ನು ನವರಾತ್ರಿಯಲ್ಲಿ ಉತ್ಸವ ಆಚರಿಸುವ ಮೂಲಕ ವಿಶೇಷವಾಗಿ ಆರಾಧಿಸಲಾಗುತ್ತದೆ. ಆ ಜಗನ್ಮಾತೆಗೆ ವಿಶೇಷ ಪೂಜೆ ಮಾಡಿ ದೇವಿಯ ಮಹಾತ್ಮೆಯನ್ನು ಪಠಿಸುವುದರಿಂದ ಜಗನ್ಮಾತೆಯು ಸಂತುಷ್ಟಳಾಗಿ ಭಕ್ತರಿಗೆ ಸಕಲ ಸೌಖ್ಯಗಳನ್ನು ಅನುಗ್ರಹಿಸುತ್ತಾಳೆ. ನವರಾತ್ರಿ ಉತ್ಸವವನ್ನು ಶ್ರೀ ಗುರು ಪೀಠಗಳು ಹಾಗೂ ರಾಜ ಮಹಾರಾಜರ ಸಂಸ್ಥಾನಗಳಲ್ಲಿಯೂ ಆಚರಿಸಲಾಗುತ್ತದೆ. ಅದರಲ್ಲೂ ಕರ್ನಾಟಕದಲ್ಲಿನ ಶೃಂಗೇರಿ ಶ್ರೀ ಶಾರದಾ ಪೀಠದಲ್ಲಿ ಹಾಗೂ ಮೈಸೂರು ಯದುವಂಶದ ಅರಸರಲ್ಲಿ ಶರನ್ನವರಾತ್ರೋತ್ಸವ ಆಚರಣೆಯು ವಿಶೇಷ ಹಾಗೂ ಪ್ರಾಮುಖ್ಯತೆಯನ್ನು ಹೊಂದಿದೆ.

ಮೈಸೂರಿನ ಶೃಂಗೇರಿ ಶ್ರೀ ಶಾರದಾ ಪೀಠದ ಅಭಿನವ ಶಂಕರಾಲಯದಲ್ಲಿ ಈ ಬಾರಿಯೂ ಸಹ ನವರಾತ್ರಿಯ ಹಿಂದಿನ ದಿನದಂದು ಅಂದರೆ ಭಾದ್ರಪದ ಕೃಷ್ಣ ಪಕ್ಷದ ಮಹಾಲಯ ಅಮವಾಸ್ಯೆಯಂದು ಶ್ರೀ ಶಾರದಾಂಬೆಗೆ ಅನೇಕ ವಿಧವಾದ ಫಲ–ಪಂಚಾಮೃತ ಅಭಿಷೇಕದ ನಂತರ ಅಮ್ಮನವರಿಗೆ ಮಹಾನ್ಯಾಸ ಪೂರ್ವಕ ಶತರುದ್ರಾಭಿಷೇಕ ಹಾಗೂ 108 ಬಾರಿ ಶ್ರೀಸೂಕ್ತ ಪಠಣದೊಂದಿಗೆ ವಿಶೇಷ ಅಭಿಷೇಕಗಳನ್ನು ಮಾಡಲಾಗುತ್ತದೆ. ಅಂದು ಅಮ್ಮನವರಿಗೆ ಮಾಡುವ ಹರಿದ್ರಾಲಂಕಾರವು ಸುಂದರ ಹಾಗೂ ಅಪರೂಪದ ಅಲಂಕಾರವಾಗಿದೆ. ಅಂದಿನ ರಾತ್ರಿ ಮಂದಸ್ಮಿತೆಯಾದ ಶ್ರೀ ಶಾರದ ಅಮ್ಮನವರು ಜಗತ್ಪ್ರಸೂತಿಕಾಲಂಕಾರದಲ್ಲಿ ದರ್ಶನ ನೀಡಿ ಈ ಜಗತ್ತಿನ ಸೃಷ್ಟಿಗೆ ತಾನೇ ತಾಯಿ, ನೀನು ಮಗುವಿನಂತೆ ನನ್ನನ್ನು ಪೂಜಿಸುವುದಾದರೆ ಮಗುವಿನಂತೆ ನಿನ್ನನ್ನು ರಕ್ಷಿಸುತ್ತೇನೆ ಎಂಬಂತೆ ತನ್ನ ತೊಡೆಯ ಮೇಲೆ ಮುದ್ದಾದ ಮಗುವನ್ನು ಮಲಗಿಸಿಕೊಂಡು ಸಂತೈಸುವಂತೆ ಅಲಂಕೃತಳಾಗುತ್ತಾಳೆ.

ಮುಂದಿನ ದಿನದಿಂದ ನವರಾತ್ರಿಯ ಎಲ್ಲಾ ದಿನಗಳಲ್ಲಿ ಪ್ರತ್ಯೇಕ ವಿಶೇಷ ಅಲಂಕಾರಗಳನ್ನು ಮಾಡಲಾಗುತ್ತದೆ. ಮೊದಲ ಪ್ರತಿಪತ್ ದಿನದಲ್ಲಿ ಹಂಸವಾಹನರೂಢಳಾಗಿ ಅಮ್ಮನವರು ತಮ್ಮ ಕೈಯಲ್ಲಿ ಕಮಂಡಲು, ಅಕ್ಷರಮಾಲೆ, ಪುಸ್ತಕ, ಪಾಶಾ ಮತ್ತು ಚಿನ್ಮುದ್ರೆಗಳನ್ನು ಧರಿಸಿ ಬ್ರಹ್ಮನ ಪಟ್ಟದ ರಾಣಿಯಾಗಿ ಬ್ರಾಹ್ಮೀ ಅವತಾರದೊಂದಿಗೆ ಭಕ್ತರನ್ನು ಅನುಗ್ರಹಿಸುತ್ತಾಳೆ. ಅಂದು ಲೋಕಕಲ್ಯಾಣಾರ್ಥವಾಗಿ ಶ್ರೀ ಪುರುಷಸೂಕ್ತ ಹೋಮವನ್ನು ಮಾಡಲಾಗುವುದು. 2ನೇ ದಿನ ವೃಷಭವಾಹನಾರೂಢಳಾಗಿ ಆದಿಶಕ್ತಿಯು ಮಹೇಶ್ವರನ ಅರ್ಧಾಂಗಿ ಮಹೇಶ್ವರಿಯಾಗಿ ಕೈಯಲ್ಲಿ ತ್ರಿಶೂಲವನ್ನು ಹಿಡಿದು, ಚಂದ್ರರೇಖಾ ವಿಭೂಷಿತಳಾಗಿ ಭಕ್ತರನ್ನು ಅನುಗ್ರಹಿಸುತ್ತಾಳೆ. ಅಂದು ಶ್ರೀಸೂಕ್ತ ಹೋಮವನ್ನು ಮಾಡಲಾಗುತ್ತದೆ. ಮೂರನೇ ದಿನ ಮಯೂರವಾಹಿನಿಯಾಗಿ ಮಾತೆ ಶಾರದೆಯು ಕೈಯಲ್ಲಿ ಶಕ್ತ್ಯಾಯುಧವನ್ನು ಧರಿಸಿ, ನವಿಲನ್ನೇರಿ ಕುಮಾರಸ್ವಾಮಿಯ ಶಕ್ತಿಯಾಗಿ ಲೋಕವನ್ನು ಕೌಮಾರೀಯಾಗಿ ಅನುಗ್ರಹಿಸುತ್ತಾಳೆ. ಅಂದು ರುದ್ರೈಕಾರಶಿನೀ ಹೋಮವನ್ನು ನೆರವೇರಿಸಲಾಗುವುದು. ನಾಲ್ಕನೇ ದಿನ ಚತುರ್ಥಿಯಂದು ಅಮ್ಮನವರು ಕೈಯಲ್ಲಿ ಶಂಖ, ಚಕ್ರ, ಗಧೆ, ಮೊದಲಾದ ಆಯುಧಗಳನ್ನು ಧರಿಸಿ ಗರುಡನನ್ನು ಆರೋಹಿಸಿ ಗರುಡ ವಾಹಿನಿರೂಢಳಾಗಿ ಶ್ರೀ ಮಹಾವಿಷ್ಣುವಿನ ಶಕ್ತಿಯಾಗಿ ವೈಷ್ಣವೀ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುತ್ತಾಳೆ. ಅಂದು ಶ್ರೀ ಸಹಸ್ರ ಮೋದಕ ಗಣಪತಿ ಹೋಮವನ್ನು ಮಾಡಲಾಗುತ್ತದೆ. ಐದನೇ ದಿನ ಪಂಚಮಿಯಂದು ಶ್ರೀ ರಾಜರಾಜೇಶ್ವರಿಯಾಗಿ ಅಲಂಕೃತಳಾಗಿ ದರ್ಶನ ನೀಡುತ್ತಾಳೆ. ಅಂದು ಲಲಿತಾಹೋಮವನ್ನು ಆಚರಿಸಲಾಗುವುದು. ಆರನೇ ದಿನ ಷಷ್ಠಿಯಂದು ಐರಾವತವನ್ನೇರಿ, ದೇವೇಂದ್ರನ ಪಟ್ಟಮಹಿಷಿಯಾಗಿ ವೃತಾಸುರ ಮೊದಲಾದ ದೈತ್ಯರನ್ನು ಸಂಹರಿಸಿ ಪ್ರಸನ್ನಳಾಗಿ ಇಂದ್ರಾಣಿಯಾಗಿ ಅಲಂಕೃತಳಾಗಿ ದರ್ಶನ ನೀಡುತ್ತಾಳೆ. ಅಂದು ಶ್ರೀ ಸುಬ್ರಹ್ಮಣ್ಯ ಹೋಮವನ್ನು ನೆರವೇರಿಸಲಾಗುತ್ತದೆ. ಏಳನೇ ದಿನ ಸಪ್ತಮಿಯಂದು ಮಾತೆ ಶಾರದೆಯು ಕೈಯಲ್ಲಿ ಕಚ್ಛಪೀ ವೀಣೆಯನ್ನು ಹಿಡಿದು ಭಕ್ತಿರಿಗೆ ಜ್ಞಾನಾನುಗ್ರಹವನ್ನು ನೀಡುವಳು. ಅಂದು ಸದ್ಬುದ್ಧಿ ಪ್ರಾಪ್ತಿಗಾಗಿ ವಿದ್ಯಾಭಿವೃದ್ಧಿಗಾಗಿ ಶ್ರೀ ಗಾಯತ್ರಿ ಮತ್ತು ಶ್ರೀ ವಿದ್ಯಾ ಸರಸ್ವತಿ ಹೋಮವನ್ನು ನೆರವೇರಿಸಲಾಗುವುದು. ಹಾಗೂ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸುವುದು ಅಂದಿನ ವಿಶೇಷ. ಎಂಟನೇ ದಿನ ಅಷ್ಟಮಿಯಂದು ದುರ್ಗಾಪರಮೇಶ್ವರಿಯಾಗಿ ಶ್ರೀ ದುರ್ಗಾಲಂಕಾರದಲ್ಲಿ ದರ್ಶನ ನೀಡುತ್ತಾಳೆ. ಅಂದು ಶ್ರೀ ದುರ್ಗಾ ಹೋಮವನ್ನು ನೆರವೇರಿಸಲಾಗುವುದು. ಒಂಬತ್ತನೇ ದಿನ ನವಮಿಯಂದು ಅಮ್ಮನವರು ಹತ್ತೂ ಕೈಗಳಲ್ಲಿ ಆಯುಧವನ್ನು ಹಿಡಿದು ಸಿಂಹವಾಹನವನ್ನೇರಿ ಚಂಡ–ಮುಂಡಾದಿ ದುಷ್ಟ ದೈತ್ಯರನ್ನು ಸಂಹರಿಸಿ, ಶಿಷ್ಟ ರಕ್ಷಣೆಗಾಗಿ ಆ ಜಗನ್ಮಾತೆಯು ಧರಿಸಿದ ಅವತಾರವೇ ಚಾಮುಂಡಾವತಾರವಾಗಿದ್ದು, ಭಕ್ತರಿಗೆ ಸಕಲ ಸುಖ, ಸಂಪತ್ತುಗಳನ್ನು ಅನುಗ್ರಹಿಸುತ್ತಾಳೆ. ಅಂದು ಶ್ರೀ ನವಚಂಡಿಕಾ ಹೋಮವನ್ನು ನೆರವೇರಿಸಲಾಗುವುದು. ಮಾರನೆ ದಿನ ದಶಮಿಯಂದು ವಿಜಯದ ಸಂಕೇತವಾಗಿ ವಿಜಯದಶಮಿಯನ್ನು ಆಚರಿಸಲಾಗುತ್ತಿದ್ದು, ಅಂದು ಅಮ್ಮನವರು ಶ್ರೀ ಗಜಲಕ್ಷ್ಮೀ ಅಲಂಕಾರದಲ್ಲಿ ದರ್ಶನ ನೀಡುತ್ತಾಳೆ. ಅಂದು ಶ್ರೀ ಧನ್ವಂತರಿ ಹೋಮವನ್ನು ಹಾಗೂ ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮವನ್ನು ನೆರವೇರಿಸಲಾಗುವುದು. ಅಂದು ಸಂಜೆ ಶಮೀ ವೃಕ್ಷಕ್ಕೆ ಪೂಜೆಯನ್ನು ಸಲ್ಲಿಸಿ ಶಮೀ ಪತ್ರೆಯಿಂದ ಅಮ್ಮನವರಿಗೆ ಅರ್ಚನೆಯನ್ನು ಮಾಡಲಾಗುತ್ತದೆ. ಈ ಜಗತ್ತಿನಲ್ಲಿ ಪರಾಶಕ್ತಿ ನಾನೊಬ್ಬಳೆ ಎಂದು ಶ್ರೀದೇವಿ ಮಹಾತ್ಮೆಯಲ್ಲಿ ಅಮ್ಮನವರು ತಿಳಿಸಿದಂತೆ ಎಲ್ಲಾ ಅಲಂಕಾರಗಳೂ ಜಗನ್ಮಾತೆಯದ್ದೇ ಆಗಿದೆ.

ಶ್ರೀ ಶಾರದಾ ಪೀಠದ ಉಭಯ ಜಗದ್ಗುರುಗಳವರು ನವರಾತ್ರಿಯ ಎಲ್ಲಾ ದಿವಸಗಳಲ್ಲೂ ಪ್ರಾತಃಕಾಲ ಹಾಗೂ ಮಧ್ಯಾಹ್ನ ಗುರುಪಾದುಕೆಗಳಿಗೂ, ಶ್ರೀಚಕ್ರಕ್ಕೂ ಹಾಗೂ ಅಮ್ಮನವರಿಗೂ ವಿಶೇಷ ಪೂಜೆ ಸಲ್ಲಿಸುತ್ತಾರೆ. ಶೃಂಗೇರಿಯಲ್ಲಿ ಶಾರದಾಶರನ್ನವರಾತ್ರೋತ್ಸವದ ವಿಶೇಷ ಕಾರ್ಯಕ್ರಮ ಅಂದರೆ ರಾತ್ರಿಯಲ್ಲಿ ನಡೆಯುವ ಶ್ರೀ ಜಗದ್ಗುರುಗಳವರ ದರ್ಬಾರ್. ಶೃಂಗೇರಿಯಲ್ಲಿ ಶ್ರೀ ವಿದ್ಯಾರಣ್ಯರ ಕಾಲದಿಂದಲೂ ದರ್ಬಾರ್‌ಅನ್ನು ಅವಿಚ್ಛಿನ್ನವಾಗಿ ಆಚರಿಸಲಾಗುತ್ತಿದೆ. ಈ ದರ್ಬಾರ್ ಸಮಯದಲ್ಲಿ ಶ್ರೀ ಜಗದ್ಗುರುಗಳವರು ಸಂಪ್ರದಾಯಾನುಸಾರವಾಗಿ ರತ್ನಖಚಿತ ಕಿರೀಟ, ಆಭರಣಗಳನ್ನು ಧರಿಸಿ ವ್ಯಾಖ್ಯಾನ ಸಿಂಹಾಸನದಲ್ಲಿರುವ ಶ್ರೀ ಶಾರದಾಂಬೆಯ ಉತ್ಸವ ಮೂರ್ತಿಯ ರಥೋತ್ಸವವನ್ನು ಜರುಗಿಸುವರು. ರಥದ ಮುಂದೆ ಶ್ರೀ ಜಗದ್ಗುರುಗಳವರು ಅಭಿಮುಖವಾಗಿ ಪ್ರದಕ್ಷಿಣೆ ಮಾಡುತ್ತಾರೆ. ನಂತರ ಅಮ್ಮನವರಿಗೆ ಅಭಿಮುಖವಾಗಿ ಇರಿಸುವ ಸ್ವರ್ಣ ಸಿಂಹಾಸನದಲ್ಲಿ ಆಸೀನರಾದ ಮೇಲೆ ಸಪ್ತಶತಿ ಪಾರಾಯಣ ಮಾಡಲಾಗುವುದು. ಹೀಗೆ ನವರಾತ್ರಿಯ ಎಲ್ಲಾ ದಿವಸಗಳಲ್ಲೂ ಜಗದ್ಗುರುಗಳವರು ದರ್ಬಾರಿನ ಪೋಷಾಕಿನಲ್ಲಿ ವಿಶೇಷ ದರ್ಶನ ನೀಡುವುದು ಸಾಂಪ್ರ ದಾಯಕವಾಗಿದೆ. ಹಿಂದಿನ ಪರಂಪರೆಯ ರೀತಿಯಲ್ಲಿ ರಾಜಮಹಾರಾಜರು ಸಲ್ಲಿಸುವ ಕಾಣಿಕೆಯನ್ನು ಸ್ವೀಕರಿಸುತ್ತಾರೆ. ನವರಾತ್ರಿ ಉತ್ಸವ ಆಚರಣೆಯನ್ನು ಶೃಂಗೇರಿಯಲ್ಲಿ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಮಹಾಸನ್ನಿದಾನಂಗಳವರು ಹಾಗೂ ಜಗದ್ಗುರು ಶ್ರೀ ವಿಧುಶೇಖರ ಭಾರತೀಸನ್ನಿದಾನಂಗಳವರು ಸಾಂಪ್ರದಾಯಕವಾಗಿ ಶ್ರದ್ಧಾಭಕ್ತಿಗಳಿಂದ ಅಮ್ಮನವರನ್ನು ಪೂಜಿಸುವರು. ಪೂಜೆಯ ದರ್ಶನವನ್ನು ಪಡೆದ ಭಕ್ತರು ಕೃತಾರ್ಥರು. ಮಾರನೇ ದಿನ ಏಕಾದಶಿಯಂದು ಶ್ರೀ ಶಾರದಾ ಅಮ್ಮನವರ ಮಹಾ ರಥೋತ್ಸವ ಹಾಗೂ ಶ್ರೀ ಜಗದ್ಗುರುಗಳವರು ದರ್ಬಾರ್ ಪೋಷಾಕಿನಲ್ಲಿ ಅಡ್ಡ ಪಲ್ಲಕ್ಕಿಯಲ್ಲಿ ಉತ್ಸವಗೊಳ್ಳುತ್ತಾರೆ.

ಅಂತೆಯೇ ಮೈಸೂರಿನ ಯದುವಂಶದ ದೊರೆಗಳೂ ಸಹ ಅನೂಚಾನವಾಗಿ ಶ್ರದ್ಧಾ ಭಕ್ತಿಗಳಿಂದ ನವರಾತ್ರಿ ಉತ್ಸವ ಆಚರಣೆ ನಿಮಿತ್ತವಾಗಿ ದೇವಸ್ಥಾನಗಳಿಂದ ಬಂದ ಎಣ್ಣೆ–ಅರಿಶಿನಗಳಿಂದ ಮಂಗಳ ಸ್ನಾನವನ್ನು ಮಾಡಿ ದೀಕ್ಷಾ ವಸ್ತ್ರವನ್ನುಟ್ಟು ಅರಮನೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಕಂಕಣವನ್ನು ಧರಿಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ಪಟ್ಟದ ಕತ್ತಿಯನ್ನು ಹಿಡಿದು ನವಗ್ರಹಾದಿ ದೇವತೆಗಳನ್ನು ಕಳಸದಲ್ಲಿ ಪೂಜಿಸಿ, ಕಾಳಿಕಾಪುರಾಣೋಕ್ತ ಪ್ರಾಕಾರವಾಗಿ ಸಿಂಹಾಸನದ ಪೂಜೆಯನ್ನು ನೆರವೇರಿಸಿ ಸುಮುಹೂರ್ತದಲ್ಲಿ ಸಿಂಹಾಸನಾರೂಢರಾಗುವರು. ಆ ಸಮಯದಲ್ಲಿ ಕೆಮ್ಮಣ್ಣುಮಟ್ಟಿಯ ಸುತ್ತಲೂ ನಿಂತಿರುವ ಪಟ್ಟದ ಆನೆ, ಕುದುರೆ, ಒಂಟೆ ಹಾಗೂ ಕಾಲಾಳುಗಳಿಂದಲೂ ತಮ್ಮ ಭುಜ ಪರಾಕ್ರಮದಿಂದ ಸಂಪಾದಿಸಿದ ಹನುಮದ್ವಜ, ಗರುಡದ್ವಜ ಬಿರುದಾವಳಿಗಳಿಂದಲೂ, ಮೃದಂಗ, ವೀಣಾವೇಣು, ಕಹಳಾಭೇರಿ ಮೊದಲಾದ ವಾದ್ಯ ಘೋಷಗಳಿಂದಲೂ, ಆಸ್ಥಾನ ಪುರೋಹಿತರುಗಳಿಂದ ಕಲಶೋಧಕ ಮಾರ್ಜನೆಯಂ ಮಾಡಿಸಿಕೊಂಡು ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜಪತಪ ಪೂಜಾದಿಗಳನ್ನು ನೆರವೇರಿಸಿ ದೇವಸ್ಥಾನಗಳಿಂದ ಬಂದ ಪ್ರಸಾದವನ್ನು ಸ್ವೀಕರಿಸಿ, ಫಲಮಂತ್ರಾಕ್ಷತೆಗಳನ್ನು ಪಡೆದು ತಮ್ಮ ಪುತ್ರರು, ಅರಸುಗಳು, ಪಾಳೇಗಾರರು, ಅಧಿಕಾರಸ್ಥರು ಮೊದಲಾದವರು ಅವರವರ ಅನುಗುಣವಾಗಿ ಒಪ್ಪಿಸಿದ ಕಾಣಿಕೆಯನ್ನು ಪಡೆದು ಸುಮಂಗಲಿಯರು ಆರತಿಯನ್ನು ಬೆಳಗಿದ ನಂತರ ಸಿಂಹಾಸನದಿಂದ ಇಳಿಯುವ ಸಂದರ್ಭದಲ್ಲಿ ಐದು ಕುಶಾಲ ಪಿರಂಗಿಗಳನ್ನು ಹಾರಿಸಿದ ಮೇಲೆ ಮರ್ಯಾದಾನುಸಾರವಾಗಿ ಸಿಂಹಾಸನಕ್ಕೆ ನಮಸ್ಕರಿಸಿ ಅಂತಃಪುರಕ್ಕೆ ತೆರಳುವರು. ಹೀಗೆ ನವರಾತ್ರಿಯ ಮೊದಲ ದಿನದಿಂದ ಮಹಾನವಮಿಯವರೆಗೆ ಸಂಪ್ರದಾಯ ಆಚರಣೆಯನ್ನು ಪಾಲಿಸಲಾಗುವುದು. ವಿಜಯದಶಮಿಯ ದಿವಸ ಪ್ರಾತಃ ಕಾಲದಲ್ಲಿ ಸ್ನಾನ ಸಂಧ್ಯಾವಂದನೆಯನ್ನು ಮಾಡಿ, ಸರ್ವಾಲಂಕಾರಭೂಷಿತರಾಗಿ ಆಯುಧಗಳಿಗೆ ಉತ್ತರ ಪೂಜೆಯನ್ನು ಮಾಡಿದ ಮೇಲೆ ಹಿಂದಿನಂತೆ ಓಲಗ, ವಜರೆ ನಡೆಯುವ ಸಮಯದಲ್ಲಿ ಆಯುಧದ ಎದುರಿಗೆ ರಕ್ತ ಚಿಮ್ಮುವಂತೆ ಜರುಗುವ ಜಟ್ಟಿ ಕಾಳಗವನ್ನು ವೀಕ್ಷಿಸಿ, ಆನಂತರ ಪಟ್ಟದ ಕತ್ತಿ, ಆಯುಧಗಳೊಂದಿಗೆ ಬನ್ನಿಯ ಮರದ ಮಂಟಪಕ್ಕೆ ಪಟ್ಟದ ಆನೆ, ಕುದುರೆಗಳ ಸಹಿತವಾಗಿ ಆಗಮಿಸಿ ಶಮೀ ವೃಕ್ಷದ ಪೂಜೆಯನ್ನು ಮಾಡಿ ಪ್ರಸಾದವನ್ನು ಸ್ವೀಕರಿಸುವರು. ಆನಂತರ ಪಟ್ಟದ ಕತ್ತಿಯನ್ನು ಅರಮನೆಯಲ್ಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಇರಿಸಿ ಪೂಜಿಸಲಾಗುವುದು. ಈ ಶರನ್ನವರಾತ್ರಿ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಮೈಸೂರು ಸಂಸ್ಥಾನವನ್ನು ಆಳಿದ ಯದುವಂಶದ ಪ್ರಸ್ತುತ ಮಹಾರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ನವರಾತ್ರಿಯ ಎಲ್ಲಾ ದಿವಸಗಳಲ್ಲೂ ಖಾಸಗಿ ದರ್ಬಾರ್‌ಅನ್ನು ನಡೆಸಿ ಸಂಪ್ರದಾಯವನ್ನು ಮುಂದುವರಿಸುತ್ತಿರುವುದು ಧರ್ಮ ರಕ್ಷಣೆಯಾಗಿದ್ದು ಹೆಮ್ಮೆಯ ವಿಷಯವಾಗಿದೆ.



ನಂ. ಶ್ರೀಕಂಠ ಕುಮಾರ್
ಮೊ: 9481067333

ದಸರಾ ಉದ್ಘಾಟಿಸಿದ ಮೊದಲ ರಾಷ್ಟ್ರಪತಿ ದ್ರೌಪದಿ ಮುರ್ಮು



ಚಾಮುಂಡಿಬೆಟ್ಟದಲ್ಲಿ ಬುಡಕಟ್ಟು ಜನಾಂಗದವರು ನೃತ್ಯ ಪ್ರದರ್ಶಿಸಿದರು.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಜ್ಯಪಾಲ ಗೆಹ್ಲೋಟ್, ಮುಖ್ಯಮಂತ್ರಿ ಬೊಮ್ಮಾಯಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ.ದೇವೇಗೌಡರು ಆತ್ಮೀಯವಾಗಿ ಸ್ವಾಗತಿಸಿದರು.

ಒಂದನೇ ಪುಟದಿಂದ

ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದ ನಂತರ, ಬೆಳಗ್ಗೆ 10.05 ಗಂಟೆಗೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಆಯೋಜಿಸಿದ್ದ ವೇದಿಕೆಗೆ ಆಗಮಿಸಿದ ರಾಷ್ಟ್ರಪತಿಗಳು, ಅಲಂಕೃತ ಬೆಳ್ಳಿರಥದಲ್ಲಿ ಆಸೀನಳಾಗಿದ್ದ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಬೆಳಗ್ಗೆ 10.08 ಗಂಟೆಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಮುರ್ಮು ಅವರು ಅಗ್ರಪೂಜೆ ನೆರವೇರಿಸುವ ಮೂಲಕ 2022ರ ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಮೈಸೂರು ಸಿಲ್ಕ್ ಸೀರೆ ಧರಿಸಿದ್ದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೈಸೂರು ಪೇಟ ತೊಡಿಸಿ, ತಾಯಿ ಚಾಮುಂಡೇಶ್ವರಿಯ ಬೆಳ್ಳಿ ವಿಗ್ರಹ ನೀಡಿ ಆತ್ಮೀಯವಾಗಿ ಗೌರವ ಸಮರ್ಪಣೆ ಮಾಡಿದರು. ವೇದಿಕೆ ಏರುತ್ತಿದ್ದಂತೆಯೇ ಸಭಿಕರಿಗೆ ಕೈಮುಗಿದು ತಮ್ಮ ಆಸನದತ್ತ ಸಾಗಿ ರಾಷ್ಟ್ರಪತಿಗಳು ನಿಲ್ಲುತ್ತಿದ್ದಂತೆಯೇ ರಾಷ್ಟ್ರಗೀತೆ ಮೊಳಗಿತು. ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸಿದ ಬಳಿಕ ಮುರ್ಮು ಅವರು ವೇದಿಕೆ ಎಡಭಾಗಕ್ಕೆ ತೆರಳಿ ಬೆಳ್ಳಿರಥದಲ್ಲಿ ವಿರಾಜಮಾನಳಾಗಿದ್ದ ತಾಯಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುತ್ತಿದ್ದಂತೆಯೇ ನೆರೆದಿದ್ದ ಜನರಿಂದ ಹರ್ಷೋದ್ಗಾರ ಕೇಳಿಬಂದಿತು.

ನಂತರ ಅವರು ನಾಡಿನ ಜನತೆಗೆ ದಸರಾ ಮಹೋತ್ಸವಕ್ಕೆ ಶುಭ ಸಂದೇಶ ನೀಡಿದರು. "ತಾಯಿ ಚಾಮುಂಡೇಶ್ವರಿಗೆ ನನ್ನ ನಮಸ್ಕಾರಗಳು. ಎಲ್ಲಾ ಸಹೋದರ–ಸಹೋದರಿಯರಿಗೆ ನನ್ನ ನಮಸ್ಕಾರಗಳು" ಎಂದು ಕನ್ನಡದಲ್ಲಿ ಭಾಷಣ ಆರಂಭಿಸಿದ ಮುರ್ಮು ಅವರಿಗೆ ಸಭಿಕರು ಭಾರೀ ಕರತಾಡನದೊಂದಿಗೆ ಪ್ರೀತಿಯ ಗೌರವ ಸಮರ್ಪಿಸಿದರು.

ಅದೇ ವೇಳೆ ಉಪಸ್ಥಿತರಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ಮಾತನಾಡಿದರು. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಸಹ ಸಮಾರಂಭದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ರಾಷ್ಟ್ರಪತಿ ಸೇರಿದಂತೆ ಗಣ್ಯರನ್ನು ಸ್ವಾಗತಿಸಿದರಲ್ಲದೆ, ನೆನಪಿನ ಕಾಣಿಕೆ ನೀಡಿ ಆತ್ಮೀಯವಾಗಿ ಅಭಿನಂದಿಸಿದರು.

ರಾಷ್ಟ್ರಪತಿಗಳ ಕಚೇರಿಯ ನಿರ್ದೇಶನದಂತೆ ರಾಷ್ಟ್ರಪತಿಗಳು ಪಾಲ್ಗೊಳ್ಳುವ ಸಮಾರಂಭದಲ್ಲಿ ಸೀಮಿತ ಸಂಖ್ಯೆಯ ಗಣ್ಯಾತಿಗಣ್ಯರು ಮಾತ್ರ ವೇದಿಕೆಯಲ್ಲಿ ಹಾಜರಿರಬೇಕೆಂಬ ಶಿಷ್ಟಾಚಾರ ಪಾಲಿಸುವ ಸಲುವಾಗಿ ಮೈಸೂರಿನ ಪ್ರಥಮ ಪ್ರಜೆ, ಮೇಯರ್ ಶಿವಕುಮಾರ್, ಅಧ್ಯಕ್ಷತೆ ವಹಿಸಬೇಕಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಉಪ ಮೇಯರ್ ಡಾ.ರೂಪ, ಶಾಸಕರು, ವಿಧಾನಪರಿಷತ್ ಸದಸ್ಯರು, ವಿವಿಧ ನಿಗಮ–ಮಂಡಳಿ ಅಧ್ಯಕ್ಷರುಗಳು, ವೇದಿಕೆ ಮುಂಭಾಗ ವ್ಯವಸ್ಥೆ ಮಾಡಿದ್ದ ಪ್ರತ್ಯೇಕ ಎನ್‌ಕ್ಲೋಸರ್‌ನಲ್ಲಿ ಆಸೀನರಾಗಬೇಕಾಯಿತು. ರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿ ಆದಿವಾಸಿ ಮತ್ತು ಗಿರಿಜನ ಕಲಾವಿದರಿಗೆ ಜಾನಪದ ನೃತ್ಯ ಪ್ರದರ್ಶನಕ್ಕೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಅವಕಾಶ ಕಲ್ಪಿಸಲಾಗಿತ್ತಲ್ಲದೆ, ದ್ರೌಪದಿ ಮುರ್ಮು, ಸಮಾರಂಭದ ಬಳಿಕ ವೇದಿಕೆ ಬಳಿ ಮೈಸೂರು ಜಿಲ್ಲೆಯ ಆಯ್ದ 14 ಆದಿವಾಸಿಗಳೊಂದಿಗೆ 5 ನಿಮಿಷ ಸಂವಾದ ನಡೆಸಿದರು. ನಂತರ ಆದಿವಾಸಿ ಬುಡಕಟ್ಟು ಸಮುದಾಯದ ಪ್ರತಿನಿಧಿಗಳು ರಾಷ್ಟ್ರಪತಿ ಗಳೊಂದಿಗೆ ಫೋಟೋ ತೆಗೆಸಿಕೊಂಡು ಛಾಯಾ ಮಿಲನದಲ್ಲಿ ಪಾಲ್ಗೊಂಡರು.

ನಂತರ ರಾಷ್ಟ್ರಪತಿಗಳು ರಾಜ್ಯಪಾಲ, ಮುಖ್ಯಮಂತ್ರಿ, ಕೇಂದ್ರ ಸಚಿವರೊಂದಿಗೆ ಬೆಳಗ್ಗೆ 11.05 ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು. ರಾಜ್ಯ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ, ಎಡಿಸಿ ಡಾ. ಮಂಜುನಾಥಸ್ವಾಮಿ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮುಡಾ ಆಯುಕ್ತ ಎನ್.ಕೆ.ದಿನೇಶ್‌ಕುಮಾರ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್. ಗೀತಾ ಪ್ರಸನ್ನ ಮೇಲ್ವಿಚಾರಣೆಯಲ್ಲಿ ನಾಡಹಬ್ಬದ ಉದ್ಘಾಟನೆಗೆ ಚಾಮುಂಡಿ ಬೆಟ್ಟದಲ್ಲಿ ಇನ್ನಿಲ್ಲದ ಬಂದೋಬಸ್ತ್ ವ್ಯವಸ್ಥೆ ಮಾಡಿ, ಕಟ್ಟೆಚ್ಚರ ವಹಿಸಲಾಗಿತ್ತು.

ಮೈಸೂರು ದಸರಾ ಭಾರತದ ಸಾಂಸ್ಕೃತಿಕ ಪರಂಪರೆಯ ಪ್ರತೀಕ

ನನ್ನ ನಮಸ್ಕಾರಗಳು' ಎಂದು ಕನ್ನಡದಲ್ಲಿ ಭಾಷಣ ಆರಂಭಿಸಿದ ಅವರು, ಆದಿಶಂಕರಾಚಾರ್ಯರು ಕರ್ನಾಟಕದಲ್ಲಿ ಶೃಂಗೇರಿ ಮಠ ಸ್ಥಾಪಿಸಿದರೆ, ಬಸವಣ್ಣ ಹಾಗೂ ಅಕ್ಕಮಹಾದೇವಿ ಅವರು ಸಮಾಜ ಸುಧಾರಣೆ ಮಾಡಿದರು ಎಂದು ಅವರು ಹೇಳಿದರು.

ಕರ್ನಾಟಕವು ಭಕ್ತಿ–ಭಾವ, ಆಧ್ಯಾತ್ಮಿಕತೆ ಹಾಗೂ ಮಹಿಳಾ ಸಬಲೀಕರಣಕ್ಕೆ ಹೆಸರುವಾಸಿಯಾಗಿದ್ದು, ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯವನ್ನಾಳಿದರು. ಒನಕೆ ಓಬವ್ವ ರಾಜ್ಯ ರಕ್ಷಣೆಗಾಗಿ ಹೋರಾಡಿ ಹುತಾತ್ಮರಾದರು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನುಡಿದರು.

ವಚನಗಳು ನೂರಾರು ವರ್ಷ ಹಳೆಯದಾದರೂ ಇಂದಿಗೂ ಪ್ರಸ್ತುತವಾಗಿವೆ. ತ್ಯಾಗ ಮತ್ತು ಮಾತೃತ್ವದ ಸಂಕೇತವಾಗಿ ರುವ ಮಹಿಳೆ ಸಂದರ್ಭ ಬಂದರೆ ಚಾಮುಂಡಿ ಅಥವಾ ದುರ್ಗಿಯಾಗುತ್ತಾಳೆ. ತಾಯಿ ಚಾಮುಂಡಿ, ಪಾರ್ವತಿ ಮತ್ತು ದುರ್ಗಿಯಂತೆ ಒನಕೆ ಓಬವ್ವ, ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮರಂತಹ ಧೀರ ಮಹಿಳೆಯರು ದೇಶವನ್ನು ಕಟ್ಟುವ ಕಾಯಕದಲ್ಲಿ ಕೈ ಜೋಡಿಸಿ, ಸಂಸ್ಕೃತಿಯನ್ನು ರಕ್ಷಿಸಲು ಹೋರಾಡಿದ್ದರು ಎಂದೂ ಮುರ್ಮು ಅವರು ನುಡಿದರು. ಶಿಕ್ಷಣ ಹೂಡಿಕೆ, ಸಂಪರ್ಕ, ಸ್ಟಾರ್ಟ್‌ಅಪ್ ಹಬ್ ಹಾಗೂ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಕರ್ನಾಟಕದ ಪ್ರಗತಿ ಬಗ್ಗೆ ಸಂತಸ ವ್ಯಕ್ತಪಡಿಸಿದ ರಾಷ್ಟ್ರಪತಿಗಳು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಪುಟದ ಸಹೋದ್ಯೋಗಿಗಳು ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಅಭಿವೃದ್ಧಿ ನಮ್ಮ ಸಂಕಲ್ಪ

ಕಾರ್ಮಿಕರೆಲ್ಲರೂ ಸೇರಿ ಒಟ್ಟಾಗಿ ಆಚರಿಸುತ್ತಿರುವ ಹಬ್ಬಕ್ಕೆ ತಾಯಿ ಚಾಮುಂಡೇಶ್ವರಿಯ ಕೃಪೆ ಇದೆ. ಅದರಿಂದ ಈ ನಾಡಿಗೂ ಶಕ್ತಿ ಬಂದಿದೆ. ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷ ಸರಳವಾಗಿ ಆಚರಿಸಿದ ನಾಡಹಬ್ಬವನ್ನು ಎಷ್ಟೇ ಸವಾಲುಗಳಿದ್ದರೂ ನಾವು ಈಗ ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಆತ್ಮಶುದ್ಧಿ, ಶ್ರದ್ಧೆ, ಭಕ್ತಿಯಿಂದ ಅದಿದೇವತೆಯನ್ನು ಪೂಜಿಸಿದಲ್ಲಿ ಸರ್ವರಿಗೂ ಒಳಿತಾಗುತ್ತದೆ ಎಂದು ನುಡಿದರು. ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವ ತಾಯಿ ಚಾಮುಂಡೇಶ್ವರಿ ದೇವಿಗೆ ಇಂದು ಹಂಸವಾಹನ ಅಲಂಕಾರ ಮಾಡಲಾಗಿದೆ. ಶುದ್ಧತೆಯ ಪ್ರತೀಕ ಹಂಸ. ನಾವು ಅಷ್ಟೆ ಪರಿಶುದ್ಧತೆಗೆ ಆದ್ಯತೆ ನೀಡಿ, ನಮ್ಮ ಜೀವನವನ್ನು ಹಾಗೇ ರೂಪಿಸಿಕೊಳ್ಳಬೇಕು. ಹಂಸ ಪಕ್ಷಿಯ ಗುಣದಂತೆ ನಾವೂ ಶುದ್ಧ ನಡವಳಿಕೆ, ಆತ್ಮ ಶುದ್ಧೀಕರಣ ಮಾಡಿಕೊಂಡಲ್ಲಿ ಅತೀ ಎತ್ತರಕ್ಕೆ ಬೆಳೆಯಬಹುದು ಎಂದು ಮುಖ್ಯಮಂತ್ರಿಗಳು ಇದೇ ವೇಳೆ ಅಭಿಪ್ರಾಯಪಟ್ಟರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ದಸರಾ ಮಹೋತ್ಸವ - 2022



ಮೈಸೂರು ಕುಪ್ಪಣ್ಣ ಪಾರ್ಕ್ ಈಗ ಫಲಪುಷ್ಪಗಳಿಂದ ಕಂಗೊಳಿಸುತ್ತಿದೆ

● ಗಾಜಿನ ಮನೆಯಲ್ಲಿ ಹೂವಿನದಲೇ ರೂಪುಗೊಂಡಿದೆ 20 ಅಡಿ ಎತ್ತರದ ರಾಷ್ಟ್ರಪತಿ ಭವನ ● ಬಗೆಬಗೆಯ ಪುಷ್ಪಗಳಿಂದಲೇ ರೂಪಿತ ನಟ ಪುನೀತ್ ರಾಜ್‌ಕುಮಾರ್ 2 ಪ್ರತಿಮೆ, 3 ಪುತ್ಥಳಿ ● 10 ದಿನಗಳ ಫಲಪುಷ್ಪ ಪ್ರದರ್ಶನಕ್ಕೆ ಸಚಿವ ಸೋಮಶೇಖರ್ ಚಾಲನೆ














ಮೈಸೂರು, ಸೆ.26(ಎಂಟಿವೈ)– ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ತಾಣ ಎನಿಸಿರುವ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸೋಮವಾರ ಮಧ್ಯಾಹ್ನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಆಯೋಜಿಸಿರುವ 10 ದಿನಗಳ ಫಲಪುಷ್ಪ ಪ್ರದರ್ಶನ ಇಂದಿನಿಂದ ವಿಧ್ಯುಕ್ತವಾಗಿ ಆರಂಭವಾಗಿದ್ದು, ಅ.5ರವರೆಗೆ ಈ ರಮ್ಯ ತಾಣವನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ದಸರಾ ಫಲಪುಷ್ಪ ಪ್ರದರ್ಶನ ನಡೆದಿರಲಿಲ್ಲ. ಆದರೆ, ಈ ಬಾರಿ ಅದ್ದೂರಿಯಾಗಿ ಆಯೋಜಿಸಲಾಗಿದೆ. ಹಲವು ವಿಶಿಷ್ಟವಾದ ಆಕೃತಿಗಳನ್ನು ಹೂವುಗಳಿಂದ ಸೃಷ್ಟಿಸಲಾಗಿದೆ. ಹಾಗಾಗಿ ಈ ವರ್ಷದ ದಸರಾ ಫಲಪುಷ್ಪ ಪ್ರದರ್ಶನ ಕಣ್ಮನ ಸೂರೆಗೊಳ್ಳಲಿದೆ.

ರಾಷ್ಟ್ರಪತಿ ಭವನ: ಕುಪ್ಪಣ್ಣ ಪಾರ್ಕ್‌ನ ಗಾಜಿನ ಮನೆಯಲ್ಲಿ 20 ಅಡಿ ಎತ್ತರದ ರಾಷ್ಟ್ರಪತಿ ಭವನವನ್ನು ಲಕ್ಷಾಂತರ ಗುಲಾಬಿ ಹೂವುಗಳಿಂದ ರೂಪಿಸಲಾಗಿದೆ. ಕೆಂಪು ಗುಲಾಬಿ ಹಾಗೂ ಬಿಳಿ ಸೇವಂತಿ ಹೂವು ಬಳಸಿ ರಾಷ್ಟ್ರಪತಿ ಭವನ ನಿರ್ಮಿಸಲಾಗಿದೆ. ಇದು ಇಲ್ಲಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ

ನಟ ಪುನೀತ್ ರಾಜ್‌ಕುಮಾರ್‌ಗೆ ನಮನ: ಫಲಪುಷ್ಪ ಪ್ರದರ್ಶನದಲ್ಲಿ ವರನಟ ಡಾ.ರಾಜ್‌ಕುಮಾರ್ ಹಾಗೂ ನಟ ಪುನೀತ್ ರಾಜ್‌ಕುಮಾರ್‌ಗೆ ನಮನ ಸಲ್ಲಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಒಂದೇ ಸ್ಥಳದಲ್ಲಿ ಗಾಜನೂರಿನ ಡಾ.ರಾಜ್‌ಕುಮಾರ್ ಅವರ ಮನೆಯ ಪ್ರತಿರೂಪ, ಅದರ ಪಕ್ಕ ಕೈ ಮೇಲೆ ಎತ್ತಿರುವಂತೆ ಇರುವ ಡಾ.ರಾಜ್‌ಕುಮಾರ್ ಅವರ ಪ್ರತಿಮೆ, ಮನೆಯ ಎರಡು ಬದಿಯಲ್ಲೂ 7 ಅಡಿ ಎತ್ತರದ ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆ, ಮೂರು ಪುತ್ಥಳಿ ಸ್ಥಾಪಿಸಲಾಗಿದೆ.

ವಿವಿಧ ಆಕೃತಿಗಳು: ಉಲ್ಲಾಸ್ ಅಗರ್ ಬತ್ತಿ ಸಂಸ್ಥೆ ವತಿಯಿಂದ ಚಾಮುಂಡಿಬೆಟ್ಟದ ನಂದಿ ಪ್ರತಿರೂಪವನ್ನು ಫಲಪುಷ್ಪ ಪ್ರದರ್ಶನದಲ್ಲಿ ಹೂವಿನಿಂದ ರೂಪಿಸಲಾಗಿದೆ. ಜೇನುನೊಣ, ಆನೆ, ಜಿರಾಫೆ ಸೇರಿದಂತೆ ವಿವಿಧ ಆಕೃತಿಗಳನ್ನು ಮಾಡಲಾಗುತ್ತಿದೆ. ಮಕ್ಕಳ ಆಕರ್ಷಣೆಗಾಗಿ ದಪ್ಪ ಮೆಣಸಿನ ಕಾಯಿಂದ ಮನೆ ಆಕೃತಿ ರಚಿಸಿ, ಮೆಣಸಿನ ಕಾಯಿಯನ್ನೇ ಜೋಡಣೆ ಮಾಡಲಾಗಿದೆ.

32 ಜಾತಿಯ ಹೂಗಳ ಬಳಕೆ: ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದಲ್ಲಿ 32 ವಿವಿಧ ಜಾತಿಯ ಹೂಗಳುಳ್ಳ 50 ಸಾವಿರ ಕುಂಡಗಳನ್ನು ವಿವಿಧ ಆಕೃತಿಗಳಲ್ಲಿ ಜೋಡಣೆ ಮಾಡಲಾಗಿದೆ ಹೊರರಾಜ್ಯಗಳಿಂದ ತಂದಿರುವ ಹೂವುಗಳುಳ್ಳ 5 ಸಾವಿರ ಕುಂಡಗಳನ್ನು ಕುಪ್ಪಣ್ಣ ಪಾರ್ಕ್‌ನಲ್ಲಿ ಜೋಡಿಸಲಾಗಿದೆ. ಮೆರಿಗೋಲ್ಡ್, ಸಾಲ್ವಿಯು, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯಾ ಸೇರಿದಂತೆ ಇನ್ನಿತರ ಹೂವುಗಳು ಕಣ್ಮನ ಸೆಳೆಯಲಿವೆ. ಇದರೊಂದಿಗೆ ಗುಲಾಬಿ, ಜರ್ಬೆರಾ, ಆರ್ಕಿಡ್ಸ್, ಬ್ಲೂ ಡೈಸಿ, ಕ್ರೈಸಾಂಥಿಮಮ್, ಡ್ರೆಸಿನಾ ಹೂಗಳು ಫಲಪುಷ್ಪ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ನೀಡುತ್ತಿವೆ.

ಫುಡ್‌ಜೋನ್: ಫಲಪುಷ್ಪ ಪ್ರದರ್ಶನಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಫುಡ್ ಜೋನ್ ನಿರ್ಮಿಸಲಾಗಿದೆ. 50 ಮಳಿಗೆ ನಿರ್ಮಿಸಲಾಗಿದ್ದು, ವಿವಿಧ ಬಗೆಯ ತಿನಿಸು ಲಭ್ಯವಿದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಪ್ರವಾಸಿಗರು, ಇಷ್ಟದ ಖಾದ್ಯ ಸೇವಿಸಿ ಸಂಭ್ರಮಿಸಲಿದ್ದಾರೆ.

ಅಮ್ಯೂಸ್‌ಮೆಂಟ್ ಪಾರ್ಕ್: ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಮಕ್ಕಳ ಮನೋರಂಜನೆಗಾಗಿ ಅಮ್ಯೂಸ್‌ಮೆಂಟ್ ಪಾರ್ಕ್ ಕೂಡ ತಲೆ ಎತ್ತಿದೆ. ಇದರಿಂದ ಮಕ್ಕಳಿಗೆ ಭರಪೂರ ಮನರಂಜನೆಯೂ ದೊರೆಯುತ್ತಿದೆ

ಫಲಪುಷ್ಪ ಉದ್ಘಾಟನೆ ಸಂದರ್ಭದಲ್ಲಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ.ಸಿಇಓ ಬಿ.ಆರ್.ಪೂರ್ಣಿಮಾ, ದಸರಾ ಫಲಪುಷ್ಪ ಸಮಿತಿಯ ಅಧ್ಯಕ್ಷ ನಂಜಪ್ಪ ಉಪಾಧ್ಯಕ್ಷರಾದ ಮಹಾದೇವಸ್ವಾಮಿ, ವೆಂಕಟರಮಣ ಶೆಟ್ಟಿ, ಶ್ರೀನಿವಾಸ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜು, ಉಪ ನಿರ್ದೇಶಕ ಕೆ.ರುದ್ರೇಶ್, ಹಿರಿಯ ಸಹಾಯಕ ನಿರ್ದೇಶಕಿ ಸುವೇಧ, ಸಹಾಯಕ ನಿರ್ದೇಶಕ ಸಿ.ನವೀನ್, ತೋಟಗಾರಿಕಾ ಸಂಘದ ಖಜಾಂಚಿ ಶಶಿಕಲಾ ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮತ್ತೆ ಮತ್ತೆ ನೋಡಬೇಕೆನಿಸುತ್ತದೆ

ಫಲಪುಷ್ಪ ಪ್ರದರ್ಶನ ಆಕರ್ಷಣೀಯವಾಗಿದೆ. ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ. ರಾಷ್ಟ್ರಪತಿ ಭವನವನ್ನು ಅಪರೂಪದ ಗುಲಾಬಿ ಹೂವುಗಳಿಂದ ನಿರ್ಮಿಸಲಾಗಿದೆ ಹಲವು ಆಕೃತಿಗಳು, ನಾನಾ ಬಣ್ಣದ ಹೂವುಗಳು ನೋಡುಗರ ಕಣ್ಮನ ಸೆಳೆಯುತ್ತಿವೆ.

- ಎಸ್.ಟಿ. ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ

ಮೊದಲ ದಿನ ಉಚಿತ ಎಂದಿದ್ದರು..

ಕಳೆದ ವಾರ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸುದ್ದಿಗೋಷ್ಠಿ ನಡೆಸಿದ ವೇಳೆ ದಸರಾ ಫಲಪುಷ್ಪ ಪ್ರದರ್ಶನದ ಮೊದಲ ದಿನ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ನೀಡುವುದಾಗಿ ಘೋಷಿಸಿದ್ದರು. ಆದರೆ, ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ, ಸಚಿವರು ಹಾಗೂ ಗಣ್ಯರು ಪಾರ್ಕ್‌ನಿಂದ ನಿರ್ಗಮಿಸುತ್ತಿದ್ದಂತೆಯೇ ಕುಪ್ಪಣ್ಣ ಪಾರ್ಕ್‌ಗೆ ಪ್ರವೇಶ ಶುಲ್ಕ ವಿಧಿಸಲಾಯಿತು. ಈ ಸಂಬಂಧ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಕೆ.ರುದ್ರೇಶ್ ಪ್ರತಿಕ್ರಿಯಿಸಿ, ಟೆಂಡರ್ ಪಡೆದಿರುವುದರಿಂದ ಪ್ರವೇಶ ಶುಲ್ಕ ಸಂಗ್ರಹಿಸುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಸಚಿವ ಮುನಿರತ್ನ ಗೈರು

ದಸರಾ ಫಲಪುಷ್ಪ ಪ್ರದರ್ಶನವನ್ನು ವಾಸ್ತವವಾಗಿ ತೋಟಗಾರಿಕಾ ಸಚಿವ ಮುನಿರತ್ನ ಉದ್ಘಾಟಿಸಬೇಕಾಗಿತ್ತು. ಆದರೆ, ಕಾರ್ಯಕ್ರಮಕ್ಕೆ ಮುನಿರತ್ನ ಗೈರು ಹಾಜರಾದ ಹಿನ್ನೆಲೆಯಲ್ಲಿ ನಿಗದಿತ ವೇಳಾಪಟ್ಟಿಗಿಂತ ಒಂದೂವರೆ ಗಂಟೆ ವಿಳಂಬವಾಗಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೇ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದರು.



ನಾಳೆಯಿಂದ ದಸರಾ ಮೆಗಾ ಮನರಂಜನೆ 'ಯುವ ದಸರಾ' ಆರಂಭ

ಸೋನು ನಿಗಮ್, ಡಾ.ಶಮಿತ ಮಲ್ನಾಡ್, ಕುನಾಲ್ ಗಾಂಜಾವಾಲ, ಗುರುಕಿರಣ್, ವಿಜಯ್ ಪ್ರಕಾಶ್ ಸೇರಿ ಖ್ಯಾತ ಗಾಯಕರ ಗಾನ ಲಹರಿ



ಮೊದಲ ದಿನವೇ 'ಅಪ್ಪು ನಮನ'

ಈ ಮೊದಲು ಯುವ ದಸರಾ ಉದ್ಘಾಟನೆಯಾದ 2ನೇ ದಿನದಲ್ಲಿ 'ಅಪ್ಪು ನಮನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ, ಉದ್ಘಾಟನೆಯ ದಿನವೇ 'ಅಪ್ಪು ನಮನ' ಕಾರ್ಯಕ್ರಮ ನಡೆಸುವುದು ಸೂಕ್ತವೆಂದು ನಿರ್ಧರಿಸಿ, ಸೆ.28 ರಂದು ಯುವ ದಸರಾ ಉದ್ಘಾಟನೆಗೆ ನಿರ್ಧರಿಸಲಾಗಿದೆ. ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ.

- ಆರ್.ಚೇತನ್, ಉಪ ವಿಶೇಷಾಧಿಕಾರಿ, ಯುವ ದಸರಾ ಉಪಸಮಿತಿ

ಮೈಸೂರು, ಸೆ.26(ಎಂಕೆ)– ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ 'ಯುವ ದಸರಾ' ಸೆ.28ರಂದು ಸಂಜೆ 6 ಗಂಟೆಗೆ ಉದ್ಘಾಟನೆಯಾಗಲಿದೆ ಎಂದು ಯುವ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿಯೂ ಆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ತಿಳಿಸಿದರು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ 'ಯುವ ದಸರಾ' ಪೂರ್ವ ಸಿದ್ಧತೆ ಪರಿಶೀಲಿಸಿದ ಬಳಿಕ ಪತ್ರಿಕಾಗೋಷ್ಠಿ ನಡೆಸಿದ ಅವರು, ಸೆ.27ರ ಬದಲಿಗೆ ಸೆ.28ರಂದು ಜಿಲ್ಲಾ ಉಸ್ತುವಾರಿ ಸಚಿವರು 'ಯುವ ದಸರಾ' ಉದ್ಘಾಟಿಸಲಿದ್ದು, ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ಖ್ಯಾತ ನಟ ಡಾ.ಶಿವರಾಜ್‌ಕುಮಾರ್ ವಿಶೇಷ ಆಹ್ವಾನಿತರಾಗಿರುತ್ತಾರೆ ಎಂದು ತಿಳಿಸಿದರು.

ಮೊದಲ ದಿನ 'ಅಪ್ಪು ನಮನ' ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಹಿನ್ನೆಲೆ ಗಾಯಕರಾದ ಗುರುಕಿರಣ್, ವಿಜಯ್ ಪ್ರಕಾಶ್, ಕುನಾಲ್ ಗಾಂಜಾವಾಲ ಭಾಗವಹಿಸಲಿದ್ದಾರೆ. 2ನೇ ದಿನ(ಸೆ.29) 'ಯುವ ಸಂಭ್ರಮ' ವಿಜೇತ ತಂಡಗಳಿಂದ ನೃತ್ಯ ಪ್ರದರ್ಶನದ ಜೊತೆಗೆ ಖ್ಯಾತ ಹಿನ್ನೆಲೆ ಗಾಯಕಿ ಕನ್ನಿಕಾ ಕಪೂರ್ ಅವರಿಂದ ಸಂಗೀತ ಸಂಜೆ ನಡೆಯಲಿದೆ.

ಸೆ.30 ರಂದು ಸ್ಥಳೀಯ ಕಲಾವಿದರು ಹಾಗೂ ಲೇಸರ್ ಆಕ್ಟ್ ಅಂಡ್ ಸಿಗ್ನೇಚರ್ ಗ್ರೂಪ್‌ನಿಂದ ನೃತ್ಯ ರೂಪಕ, ಸ್ಯಾಂಡಲ್‌ವುಡ್ ನೈಟ್ ಹಾಗೂ ಯುವ ಸಂಭ್ರಮ ವಿಜೇತ ತಂಡಗಳಿಂದ ನೃತ್ಯ ಪ್ರದರ್ಶನವಿರಲಿದೆ. ಅ.1 ರಂದು ಖ್ಯಾತ ಗಾಯಕ ಸೋನು ನಿಗಮ್ ಹಾಗೂ ಗಾಯಕಿ ಡಾ.ಶಮಿತ ಮಲ್ನಾಡ್ ಅವರಿಂದ ರಸ ಮಂಜರಿ ಕಾರ್ಯಕ್ರಮ ನಡೆಯಲಿದೆ.

ಸೆ.2ರಂದು ಚಲನಚಿತ್ರ ನಟಿ ಹರ್ಷಿಕಾ ಪೂಣಚ್ಚ ಹಾಗೂ ನಟ ವಿಜಯ ರಾಘವೇಂದ್ರ ಅವರಿಂದ 'ಕನ್ನಡ ಸ್ಟಾರ್ ನೈಟ್' ಹಾಗೂ ಖ್ಯಾತ ಗಾಯಕಿ ಮಂಗ್ಲಿ ಹಾಗೂ ಗಾಯಕ ಅಮಿತ್ ತ್ರಿವೇದಿ ಅವರಿಂದ ಸಂಗೀತ ರಸಮಂಜರಿ ನಡೆಯಲಿದೆ. ಕಡೆಯ ದಿನವಾದ ಸೆ.3ರಂದು ಸುಪ್ರಿಯಾ ರಾವ್ ಮತ್ತು ಮಹಿಳಾ ಬ್ಯಾಂಡ್ ತಂಡದಿಂದ ಪ್ರದರ್ಶನ, ಫ್ಯಾಷನ್ ಷೋ ಹಾಗೂ ಹಿನ್ನಲೆ ಗಾಯಕಿ ಸುನಿದಿ ಚೌಹಾಣ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.

ದೀಪದ ಅಲಂಕಾರ ಅನಾವರಣಗೊಳಿಸಿದ ಇಂಧನ ಸಚಿವ

● ಉಸ್ತುವಾರಿ ಸಚಿವರು ಸೇರಿ ಇತರರು ಸಾಥ್ ● ದೀಪಾಲಂಕಾರ ಲಾಂಛನ, ಜ್ಞಾನ ಪೀಠ ಪ್ರಶಸ್ತಿ ವಿಜೇತರ ಹೆಸರು ಉಲ್ಲೇಖಿಸಿ ಮಾಧ್ಯಮಗಳಿಗೆ ನೀಡಿದ್ದ ಕೈಪಿಡಿಯಲ್ಲಿ ತಪ್ಪು ಮಾಹಿತಿ



ಮೈಸೂರು, ಸೆ.26(ಎಸ್‌ಪಿಎನ್)–ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ 124 ಕಿ.ಮೀ ಉದ್ದದ ದೀಪಾಲಂಕಾರಕ್ಕೆ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಶಾಸಕ ಎಲ್.ನಾಗೇಂದ್ರ ಮೈಸೂರು ಸಯ್ಯಾಜಿರಾವ್ ರಸ್ತೆಯ (ಕೆ.ಆರ್.ಆಸ್ಪತ್ರೆ ಮುಂಭಾಗ)ಲ್ಲಿ ಅಳವಡಿಸಿದ್ದ ಹಸಿರು ವಿದ್ಯುತ್ ಚಪ್ಪರದ ದೀಪಾಲಂಕಾರಕ್ಕೆ ರಿಮೋಟ್ ಬಟನ್ ಒತ್ತುವ ಮೂಲಕ ಸೋಮವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಇಂಧನ ಸಚಿವ ಸುನೀಲ್ ಕುಮಾರ್, ಈ ಬಾರಿ ಮೈಸೂರು ದಸರಾ ದೀಪಾಲಂಕಾರವನ್ನು 124 ಕಿಮೀ ಪ್ರಮುಖ ರಸ್ತೆ, ವೃತ್ತಗಳಲ್ಲಿ ಮಾಡಲಾಗಿದೆ. 124 ರಸ್ತೆಗಳು, 96 ವೃತ್ತಗಳು, 28 ಪ್ರತಿಕೃತಿಗಳು, ಹಸಿರು ಚಪ್ಪರ, ಸುಸ್ವಾಗತ, ವಿವಿಧ ಕಮಾನುಗಳಿಗೆ ಸುಂದರವಾದ ದೀಪಾಲಂಕಾರ ಮಾಡಲಾಗಿದೆ. 28 ವೃತ್ತಗಳಲ್ಲಿ ಖಾಸಗಿ ಉದ್ಯಮಿಗಳು ದೀಪಾಲಂಕಾರ ನಿರ್ವಹಣೆ ಸೇರಿದಂತೆ ಒಟ್ಟು ಅಂದಾಜು ವೆಚ್ಚ481 ಲಕ್ಷರೂ. ಮತ್ತು 1,31,805 ಯೂನಿಟ್ ವಿದ್ಯುತ್ ಬೇಕಾಗಬಹುದು ಎಂದು ತಿಳಿಸಿದರು.

2019ರಲ್ಲಿ 101 ಕಿಮೀ ರಸ್ತೆ, 102 ವೃತ್ತ, 41 ಪ್ರತಿಕೃತಿಗಳಿಗೆ ಹಾಗೂ 37ವಿವಿಧ ಕಚೇರಿಗಳಿಗೆ ದೀಪಾಲಂಕಾರ ಮಾಡಲಾಗಿತ್ತು. ಇದರ ವೆಚ್ಚ 435 ಲಕ್ಷ ರೂ ಮತ್ತು 1,07,550 ಯೂನಿಟ್ ವಿದ್ಯುತ್ ಬಳಕೆಯಾಗಿತ್ತು. 2020ರಲ್ಲಿ 56 ಕಿಮೀ ಉದ್ದದ ರಸ್ತೆ, 48 ವೃತ್ತ, 16 ಪ್ರತಿಕೃತಿಗಳಿಗೆ ದೀಪಾಲಂಕಾರ ಮಾಡಲಾಗಿತ್ತು. ಇದರ ಅಂದಾಜು ವೆಚ್ಚ 336 ಲಕ್ಷ ರೂ ಮತ್ತು 88605 ಯೂನಿಟ್ ವಿದ್ಯುತ್ ಬಳಕೆಯಾಗಿತ್ತು 2021ರಲ್ಲಿ 113.96 ಕಿ.ಮೀ ರಸ್ತೆ, 89 ವೃತ್ತ, 28 ಪ್ರತಿಕೃತಿಗಳಿಗೆ ದೀಪಾಲಂಕಾರ ಹಾಗೂ ಕಾಮಗಾರಿಯ ಅಂದಾಜು ವೆಚ್ಚ 437 ಲಕ್ಷ ರೂ. ಮತ್ತು 1,14,768 ಯೂನಿಟ್ ವಿದ್ಯುತ್ ಬಳಕೆಯಾಗಿತ್ತು. ಕಳೆದ 3 ವರ್ಷಗಳಿಗೆ ಹೋಲಿಸಿದರೆ, ಈ ಬಾರಿ ಅತೀ ಹೆಚ್ಚು ಉದ್ದದ ದೀಪಾಲಂಕಾರ ಮಾಡಲಾಗಿದೆ ಎಂದರು.

ಕಣ್ಮನ ಸೆಳೆಯುತ್ತಿದೆ 'ತ್ರಿಡಿ' ದೀಪಾಲಂಕಾರ: ಇದೇ ಮೊದಲ ಬಾರಿಗೆ ಕರ್ನಾಟಕ ರತ್ನ ದಿ.ಪುನೀತ್ ರಾಜ್ ಕುಮಾರ್, ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರ್ ಹಾಗೂ ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆಗಳಿಗೆ ತ್ರಿಡಿ ವೀಡಿಯೋ ಮರ್ಜಿಂಗ್ ಲೇಸರ್ ಅನಿಮೇಷನ್‌ನೊಂದಿಗೆ ವಿಶೇಷ ಅಲಂಕಾರ ಮಾಡಲಾಗಿದೆ. ಅಲ್ಲದೆ, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ದೊಡ್ಡ ಕಮಾನಿಗೆ ವಿಶೇಷವಾಗಿ ಅಲಂಕರಿಸಿ, ಈ ಮಾರ್ಗದಲ್ಲಿ ಬರುವ ಪ್ರವಾಸಿಗರನ್ನು ದಸರಾ ಮಹೋತ್ಸವಕ್ಕೆ ದೀಪಗಳಿಂದ ಆಕರ್ಷಿಸುವಂತೆ ಅಲಂಕಾರ ಮಾಡಲಾಗಿದೆ. ಮೈಸೂರು– ನಂಜನಗೂಡು ಹೆದ್ದಾರಿಯ ಕಮಾನುಗಳಿಗೆ ವಿಶೇಷವಾಗಿ ಸಿಂಗರಿಸಲಾಗಿದೆ ಎಂದರು.



ರಾಷ್ಟ್ರಪ್ರೇಮ ಬಿಂಬಿಸುವ ದೀಪಾಲಂಕಾರ: ಮೈಸೂರು–ಬೆಂಗಳೂರು ರಸ್ತೆಯ ನೆಲ್ಸನ್ ಮಂಡೇಲಾ(ಎಲ್‌ಐಸಿ) ವೃತ್ತದಲ್ಲಿ ರಾಷ್ಟ್ರ ಸಿಂಹ ಲಾಂಛನದೊಂದಿಗೆ ರಾಷ್ಟ್ರಧ್ವಜ, ರಾಷ್ಟ್ರ ಪ್ರಾಣಿ, ರಾಷ್ಟ್ರ ಪಕ್ಷಿ ಸೇರಿದಂತೆ ರಾಷ್ಟ್ರೀಯ ಚಿಹ್ನೆಗಳಿಗೆ ದೀಪಾಲಂಕಾರ ಮಾಡಲಾಗಿದೆ. ಅಲ್ಲದೆ, ನಗರದ ಪ್ರಮುಖ ವೃತ್ತ, ರಸ್ತೆಗಳಲ್ಲಿ ನವದೆಹಲಿಯಲ್ಲಿ ನಿರ್ಮಾಣವಾಗುತ್ತಿರುವ (ಸೆಂಟ್ರಲ್ ವಿಸ್ಟಾ ಕಟ್ಟಡ)ನ್ಯೂ ಪಾರ್ಲಿಮೆಂಟ್ ಭವನ, ಕೆಂಪುಕೋಟೆ, ನೇತಾಜಿ ಸುಭಾಷ್ ಚಂದ್ರ ಬೋಸ್, ಕರ್ನಾಟಕ ನಕ್ಷೆಯೊಳಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಡಾ. ಶಿವರಾಮ ಕಾರಂತ, ಡಾ.ಗಿರೀಶ್ ಕಾರ್ನಾಡ್, ವಿ.ಕೃಗೋಕಾಕ್, ಯು.ಆರ್.ಅನಂತಮೂರ್ತಿ, ಚಂದ್ರಶೇಖರ ಕಂಬಾರ ಪ್ರತಿಕೃತಿಗಳಿಗೆ ಅಳವಡಿಸಿರುವ ವಿಶೇಷ ದೀಪಾಲಂಕಾರ ಪ್ರವಾಸಿಗರ ಕಣ್ಮನ ಸೆಳೆಯುತ್ತಿವೆ ಎಂದರು.

ಸೆಲ್ಫಿಗೆ ಮುಗಿಬಿದ್ದ ಯುವ ಜನತೆ: ದಸರಾ ಮೊದಲ ದಿನವಾದ ಇಂದು ಅರಮನೆ ಸುತ್ತಮುತ್ತ ರಸ್ತೆಗಳು, ಸಯ್ಯಾಜಿರಾವ್ ರಸ್ತೆ, ಹೈವೇ ವೃತ್ತ, ಚಾಮರಾಜ ಜೋಡಿ ರಸ್ತೆ ಸೇರಿದಂತೆ ಇತರೆ ರಸ್ತೆಗಳಲ್ಲಿ ವಿಶೇಷ ಅಲಂಕಾರದಲ್ಲಿ ಕುಟುಂಬ ಸಮೇತ, ಯುವ ಜೋಡಿಗಳು, ಯುವಕ–ಯುವತಿಯರು ಫೋಟೋ ತೆಗೆದುಕೊಂಡು ಖುಷಿಪಟ್ಟರು.

ಅಂಬಾರಿ ಬಸ್‌ಗೆ ಭಾರೀ ಡಿಮ್ಯಾಂಡ್: ಅಂಬಾರಿ ಬಸ್‌ನಲ್ಲಿ ಕುಳಿತು ಪ್ರವಾಸಿಗರು, ವಿದ್ಯಾರ್ಥಿಗಳು, ಸ್ಥಳೀಯರು ಸೇರಿದಂತೆ ಇತರರು ದೀಪಾಲಂಕಾರ ಸವಿದರು.

ಕಾರಿನ ಓಪನ್ ರೂಫ್ ತೆರೆದು ದೀಪಾಲಂಕಾರ ವೀಕ್ಷಣೆ: ಮೈಸೂರು–ಬೆಂಗಳೂರು ರಸ್ತೆ, ಮೈಸೂರು–ಹುಣಸೂರು ರಸ್ತೆ, ಮೈಸೂರು–ನಂಜನಗೂಡು ರಸ್ತೆ, ಚಾಮರಾಜ ಜೋಡಿ ರಸ್ತೆ, ಅರಮನೆ ಸುತ್ತಮುತ್ತಲಿನ ರಸ್ತೆಗಳು, ದೇವರಾಜ ಅರಸು ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ರಸ್ತೆ, ಜೆಎಲ್‌ಬಿ ರಸ್ತೆ, ಇರ್ವಿನ್ ರಸ್ತೆ, ಅಶೋಕ್ ರಸ್ತೆ ಸೇರಿದಂತೆ ದೀಪಾಲಂಕಾರ ಮಾಡಿದ್ದ ಪ್ರಮುಖ ರಸ್ತೆಗಳಲ್ಲಿ ಕಾರಿನಲ್ಲಿ ಸಂಚರಿಸುತ್ತಿದ್ದ ಯುವತಿಯರು ದೀಪಾಲಂಕಾರವನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿಕೊಳ್ಳುವುದು ಸಾಮಾನ್ಯವಾಗಿ ಎಲ್ಲೆಡೆ ಕಂಡು ಬಂತು. ಕೆಲವರು ಐಷರಾಮಿ ಕಾರಿನ ರೂಫ್ ತೆರೆದು ದೀಪಾಲಂಕಾರ ಸವಿದರು.

ದೀಪಾಲಂಕಾರ ಉದ್ಘಾಟನೆ ವೇಳೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಚೆಸ್ಕಾಂ ಎಂಡಿ ಜಯವಿಭವ ಸ್ವಾಮಿ, ಅಧೀಕ್ಷಕ ಇಂಜಿನಿಯರ್ ಎಸ್.ನಾಗೇಶ್, ಕಾರ್ಯಪಾಲಕ ಇಂಜಿನಿಯರ್ ಆರ್.ಪೂರ್ಣಚಂದ್ರ ತೇಜಸ್ವಿ, ಬಿಜೆಪಿ ನಗರ ಘಟಕದ ಅಧ್ಯಕ್ಷ ಶ್ರೀವತ್ಸ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಜಗದೀಶ್, ದೀಪಾಲಂಕಾರ ಉಪಸಮಿತಿಯ ಅಧ್ಯಕ್ಷ ಟಿ.ರಮೇಶ್, ಉಪಾಧ್ಯಕ್ಷ ಪುನೀತ್, ಸದಸ್ಯರಾದ ವಿಕ್ರಾಂತ್ ಪಿ.ದೇವೇಗೌಡ, ಪಿ.ಧನಂಜಯ್, ರವಿಕುಮಾರ್, ಅರುಣ್ ಕುಮಾರ್ ಗೌಡ, ಸಂಜಯ್, ಪ್ರಭಾಕರ್ ಸೇರಿದಂತೆ ಇತರೆ ನಿಗಮ ಮಂಡಳಿ ಅಧ್ಯಕ್ಷರು, ಮುಖಂಡರು ಉಪಸ್ಥಿತರಿದ್ದರು.

ತಪ್ಪು ಸಂದೇಶ

ಮಿಲೇನಿಯಂ ಸರ್ಕಲ್‌ನಲ್ಲಿ ಮಾಡಿರುವ ದೀಪಾಲಂಕಾರದಲ್ಲಿ 'ರಾಷ್ಟ್ರ ಸಿಂಹ ಲಾಂಛನ', ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ 'ರಾಜಶೇಖರ್ ಕಂಬಾರ' ಹೀಗೆ ತಪ್ಪು ಹೆಸರುಗಳನ್ನು ಕೈಪಿಡಿಗಳಲ್ಲಿ ನಮೂದಿಸಿ, ವರದಿಗೆ ತೆರಳಿದ್ದ ಮಾಧ್ಯಮ ಪ್ರತಿನಿಧಿಗಳಿಗೆ ವಿತರಿಸಿ ಅಧಿಕಾರಿ ವರ್ಗ ಅಪಚಾರವೆಸಗಿದ್ದಾರೆ. ಆದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರೂ ಆದ ಇಂಧನ ಸಚಿವ ವಿ.ಸುನೀಲ್ ಕುಮಾರ್ ತಮ್ಮ ಅಧಿಕಾರಿಗಳು ಮಾಡಿರುವ ಈ ಘನ ಕಾರ್ಯವನ್ನು ಮನತುಂಬಿ ಸಾರ್ವಜನಿಕ ಸಭೆಯಲ್ಲಿ ಶ್ಲಾಘಿಸಿದ್ದಾರೆ.

ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಕ್ರಮ ಖಾತೆ ಆರೋಪ

ಪಿಡಿಒ, ಅಧಿಕಾರಿಗಳ ವಿರುದ್ಧ ಪ್ರತಿಭಟನೆ

ಶ್ರೀರಂಗಪಟ್ಟಣ, ಸೆ–26– ತಾಲೂಕಿನ ಹುಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಜುವಾರಿ ಗಾರ್ಡನ್ ಸಿಟಿ ಸಂಸ್ಥೆಗೆ ಸೇರಿದ ಯಾವುದೇ ಖಾತೆ ಮಾಡದಂತೆ ಒತ್ತಾಯಿಸಿ ಕಾಂಗ್ರೆಸ್ ಬೆಂಬಲಿತ ಗ್ರಾಪಂ ಸದಸ್ಯರು ಹಾಗೂ ಅಧ್ಯಕ್ಷೆ ಸುಶೀಲ ನೇತೃತ್ವದಲ್ಲಿ ಪಂಚಾಯಿತಿ ಎದುರು ಪ್ರತಿಭಟನೆ ಮುಂದುವರೆಸಿದರು.

ಜುವಾರಿ ಕಂಪನಿಗೆ ಸಂಬಂಧಪಟ್ಟ ಯಾವುದೇ ಇ–ಸ್ವತ್ತು ಮಾಡದಂತೆ ಅಧ್ಯಕ್ಷರು ನೋಟಿಸ್ ನೀಡಿದ್ದರೂ ಸಹ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಆದೇಶ ಕಡೆಗಣಿಸಿ ಖಾತೆ ಮಾಡುತ್ತಿರುವುದಾಗಿ ಗ್ರಾಪಂ ಅಧ್ಯಕ್ಷೆ ಮತ್ತು ಸದಸ್ಯರು ಆರೋಪಿಸಿ ಪ್ರಭಾರ ಪಿಡಿಒ ಚಂದಿಲ್, ಕಾರ್ಯದರ್ಶಿ ಶಿವಲಿಂಗಯ್ಯ, ಸಿಬ್ಬಂದಿ ನವೀನ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಜುವಾರಿ ಗಾರ್ಡನ್‌ನ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಎಂ.ಎನ್.ಪಿ.ಎಂ. ಕಾಲೋನಿ ಜನತೆಗೆ ತೊಂದರೆಯಾಗುವ ಜೊತೆಗೆ ಕಾನೂನು ಉಲ್ಲಂಘನೆಯಾಗಿದ್ದು, ಮುಂದಿನ ಸಭೆ ತೀರ್ಮಾನದ ನಂತರ ಕ್ರಮ ವಹಿಸಲಾಗುವುದು. ಅಲ್ಲಿಯವರೆಗೂ ಕಂಪನಿಗೆ ಸಂಬಂಧಪಟ್ಟ ಯಾವುದೇ ಖಾತೆಗಳನ್ನು ಮಾಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆದರೂ ಸಹ ನನ್ನ ಸೂಚನೆಗೆ ಬೆಲೆ ಇಲ್ಲದೆ ಖಾತೆ ಮಾಡುವ ಪ್ರಕ್ರಿಯೆ ಮಾಡುತ್ತಿದ್ದಾರೆ ಎಂದು ದೂರಿನ ಅಧ್ಯಕ್ಷೆ ಸುಶೀಲ, ಸ್ಥಳಕ್ಕೆ ತಾಪಂ ಇಒ ಮತ್ತು ಜಿಪಂ ಡಿ.ಎಸ್–2 ಬರುವ ತನಕ ಸದಸ್ಯರ ಜೊತೆಗೂಡಿ ಪ್ರತಿಭಟನೆ ಮುಂದುವರೆಸುವುದಾಗಿ ಹೇಳಿದರು.



ಕಾಂಗ್ರೆಸ್ ಬೆಂಬಲಿತ ಗ್ರಾಪಂ ಸದಸ್ಯ ರಾಮು ಮಾತನಾಡಿ, ಅಧ್ಯಕ್ಷರ ನೇತೃತ್ವದಲ್ಲಿ ಸದಸ್ಯರ ಸಭೆಯಲ್ಲಿ ನಿರ್ಣಯಕ್ಕೆ ವಿರೋಧವಾಗಿ ಖಾತೆ ಮಾಡುತ್ತಿದ್ದು, ಅಕ್ರಮದಲ್ಲಿ ಗ್ರಾಪಂನ ಪಿ.ಡಿ.ಒ ಸೇರಿದಂತೆ ಎಲ್ಲಾ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಜಿಪಂ ಡಿಎಸ್–2 ನೇತೃತ್ವದಲ್ಲಿ ಸಭೆ: ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ನೀಡಿದ ದೂರಿನ ಹಿನ್ನಲೆಯಲ್ಲಿ ಜಿ.ಪಂ ಡಿಎಸ್–2 ಸಂಜೀವಯ್ಯ ಹಾಗೂ ತಾಪಂ ಇಒ ವೇಣು ಹುಲಿಕೆರೆ ಗ್ರಾ.ಪಂಗೆ ಭೇಟಿ ನೀಡಿ ಎರಡು ಕಡೆಯವರ ದೂರುಗಳನ್ನು ಆಲಿಸಿದರು.

ಕಾಂಗ್ರೆಸ್ ಬೆಂಬಲಿತ ಸದಸ್ಯರ ಪರವಾಗಿ ಸದಸ್ಯ ಹರೀಶ್ ಮಾತನಾಡಿ, ಜುವಾರಿ ಗಾರ್ಡನ್ ಪರವಾಗಿ ಸದಸ್ಯರ ವಿರೋಧದ ನಡುವೆಯೂ ಅಕ್ರಮವಾಗಿ ಇ–ಸ್ವತ್ತು ಮಾಡಿದ್ದಾರೆ. ಇವರ ವಿರುದ್ಧ ಕ್ರಮ ಜರುಗಿಸಿ, ಖಾಸಗಿ ಕಂಪನಿ ಅವೈಜ್ಞಾನಿಕ ಕಾಮಗಾರಿಗಳನ್ನು ಸರಿಪಡಿಸುವ ತನಕ ಆ ಕಂಪನಿಯ ಸಬಂಧಪಟ್ಟ ಇ–ಸ್ವತ್ತು ಮಾಡದಂತೆ ತಡೆ ನೀಡುವಂತೆ ಕೋರಿದರು.

ಜೆಡಿಎಸ್ ಬೆಂಬಲಿತ ಸದಸ್ಯ ಮಜ್ಜಿಗೆಪುರ ಮಂಜು ಮಾತನಾಡಿ, ಜುವಾರಿ ಕಂಪನಿಯವರು ಬಂಡಿದಾರಿ ಒತ್ತುವರಿ ಜೊತೆಗೆ ಅಕ್ರಮವಾಗಿ ಹಲವಾರು ಎಕರೆಯಷ್ಟು ಒತ್ತುವರಿ ಮಾಡಿ, ಸರ್ಕಾರಿ ನಿಯಮ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅವರ ವಿರುದ್ಧ ತನಿಖೆ ನಡೆಸಬೇಕು ಹಾಗೂ ಗ್ರಾ.ಪಂ ಕಾರ್ಯದರ್ಶಿ ಶಿವಲಿಂಗಯ್ಯ ಸೇರಿದಂತೆ ಇತರರು ಅಕ್ರಮ ಇ–ಸ್ವತ್ತು ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ಜಿಪಂ ಡಿ.ಎಸ್–2 ಸಂಜೀವಯ್ಯ ಮಾತನಾಡಿ, ಹುಲಿಕೆರೆ ಗ್ರಾಪಂ ಸದಸ್ಯರ ದೂರುಗಳನ್ನು ಆಲಿಸಿದ್ದು, ಹುಲಿಕರೆ ಗ್ರಾ.ಪಂ ವ್ಯಾಪ್ತಿಯ ಇ–ಸ್ವತ್ತುನ್ನು ಸೆ.30 ರ ತನಕ ಮಾಡದಂತೆ ಸೂಚಿಸಿದ್ದೇನೆ. ಅಧಿಕಾರಿಗಳ ವಿರುದ್ಧ ಸದಸ್ಯರು ನೀಡಿರುವ ದೂರನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದರು.

ಈ ವೇಳೆ ಪಿಡಿಒ ಚಂದಿಲ್, ಕಾರ್ಯದರ್ಶಿ ಶಿವಲಿಂಗಯ್ಯ, ಉಪಾಧ್ಯಕ್ಷೆ ರೇಣುಕಾ, ವೈರಮುಡಿ, ಕರೀಗೌಡ, ಬಂಗರಾಪ್ಪ, ರಾಮಕೃಷ್ಣ, ಶೋಭ, ಮಂಜುಳ, ಶ್ವೇತಾ ಕೃಷ್ಣ ನರಸಿಂಹಚಾರ್, ಜಯಮ್ಮ, ಗೋವಿಂದ, ಗಣೇಶ್ ಸೇರಿಂತೆ ಗ್ರಾಮಸ್ಥರು ಇದ್ದರು.

ಭಾರತೀನಗರದಲ್ಲಿ ಶ್ರೀ ಚಾಮುಂಡೇಶ್ವರಿಗೆ ವಿಶೇಷ ಪೂಜೆ

ದೇವಾಲಯ ಮಂಟಪದಲ್ಲಿ ವಿವಿಧ ಬಗೆ ಬೊಂಬೆಗಳ ವೈಭವ

ಭಾರತೀನಗರ,ಸೆ.26– ನವರಾತ್ರಿ ಹಿನ್ನೆಲೆಯಲ್ಲಿ ಇಲ್ಲಿನ ಚಾಂಷುಗರ್ ಕಾರ್ಖಾನೆ ಆವರಣದಲ್ಲಿರುವ ಶ್ರೀ ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗುತ್ತಿವೆ.

ದೇವಿಗೆ ವಿಶೇಷ ಅಲಂಕಾರ ಮಾಡಿ ಮುಂಜಾನೆಯಿಂದ ರಾತ್ರಿವರೆಗೆ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ದೇವಾಲಯ ಮಂಟಪದಲ್ಲಿ ವಿವಿಧ ಬಗೆಯ ಬೊಂಬೆಗಳನ್ನು ಕೂರಿಸಿ ವಿಶೇಷ ಪೂಜೆ ನಡೆಸಲಾಯಿತು.

ಪ್ರತೀದಿನ ಬೆಳಗ್ಗೆ 8 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಅಭಿಷೇಕ, 9 ರೀತಿಯ ಅಲಂಕಾರ, ಸುಹಾಸಿನಿಯರಿಂದ ಪ್ರತೀ ದಿನ ಸಂಜೆ 6 ರಿಂದ 7 ರವರೆಗೆ ಲಲಿತ ಸಹಸ್ರನಾಮ, ಹರಿದ್ರ ಕುಂಕುಮಾರ್ಚನೆ ನೆರವೇರಲಿದೆ.

ಅಲ್ಲದೆ ದೇವಾಲಯ ಆವರಣದಲ್ಲಿರುವ ಗಣಪ, ನವಗ್ರಹ, ಆಂಜನೇಯ, ಕಾಲಭೈರವೇಶ್ವರ, ವಾಸುಕಿ, ನಾಗರಾಜ ದೇವರುಗಳಿಗೂ ಸಹ ಪೂಜೆ ಸಲ್ಲಿಸಲಾಗುತ್ತಿದೆ.



ಇಂದಿನಿಂದ ನವರಾತ್ರಿ ಬ್ರಹ್ಮೋತ್ಸವ ವಾಹನ ಸೇವೆ

ಮಂಡ್ಯ,ಸೆ.26– ಶ್ರೀರಂಗಪಟ್ಟಣದ ಉತ್ತರಾದಿ ಮಠದ ವತಿಯಿಂದ ಶ್ರೀ ಕಲ್ಯಾಣ ವೆಂಕಟೇಶ್ವರಸ್ವಾಮಿ ನವರಾತ್ರಿ ಬ್ರಹ್ಮೋತ್ಸವದ ಅಂಗವಾಗಿ ಸೆ.27ರಿಂದ ನವರಾತ್ರಿ ಬ್ರಹ್ಮೋತ್ಸವ ವಾಹನ ಸೇವೆಗಳು ನಡೆಯಲಿವೆ.

ಸೆ.27ರಂದು ಬೆಳಗ್ಗೆ 8ಕ್ಕೆ ಧ್ವಜಾರೋಹಣ, ಸಂಜೆ 7ಕ್ಕೆ ದೊಡ್ಡ ಶೇಷ ವಾಹನ, ಸೆ.28ಕ್ಕೆ ಬೆಳಗ್ಗೆ 8ಕ್ಕೆ ಚಿಕ್ಕಶೇಷ ವಾಹನ, ಸಂಜೆ 7ಕ್ಕೆ ಹಂಸವಾಹನ, ಸೆ.29ರಂದು ಬೆಳಗ್ಗೆ 8ಕ್ಕೆ ಸಿಂಹವಾಹನ, ಸಂಜೆ 7ಕ್ಕೆ ಮುತ್ತಿನ ಚಪ್ಪರ ವಾಹನ, ಸೆ.30ಕ್ಕೆ ಬೆಳಗ್ಗೆ 8ಕ್ಕೆ ಕಲ್ಪವೃಕ್ಷವಾಹನ, ಸಂಜೆ 7ಕ್ಕೆ ಸರ್ವಭೂಪಾಲ ವಾಹನ ಸೇವೆಗಳು ನಡೆಯಲಿವೆ.

ಅ.1 ರಂದು ಬೆಳಗ್ಗೆ 8ಕ್ಕೆ ಮೋಹಿನಿ ಅವತಾರ (ಪಲ್ಲಕ್ಕಿ ಸೇವೆ), ಸಂಜೆ 7ಕ್ಕೆ ಗರುಡ ವಾಹನ, ಅ. 2ರಂದು ಬೆಳಗ್ಗೆ 8ಕ್ಕೆ ಹನುಮಂತ ವಾಹನ, ಸಂಜೆ 4ಕ್ಕೆ ವಸಂತೋತ್ಸವ (ಸ್ವರ್ಣರಥ), ಗಜವಾಹನ, ಅ.3ರಂದು ಬೆಳಗ್ಗೆ 9ಕ್ಕೆ ಸೂರ್ಯಪ್ರಭವಾಹನ, ಸಂಜೆ 7ಕ್ಕೆ ಚಂದ್ರಪ್ರಭವಾಹನ, ಸೆ.4ಕ್ಕೆ ಬೆಳಗ್ಗೆ 6.20ಕ್ಕೆ ರಥೋತ್ಸವ, ಸಂಜೆ 7ಕ್ಕೆ ಅಶ್ವವಾಹನ, ಸೆ.5 ಬೆಳಗ್ಗೆ 6.30ಕ್ಕೆ ಚಕ್ರಸ್ನಾನ, ಸಂಜೆ 6.30ಕ್ಕೆ ಧ್ವಜ ಅವರೋಹಣ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀ ಮಠದ ಪ್ರಕಟಣೆ ತಿಳಿಸಿದೆ.

ಮಂಡ್ಯ ಯುವಕನ ಮತಾಂತರ ಖಂಡಿಸಿ ಬಿಜೆಪಿ ಪ್ರತಿಭಟನೆ



ಮಂಡ್ಯ,ಸೆ.26– ದಲಿತ ಯುವಕನಿಗೆ ಒತ್ತಾಯಪೂರ್ವಕವಾಗಿ ಖತ್ನಾ ಮಾಡಿ ಬಲವಂತವಾಗಿ ಮತಾಂತರ ಮಾಡಿರುವ ಘಟನೆಯನ್ನು ವಿರೋಧಿಸಿ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾಯಿಸಿದ ಕಾರ್ಯಕರ್ತರು, ದಲಿತ ಯುವಕನನ್ನು ಬಲವಂತವಾಗಿ ಮತಾಂತರ ಮಾಡಿದ ಆರೋಪಿಗಳ ವಿರುದ್ಧ ಘೋಷಣೆ ಕೂಗಿದರಲ್ಲದೆ, ಅವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಮದ್ದೂರು ತಾಲೂಕಿನ ಯಡವನಹಳ್ಳಿ ಗ್ರಾಮದ 26 ವರ್ಷ ವಯಸ್ಸಿನ ಶ್ರೀಧರ್ ಎಂಬಾತನನ್ನು ಹಣಕಾಸಿನ ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಿ ಕಳೆದ ಮೇ ತಿಂಗಳಲ್ಲಿ ಬೆಂಗಳೂರಿನ ಬನಶಂಕರಿಯಲ್ಲಿ ಬಲವಂತವಾಗಿ ಮತಾಂತರ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಆತನಿಗೆ ದನದ ಮಾಂಸ ತಿನ್ನುವಂತೆ ಒತ್ತಾಯಿಸಿ ಹಲ್ಲೆನಡೆಸಿ ಖಾಲಿ ಬಾಂಡ್ ಪೇಪರ್ ಮೇಲೆ ಸಹಿ ಕೂಡ ಪಡೆದಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಬಳಿಕ ವಿವಿಧ ಊರುಗಳಿಗೆ ಕರೆದುಕೊಂಡು ಹೋಗಿ ಇಸ್ಲಾಂ ಧರ್ಮದ ತರಬೇತಿಯನ್ನೂ ನೀಡಿದ್ದಾರೆ. ಪ್ರಾರ್ಥನೆ ಹಾಗೂ ಇತರೆ ವಿಷಯಗಳ ಕುರಿತು ತರಬೇತಿ ನೀಡಿದ್ದೂ ಅಲ್ಲದೆ, ಆತನ ಕೈಯಲ್ಲಿ ಪಿಸ್ತೂಲು ಹಿಡಿಸಿ ಫೋಟೋ, ವೀಡಿಯೋ ಮಾಡಿಸಿ, ಆತನ ಖಾತೆಗೆ 25 ಸಾವಿರ ಹಣ ವರ್ಗಾಯಿಸಿ ಹೇಳಿದಂತೆ ಕೇಳದಿದ್ದರೆ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಭಯೋತ್ಪಾದಕನಂತೆ ಬಿಂಬಿಸಲಾಗುವುದು ಎಂದು ಬೆದರಿಕೆ ಒಡ್ಡಿದ್ದಾರೆಂದು ಆರೋಪಿಸಿದರು.

ತಕ್ಷಣ ಆತನಿಗೆ ರಕ್ಷಣೆ ನೀಡಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಮನವಿ ಸಲ್ಲಿಸಿದರು.

ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ನಿತ್ಯಾ ನಂದ, ಬಿಜೆಪಿ ಮುಖಂಡರಾದ ವಿವೇಕ್, ಸಿ.ಟಿ.ಮಂಜುನಾಥ್, ಮಹಂತಪ್ಪ, ಶಂಕರ್, ಶ್ರೀಧರ್, ಬಿ.ಕೃಷ್ಣ, ಶಿವಕುಮಾರ್, ರಾಜು, ನಗರಸಭಾ ಸದಸ್ಯರಾದ ಚಂದ್ರು, ಶಿವಲಿಂಗಯ್ಯ, ಪ್ರಸನ್ನ ಸೇರಿದಂತೆ ಹಲವಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೊನೆ ಘಳಿಗೆಯಲ್ಲಿ ದೇವೇಗೌಡರನ್ನು ಕೈಬಿಟ್ಟಿದ್ದೇಕೆ

ಶ್ರೀರಂಗಪಟ್ಟಣ,ಸೆ,26– ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹೆಸರನ್ನು ಸರ್ಕಾರವೇ ಸೂಚಿಸಿತ್ತು. ಆದರೆ, ಕೊನೆ ಘಳಿಗೆಯಲ್ಲಿ ಅವರ ಕೈ ಬಿಟ್ಟಿದ್ದೇಕೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಪ್ರಶ್ನಿಸಿದರು.



ಶ್ರೀರಂಗಪಟ್ಟಣ ದಸರಾ ವೇದಿಕೆ ಸಿದ್ಧತೆ ಪರಿಶೀಲಿಸಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸುವ ಬಗ್ಗೆ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಸಚಿವ ಡಾ.ಕೆ.ಸಿ.ನಾರಾಯಣಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ದೇವೇಗೌಡರ ಹೆಸರನ್ನು ನಿರ್ಧರಿಸಲಾಗಿತ್ತು. ಆದರೆ, ಕೊನೆ ಘಳಿಗೆಯಲ್ಲಿ ಬದಲಾವಣೆ ಮಾಡಲಾಗಿದೆ ಎಂದು ದೂರಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಆಹ್ವಾನಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಚರ್ಚಿಸಿದ್ದೆ. ಅವರಿಂದಲೂ ಸಕಾರಾತ್ಮಕ ಪ್ರಕ್ರಿಯೆ ವ್ಯಕ್ತವಾಗಿತ್ತು. ದೇವೇಗೌಡರ ಆರೋಗ್ಯ ಸುಧಾರಿಸಿದೆ ಗೌಡರಿಂದಲೇ ದಸರಾಗೆ ಚಾಲನೆ ನೀಡೋಣ ಎಂದು ಸ್ವತಃ ಮುಖ್ಯಮಂತ್ರಿಗಳು ನಮಗೆ ಭರವಸೆ ನೀಡಿದ್ದರು. ಆದರೆ, ಸಚಿವರು ಏಕಾಏಕಿ ದೇವೇಗೌಡರನ್ನು ಕೈಬಿಟ್ಟಿರುವುದೇಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಒಕ್ಕಲಿಗರ ಸಂಘದ ಸದಸ್ಯರಾದ ಗಂಜಾಂ ಯೋಗೇಶ್ ಹಾಗೂ ಮರಳಗಾಲ ಗುರು ಆಗಮಿಸಿ, ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ದೇವೇಗೌಡರ ಹೆಸರನ್ನು ಸರ್ಕಾರವೇ ಪ್ರಸ್ತಾಪಿಸಿ, ಕೊನೆ ಘಳಿಗೆಯಲ್ಲಿ ಅವರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ. ಮುಖ್ಯವಾಗಿ ಶ್ರೀರಂಗಪಟ್ಟಣ ದಸರಾ ಉದ್ಘಾಟನೆ ಮಾಡುವ ಅತಿಥಿಗಳ ಆಹ್ವಾನ ಕೂಡ ನನ್ನ ಗಮನಕ್ಕೆ ತಾರದೆ ಅವರೆ ಕರೆದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ದೇವೇಗೌಡರನ್ನು ಕೈಬಿಟ್ಟಿರುವುದನ್ನು ಖಂಡಿಸಿ ಶ್ರೀರಂಗಪಟ್ಟಣ ದಸರಾ ವೇಳೆ ಒಕ್ಕಲಿಗರ ಸಂಘದ ವತಿಯಿಂದ ದಸರಾಗೆ ಅಡ್ಡಿಪಡಿಸಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸೆ.28 ರಂದು ಕಿರಂಗೂರು ಬನ್ನಿಮಂಟಪದಿಂದ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ. ದಸರಾಗೆ ಮೂರು ಆನೆಗಳನ್ನು ಕರೆಸಲಾಗುತ್ತಿದೆ. ಯುವ ದಸರಾ, ಮಹಿಳಾ ದಸರಾ, ದಸರಾ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ಅಗತ್ಯ ಸಿದ್ಧತೆ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಶಾಸಕ ರವೀಂದ್ರ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಯತೀಶ್, ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ತಹಶೀಲ್ದಾರ್ ಶ್ವೇತಾ ಎನ್.ರವೀಂದ್ರ ಡಿವೈಎಸ್ಪಿ ಸಂದೇಶ್‌ಕುಮಾರ್, ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ, ಡಿಸಿಎಫ್ ರುದ್ರನ್, ತಾಪಂ ಇಒ ವೇಣು ಸೇರಿದಂತೆ ಮತ್ತಿತರರಿದ್ದರು.

ಮಂಡ್ಯ ಗ್ರಾಮಾಂತರ ಗ್ರಾಪಂ ಉಪಾಧ್ಯಕ್ಷರಾಗಿ ಶಿವಮ್ಮ ಆಯ್ಕೆ

ಮಂಡ್ಯ,ಸೆ.26– ಮಂಡ್ಯ ಗ್ರಾಮಾಂತರ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಚಿಂದಗಿರಿ ದೊಡ್ಡಿ ಶಿವಮ್ಮ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿದ್ದ ಮಧುಕರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು.


22 ಮಂದಿ ಸದಸ್ಯ ಬಲವುಳ್ಳ ಮಂಡ್ಯ ಗ್ರಾಮಾಂತರ ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಿವಮ್ಮ ಹೊರತುಪಡಿಸಿ ಬೇರೆಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾದ ತಾಪಂ ಇಒ ವೀಣಾ ಅವರು ಶಿವಮ್ಮ ಅವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ನೂತನ ಉಪಾಧ್ಯಕ್ಷೆ ಶಿವಮ್ಮ ಅವರನ್ನು ಗ್ರಾಪಂ ಅಧ್ಯಕ್ಷೆ ರಂಜಿತಾ, ಸದಸ್ಯರಾದ ಲೋಕೇಶ್, ಕುಮಾರ್, ಕೆ.ಎಸ್. ಮಂಜು, ವಿಶ್ವ, ನಂದಿನಿ, ಬೋರೇಗೌಡ, ಪ್ರಶೀಲಾ, ಕಲ್ಪನಾ, ಗೀತಾ, ತಾಪಂ ಮಾಜಿ ಅಧ್ಯಕ್ಷ ಟಿ.ಸಿ.ಶಂಕರೇಗೌಡ, ಮುಖಂಡರಾದ ಚಿಕ್ಕಮಂಡ್ಯ ಪ್ರದೀಪ್ ಅಭಿನಂದಿಸಿದರು.

ಪಕ್ಷ ಸಂಘಟನೆ ಮಾಡದವರಿಗೆ ಯಾವ ಸ್ಥಾನವೂ ಇಲ್ಲ: ಹೆಚ್‌ಡಿಕೆ

ಪಕ್ಷಕ್ಕಾಗಿ ಕೆಲಸ ಮಾಡದವರ ಕಿತ್ತು ಹಾಕ್ತೇವೆ: ಇಬ್ರಾಹಿಂ

ಬೆಂಗಳೂರು, ಸೆ. 26 (ಕೆಎಂಶಿ)– ಪಕ್ಷದ ಕೆಲಸ ಮಾಡದೇ ನಿರ್ಲಕ್ಷ್ಯ ಮಾಡುವವರಿಗೆ ಪಕ್ಷದಲ್ಲಿ ಜಾಗ ವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಖಡಕ್ ಎಚ್ಚರಿಕೆ ನೀಡಿದರು.



ಪಕ್ಷ ಸಂಘಟನೆ, ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ರಾಜ್ಯ ಕಾರ್ಯಕಾರಿಣಿ ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪದಾಧಿಕಾರಿಗಳಾದವರು ಬದ್ಧತೆಯಿಂದ ಕೆಲಸ ಮಾಡಬೇಕು. ಪಕ್ಷದ ಕೆಲಸ ನಿರ್ಲಕ್ಷ್ಯ ಮಾಡುವುದನ್ನು ಸಹಿಸುವುದಿಲ್ಲ. ಇದು ಚುನಾವಣೆ ವರ್ಷ, ಎಲ್ಲರೂ ಸಂಘಟನಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕುಮಾರಸ್ವಾಮಿ ತಾಕೀತು ಮಾಡಿದರು.

ಹಳೆ ಮೈಸೂರು ಭಾಗ ಮಾತ್ರವಲ್ಲದೆ, ಉತ್ತರ ಕರ್ನಾಟಕ ಸೇರಿದಂತೆ ಕಲ್ಯಾಣ ಕರ್ನಾಟಕದಲ್ಲಿ ಜೆಡಿಎಸ್ ಪಕ್ಷ ಬಲವಾಗಿದೆ. ಜನರಲ್ಲಿ ನಮ್ಮ ಪಕ್ಷದ ಬಗ್ಗೆ ಬಹಳ ನಂಬಿಕೆ ಇದೆ. ನಮ್ಮ ಪಕ್ಷದಿಂದ ಒಳ್ಳೆಯದಾಗುತ್ತದೆ ಎನ್ನುವ ವಿಶ್ವಾಸ ಜನರಿಗೆ ಇದೆ. ಇದನ್ನು ಮುಖಂಡರು ಅರ್ಥ ಮಾಡಿಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿಗಳು ಹೇಳಿದರು.

ಪದಾಧಿಕಾರಿಗಳು ಎಲ್ಲರೂ ತಮ್ಮ ಜಿಲ್ಲೆ, ತಾಲೂಕು ಸೇರಿದಂತೆ ಅಗತ್ಯ ಇರುವ ಕಡೆಯೆಲ್ಲಾ ಪ್ರವಾಸ ಮಾಡಬೇಕು. ಮುಂದಿನ ಆರು ತಿಂಗಳು ಸವಾಲಾಗಿ ಸ್ವೀಕಾರ ಮಾಡಿ ಶ್ರಮಿಸಿ ದುಡಿಮೆ ಮಾಡಬೇಕು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಹಣ ಬಲದಿಂದ ಚುನಾವಣೆ ಎದುರಿಸುತ್ತಿವೆ. ಆದರೆ, ನಮ್ಮ ಪಕ್ಷ ಜನ ಬಲದಿಂದ ಚುನಾವಣೆ ಎದುರಿಸಬೇಕಿದೆ ಎಂದು ಅವರು ಒತ್ತಿ ಹೇಳಿದರು.

ಕುಮಾರಸ್ವಾಮಿ ಅವರ ಮಾತಿಗೆ ದನಿಗೂಡಿಸಿ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ಪಕ್ಷದ ಸಂಘಟನೆ, ಕಾರ್ಯಗಳನ್ನು ಅಲಕ್ಷ್ಯ ಮಾಡುವ ಪದಾಧಿಕಾರಿಗಳನ್ನು ಮುಲಾಜಿಲ್ಲದೆ ಕಿತ್ತು ಹಾಕಲಾಗುವುದು ಎಂದರು. ಪಕ್ಷದ ಕೆಲಸ ಮಾಡಿ. ಇಲ್ಲವಾದರೆ ಕೆಲಸ ಮಾಡುವವರಿಗೆ ಜಾಗ ಬಿಡಿ. ಪಕ್ಷದ ಕೆಲಸ ಮಾಡದವರಿಗೆ ಅವಕಾಶ ಇಲ್ಲ. ಮುಂದಿನ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ. ಹಾಗಾಗಿ ಎಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಪಕ್ಷ ಸಂಘಟನೆಯಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು ಎಂದರು.

ರಾಜ್ಯ ಪದಾಧಿಕಾರಿಗಳು ಕನಿಷ್ಠ ತಿಂಗಳಿಗೆ ಹದಿನೈದು ದಿನವಾದರೂ ರಾಜ್ಯ ಪ್ರವಾಸ ಮಾಡಬೇಕು. ಜನರು ಹಾಗೂ ಕಾರ್ಯಕರ್ತರನ್ನು ಭೇಟಿ ಮಾಡಬೇಕು ಎಂದು ಅವರು ತಾಕೀತು ಮಾಡಿದರು. ಯುವ ಜನತಾದಳ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಮಾತನಾಡಿ, ಯುವ ಜನತಾ ದಳ ಘಟಕವನ್ನು ಬಲಪಡಿಸುವುದು ಹಾಗೂ ರಾಜ್ಯದ ಉದ್ದಗಲಕ್ಕೂ ಯುವ ಕಾರ್ಯಕರ್ತರನ್ನು ಸಜ್ಜು ಮಾಡಲು ತಕ್ಷಣವೇ ಕ್ರಮ ವಹಿಸಲಾಗುವುದು ಎಂದರು.

ಈಗಾಗಲೇ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಯುವ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಜನತಾ ಜಲಧಾರೆ ಸಮಾವೇಶದಲ್ಲಿ ಯುವ ಪಡೆ ಅದ್ಭುತವಾಗಿ ಕೆಲಸ ಮಾಡಿದ್ದರು. ಮುಂದಿನ ದಿನಗಳಲ್ಲಿಯೂ ನಮ್ಮ ತಂಡ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲಿದೆ ಎಂದು ನಿಖಿಲ್ ಹೇಳಿದರು.

ತಾನು ಕಳ್ಳ ಪರರ ನಂಬಾ ಎನ್ನುವಂತಿದೆ ಕಾಂಗ್ರೆಸ್ ವರ್ತನೆ
ಕಾಂಗ್ರೆಸ್‌ನಿಂದ 'ಪೇ ಸಿಎಂ' ಅಭಿಯಾನಕ್ಕೆ ಬಿಎಸ್‌ವೈ ಆಕ್ರೋಶ

ಹಾಸನ: ಹಾಸನ ಜಿಲ್ಲೆ ಬೇಲೂರಿನಲ್ಲಿ ಮಾಜಿ ಮುಖ್ಯಮಂತ್ರಿ, ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಸಭೆಯೊಂದರಲ್ಲಿ ಮಾತನಾಡಿದ್ದಾರೆ. ಈ ವೇಳೆ ಕಾಂಗ್ರೆಸ್ ಪಕ್ಷದ ನಾಯಕರು ನೀಡುತ್ತಿರುವ ವಿಭಿನ್ನ ಹೇಳಿಕೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಸ್ಪೀಕರ್ ಆಗಿದ್ದ ಕೆ ರಮೇಶ್ ಕುಮಾರ್ ಅವರು ನೀಡಿದ್ದ ಹೇಳಿಕೆಯನ್ನು ಪ್ರಸ್ತಾಪಿಸಿ ತಾನು ಕಳ್ಳ ಪರರ ನಂಬಾ ಎನ್ನುವಂತಿದೆ ಕಾಂಗ್ರೆಸ್ ವರ್ತನೆ ಎಂದು ಕಾಂಗ್ರೆಸ್‌ನಿಂದ ನಡೆಯುತ್ತಿರುವ ಪೇ ಸಿಎಂ ಅಭಿಯಾನಕ್ಕೆ (PayCM) ಬಿಎಸ್‌ವೈ ತಮ್ಮ ಆಕ್ರೋಶ ಹೊರಹಾಕಿದರು.



ನಾಲ್ಕು ತಲೆಮಾರು ಆಗುವಷ್ಟು ಮಾಡಿಕೊಂಡಿದ್ದೇವೆ ಎಂದು ಕಾಂಗ್ರೆಸ್ ಪಕ್ಷದ ರಮೇಶ್ ಕುಮಾರ್ ಕೆಲ ದಿನಗಳ ಹಿಂದೆ ಗಂಭೀರ ಮಾತನ್ನಾಡಿದ್ದರು. ಸ್ವಾತಂತ್ರ್ಯ ಬಂದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅಭಿವೃದ್ಧಿ ಮಾಡಿಲ್ಲ. ಜನರ ತೆರಿಗೆ ಹಣ ಹೇಗೆ ಲೂಟಿ ಮಾಡಿದರು ಅಂತ ಅವರೇ ಹೇಳಿದ್ದಾರೆ. ರಮೇಶ್‌ಕುಮಾರ್ ಹೇಳಿಕೆ ಬಗ್ಗೆ ರಾಜ್ಯದ ಜನ ಚರ್ಚೆ ಮಾಡಬೇಕು ಎಂದು ಯಡಿಯೂರಪ್ಪ ಹೇಳಿದರು.

ಜನರ ತೆರಿಗೆ ಹಣವನ್ನು ಹೇಗೆ ಲೂಟಿ ಮಾಡಿದರು ಎಂದು ವಿಧಾನಸಭೆ ಅಧ್ಯಕ್ಷರಾಗಿದ್ದವರೇ ಹೇಳಿದ್ದಾರೆ. ಕಾಂಗ್ರೆಸ್ ನಾಯಕರು ಗೌರವದಿಂದ ಇರೋದನ್ನು ಕಲಿಯಬೇಕು. ನಿಮ್ಮ ಅತಿರೇಕದ ವರ್ತನೆ ಹೀಗೆಯೇ ಮುಂದುವರೆದರೆ ನಿಮ್ಮದೇ ಭಾಷೆಯಲ್ಲಿ ಉತ್ತರ ಕೊಡಲು ಬರುತ್ತೆ. ಆದರೆ ಆ ಕೀಳುಮಟ್ಟಕ್ಕೆ ನಾವು ಇಳಿಯಲ್ಲ. ಸಂಘ ಪರಿವಾರದ ಬಗ್ಗೆ ಮಾತನಾಡುವ ಕೆಳಮಟ್ಟಕ್ಕೆ ಇಳಿಬಾರದಿತ್ತು. ಬೊಮ್ಮಾಯಿ ಅವರ ನೇತೃತ್ವದಲ್ಲಿ ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಆಗುತ್ತಿದೆ. ಇದನ್ನು ಸಹಿಸದೆ ಹೀಗೆ ಅಪಪ್ರಚಾರ ಮಾಡೊದು ಶೋಭೆ ತರಲ್ಲ ಎಂದು ಯಡಿಯೂರಪ್ಪ ಗುಡುಗಿದರು.

ಸಿದ್ದರಾಮಯ್ಯ ಅವರನ್ನು ನಾನು ಕೇಳುತ್ತೇನೆ. ಅವರಿಗೆ ಮೈಸೂರಿನಲ್ಲಿ ಅಡ್ರಸ್ಸೇ ಇಲ್ಲ. ಮೈಸೂರಿನಲ್ಲಿ ನೀವು ನಿಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದೀರಾ. ಬದಾಮಿಯಲ್ಲಿ ನಾನು ಏನಾದರೂ ಒಂದೆರಡು ಗಂಟೆ ಹೋಗಿದ್ದರೆ ಕುಸಿದು ಹೋಗುತ್ತಿದ್ದಿರಿ. ಈಗ ನಿಮ್ಮ ಕ್ಷೇತ್ರ ಎಲ್ಲಿ ಎಂದು ಹುಡುಕೋದರಲ್ಲಿ ಇದೀರಿ. ಮೊದಲು ನಿಮ್ಮ ಕ್ಷೇತ್ರ ಹುಡುಕಿಕೊಂಡು ಗೆಲ್ಲೋ ಕಡೆ ಗಮನ ಕೊಡಿ ಎಂದು ಸಿದ್ದು ವಿರುದ್ಧ ಬಿಎಸ್‌ವೈ ವಾಗ್ದಾಳಿ ನಡೆಸಿದರು.

ನನ್ನ ಮಗಳನ್ನು ಕೊಂದವರನ್ನು ಜೀವಂತವಾಗಿ ಸುಡಿ

ಅಂಕಿತಾ ಭಂಡಾರಿ ತಾಯಿ ಆಕ್ರೋಶ



ಡೆಹ್ರಾಡೂನ್: ನನ್ನ ಮಗಳನ್ನು ಕೊಂದವರನ್ನು ಜೀವಂತವಾಗಿ ಸುಟ್ಟು ಹಾಕಿ ಎಂದು ಅಂಕಿತಾ ಭಂಡಾರಿ ತಾಯಿ ಆಕ್ರೋಶ ಹೊರಹಾಕಿದ್ದಾರೆ.

ಉತ್ತರಖಂಡದ ರೆಸಾರ್ಟ್‌ವೊಂದರಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಅಂಕಿತಾ ಭಂಡಾರಿ ಹತ್ಯೆ ಕುರಿತಂತೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರ ತಾಯಿ, ತಮ್ಮ ಮಗಳನ್ನು ಹತ್ಯೆಗೈದ ಆರೋಪಿಗಳನ್ನು ಗಲ್ಲಿಗೇರಿಸುವಂತೆ ಒತ್ತಾಯಿಸಿದ್ದಾರೆ. ಒಂದು ವೇಳೆ ಕಾನೂನಿನ ಪ್ರಕಾರ ಆರೋಪಿಗಳನ್ನು ಗಲ್ಲಿಗೇರಿಸಲು ಸಾಧ್ಯವಾಗಲಿಲ್ಲ ಎಂದರೆ ಅವರನ್ನು ಅವರ ಮನೆಗಳ ಮುಂದೆಯೇ ಜೀವಂತವಾಗಿ ಸುಟ್ಟುಹಾಕಬೇಕು ಎಂದು ಕಿಡಿಕಾರಿದ್ದಾರೆ.

ನನ್ನ ಮಗಳ ಅಂತಿಮ ಸಂಸ್ಕಾರ ವನ್ನು ನನಗೆ ತಿಳಿಸದೇ ನಡೆಸಲಾಗಿದೆ. ಆಕೆಯ ಅಂತ್ಯಕ್ರಿಯೆ ಮಾಡುತ್ತಿರುವ ಬಗ್ಗೆ ನನಗೆ ಹೇಳೇ ಇಲ್ಲ. ಸರ್ಕಾರವೇ ಅವಳ ಅಂತಿಮ ವಿಧಿವಿಧಾನವನ್ನು ಮಾಡಿ ಮುಗಿಸಿದೆ ಎಂದು ಆರೋಪಿಸಿದ್ದಾರೆ.

ಉತ್ತರಖಂಡದ ಕಾಲುವೆಯೊಂದರಲ್ಲಿ ಅಂಕಿತಾ ಭಂಡಾರಿ ಮೃತದೇಹ ಪತ್ತೆಯಾಗಿದ್ದು, ಇದಾದ ಒಂದು ದಿನದ ನಂತರ ಭಾನುವಾರ ಅಂಕಿತಾ ಭಂಡಾರಿ ಅಂತಿಮ ವಿಧಿವಿಧಾನವನ್ನು ನೆರವೇರಿಸಲಾಗಿತ್ತು. ಉತ್ತರಾಖಂಡದ ರಿಷಿಕೇಶದಲ್ಲಿ ರುವ ಬಿಜೆಪಿ ಮುಖಂಡನ ಮಗ ಪುಲ್ಕಿತ್ ಆರ್ಯ ಮಾಲೀಕತ್ವದ ರೆಸಾರ್ಟ್‌ನಲ್ಲಿ ರಿಸೆಪ್ಷನ್ ಆಗಿ ಅಂಕಿತಾ ಭಂಡಾರಿ ಕೆಲಸ ಮಾಡುತ್ತಿದ್ದರು. ಆದರೆ ಬಲವಂತವಾಗಿ ವೇಶ್ಯಾವಾಟಿಕೆಗೆ ನೂಕಲು ಪ್ರಯತ್ನಿಸಿದಾಗ ಅದನ್ನು ನಿರಾಕರಿಸಿದ್ದಕ್ಕೆ ಅಂಕಿತಾ ಭಂಡಾರಿಯನ್ನು ಕೊಲೆ ಮಾಡಲಾಗಿದೆ ಎನ್ನಲಾಗಿದ್ದು, ಈ ಸಂಬಂಧ ಉಚ್ಚಾಟಿತ ಬಿಜೆಪಿ ನಾಯಕನ ಮಗ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ರೈತರ ಪ್ರತಿಭಟನೆ ವೇಳೆ ಹಲವು ಖಾತೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸುವಂತೆ ಕೇಂದ್ರ ಸೂಚಿಸಿತ್ತು

ಹೈಕೋರ್ಟ್‌ಗೆ ಟ್ವಿಟರ್ ಮಾಹಿತಿ

ಬೆಂಗಳೂರು: ಕಳೆದ ವರ್ಷ ದೆಹಲಿಯ ಗಡಿಯಲ್ಲಿ ನಡೆದ ರೈತರ ಪ್ರತಿಭಟನೆಯ ಸಂದರ್ಭದಲ್ಲಿ ಹಲವಾರು ಖಾತೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸುವಂತೆ ಕೇಂದ್ರ ಸರ್ಕಾರ ತನಗೆ ಸೂಚಿಸಿತ್ತು ಎಂದು ಸಾಮಾಜಿಕ ಮಾಧ್ಯಮ ದೈತ್ಯ ಟ್ವಿಟರ್ ಸೋಮವಾರ ಕರ್ನಾಟಕ ಹೈಕೋರ್ಟ್‌ಗೆ ತಿಳಿಸಿದೆ.

ಪುನರಾವರ್ತಿತ ಅಪರಾಧದ ಹೊರತು ರಾಜಕೀಯ ಟೀಕೆಗಳ ಹಿನ್ನೆಲೆಯಲ್ಲಿ ವೈಯಕ್ತಿಕ ಟ್ವೀಟ್ ಅನ್ನು ಮಾತ್ರ ನಿರ್ಬಂಧಿಸಲು ಕಾನೂನು ಅನುಮತಿಸುತ್ತದೆ. ಆದರೆ ಸಂಪೂರ್ಣ ಖಾತೆಯನ್ನಲ್ಲ ಎಂದು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ನೇತೃತ್ವದ ಪೀಠಕ್ಕೆ ಟ್ವಿಟರ್ ಹೇಳಿದೆ.

ಫೆಬ್ರವರಿ 2021 ಮತ್ತು ಫೆಬ್ರವರಿ 2022 ರ ನಡುವೆ ಕೇಂದ್ರ ಸರ್ಕಾರವು 10 ನಿರ್ಬಂಧಿಸುವ ಆದೇಶಗಳಿಗೆ ಸಂಬಂಧಿಸಿದಂತೆ ಟ್ವಿಟ್ಟರ್ ಪರವಾಗಿ ವಿಚಾರಣೆಗೆ ಹಾಜರಾದ ಹಿರಿಯ ವಕೀಲ ಅರವಿಂದ್ ಎಸ್ ದಾತರ್ ಅವರು, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ರ ಪ್ರಕಾರ ಖಾತೆಗಳನ್ನು ಸಂಪೂರ್ಣ ನಿರ್ಬಂಧಿಸಲು ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಪತ್ರಿಕೆಗಳು ಮತ್ತು ಟೆಲಿವಿಷನ್ ಚಾನೆಲ್‌ಗಳು ರೈತರ ಆಂದೋಲನವನ್ನು ವರದಿ ಮಾಡುತ್ತಿರುವಾಗ, ಖಾತೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಏಕೆ ಸೂಚಿಸಿದರು ಎಂದು ಕೋರ್ಟ್ ಪ್ರಶ್ನಿಸಿತು.



ಇದಕ್ಕೆ ಉತ್ತರಿಸಿದ ದಾತರ್ ಅವರು, ವಾಕ್ ಸ್ವಾತಂತ್ರ್ಯವು ಸರ್ಕಾರವನ್ನು ಟೀಕಿಸುವ ಹಕ್ಕನ್ನು ಒಳಗೊಂಡಿದೆ. ಕಾನೂನಿನ ಮಿತಿಯಲ್ಲಿ ಟೀಕೆ ಮಾಡಬಹುದು ಎಂದು ಸುಪ್ರೀಂ ಕೋರ್ಟ್ ಸಹ ಹೇಳಿದೆ. ಆದರೆ ಕೇಂದ್ರ ಸರ್ಕಾರದ ಆದೇಶ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆಯಾಗಿದೆ ಎಂದು ಹೇಳಿದರು.

ನ್ಯಾಯಮೂರ್ತಿ ದೀಕ್ಷಿತ್ ಅವರು ಅಮೆರಿಕದಂತಹ ಇತರ ದೇಶಗಳಲ್ಲಿ ನ್ಯಾಯವ್ಯಾಪ್ತಿಗಳಲ್ಲಿ ಇಂತಹ ಸಮಸ್ಯೆಗಳನ್ನು ಹೇಗೆ ಪರಿಹರಿಸುತ್ತಾರೆ ಎಂಬುದನ್ನು ತಿಳಿಸಿ ಎಂದರು. ಇದಕ್ಕೆ ವಕೀಲರು ಸಮಯ ಕೋರಿದರು. ಹೀಗಾಗಿ ನ್ಯಾಯಮೂರ್ತಿ ದೀಕ್ಷಿತ್ ಚಾರಣೆಯನ್ನು ಅಕ್ಟೋಬರ್ 17ಕ್ಕೆ ಮುಂದೂಡಿದ್ದಾರೆ.

ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆ: ದೇಶಾದ್ಯಂತ ಪಕ್ಷದ ಕಾರ್ಯಕರ್ತರಿಂದ ನನಗೆ ಬೆಂಬಲ ಇದೆ

ನವದೆಹಲಿ: ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಹೋರಾಟ ನಡೆಸಲು ತನಗೆ ದೇಶಾದ್ಯಂತ ಪಕ್ಷದ ಕಾರ್ಯಕರ್ತರ ಬೆಂಬಲವಿದೆ ಎಂದು ಕಾಂಗ್ರೆಸ್ ಮುಖಂಡ ಶಶಿ ತರೂರು ಸೋಮವಾರ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಸ್ಥಾನಕ್ಕೆ ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸ್ಪರ್ಧೆ ಅನಿಶ್ಚಿತತೆಯ ನಡುವೆ ಶಶಿ ತರೂರು ಈ ರೀತಿಯ ಹೇಳಿಕೆ ನೀಡಿದ್ದಾರೆ.



ನಾಮಪತ್ರ ಸಲ್ಲಿಸಿದಾಗ ನನಗೆ ಸಿಗುವ ಬೆಂಬಲವನ್ನು ನೀವು ನೋಡುತ್ತೀರಿ. ಪ್ರಮುಖ ರಾಜ್ಯಗಳ ಪಕ್ಷದ ಕಾರ್ಯಕರ್ತರಿಂದ ಬೆಂಬಲ ಪಡೆದು ಕಣಕ್ಕಿಳಿಯುತ್ತೇನೆ. ಎಐಸಿಸಿ ಮುಖ್ಯಸ್ಥನ ಸ್ಥಾನಕ್ಕೆ ಸ್ಪರ್ಧಿಸುವಂತೆ ದೇಶದ ವಿವಿಧ ಕಡೆಗಳಿಂದ ಅನೇಕ ಜನರು ಮನವಿ ಮಾಡುತ್ತಿದ್ದಾರೆ ಎಂದು ಶಶಿ ತರೂರು ಸುದ್ದಿಗಾರರಿಗೆ ತಿಳಿಸಿದರು. ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಆಸಕ್ತಿಯಿದೆ ಆದರೆ, ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಸೆಪ್ಟೆಂಬರ್ 30 ರಂದು ಎಲ್ಲದ್ದಕ್ಕೂ ಸ್ಪಷ್ಟತೆ ಸಿಗಲಿದೆ ಎಂದು ಅವರು ಹೇಳಿದರು. ನಾಮಪತ್ರ ಪಡೆದಿದ್ದೇನೆ. ಜನರೊಂದಿಗೆ ಸಭೆ ನಡೆಸಿ, ಅವರೊಂದಿಗೆ ಮಾತನಾಡುತ್ತಿದ್ದೇನೆ. ಈ ಸಂಬಂಧ ಸೋನಿಯಾ, ರಾಹುಲ್ ಹಾಗೂ ಪ್ರಿಯಾಂಕಾ ಗಾಂಧಿ ಅವರೊಂದಿಗೂ ಚರ್ಚೆ ನಡೆಸಿದ್ದೇನೆ. ಅವರು ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ನೇರವಾಗಿ ತಮಗೆ ತಿಳಿಸಿರುವುದಾಗಿ ಶಶಿ ತರೂರು ತಿಳಿಸಿದರು. ಕಳೆದ ಸೋಮವಾರ ಸೋನಿಯಾ ಗಾಂಧಿ ಅವರನ್ನು ಶಶಿ ತರೂರು ಭೇಟಿಯಾಗಿದ್ದರು. ಚುನಾವಣೆ ವಿಚಾರದಲ್ಲಿ ಸೋನಿಯಾ ಗಾಂಧಿ ತಟಸ್ಥರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಷ್ಯಾ ಶಾಲೆಯಲ್ಲಿ ಗುಂಡಿನ ದಾಳಿ: 7 ಮಕ್ಕಳು ಸೇರಿ 13 ಮಂದಿ ಸಾವು

ಬಂದೂಕುಧಾರಿ ಆತ್ಮಹತ್ಯೆ

ಮಾಸ್ಕೊ ಮಧ್ಯ ರಷ್ಯಾದ ಶಾಲೆಯೊಂದರಲ್ಲಿ ಬಂದೂಕುಧಾರಿಯೊಬ್ಬ ಗುಂಡಿನ ದಾಳಿ ನಡೆಸಿದ್ದು, 7 ಮಕ್ಕಳು ಸೇರಿದಂತೆ ಕನಿಷ್ಠ 13 ಮಂದಿ ಮೃತಪಟ್ಟಿದ್ದಾರೆ ಮತ್ತು ಇಪ್ಪತ್ತೊಂದು ಮಂದಿ ಗಾಯಗೊಂಡಿದ್ದಾರೆ.

ಇಝೆವ್ಸ್ಕ್ ನಗರದ ಶಾಲೆ ಸಂಖ್ಯೆ 88 ರಲ್ಲಿ ಗುಂಡಿನ ದಾಳಿ ನಡೆದಿದ್ದು, ಶಾಲೆಯಲ್ಲಿ ಸುಮಾರು 1000 ವಿದ್ಯಾರ್ಥಿಗಳು ಮತ್ತು 80 ಶಿಕ್ಷಕರು ಇದ್ದಾರೆ ಎಂದು ತಿಳಿದುಬಂದಿದೆ. ದಾಳಿಕೋರನು ಮಕ್ಕಳ ಮೇಲೆ ಗುಂಡು ಹಾರಿಸಲು ಮುಂದಾಗುವ ಮುನ್ನ ಶಾಲೆಯಲ್ಲಿನ ಭದ್ರತಾ ಸಿಬ್ಬಂದಿಯನ್ನು ಕೊಂದಿದ್ದಾನೆ ಎಂದು ಮಾಧ್ಯಮ ವರದಿ ಮಾಡಿವೆ. ಬಳಿಕ ಮಕ್ಕಳ ಮೇಲೂ ದಾಳಿ ನಡೆಸಿ, ಶಾಲೆಯ ತರಗತಿಯೊಂದರಲ್ಲಿ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ನಂತರ ವರದಿಯಾಗಿದೆ. ಗುಂಡಿನ ದಾಳಿ ನಡೆಸಿದ ವ್ಯಕ್ತಿಯ ಶವ ಇದೀಗ ಪೊಲೀಸರಿಗೆ ಪತ್ತೆಯಾಗಿದೆ.

ವರದಿಗಳ ಪ್ರಕಾರ, ಬಂದೂಕುಧಾರಿಯು ಆತ್ಮಹತ್ಯೆ ಮಾಡಿಕೊಂಡಿದ್ದು, ದಾಳಿಯಲ್ಲಿ 13 ಮಂದಿ ಮೃತಪಟ್ಟಿದ್ದಾರೆ ಮತ್ತು 14 ಮಕ್ಕಳು ಸೇರಿದಂತೆ ಸುಮಾರು 21 ಮಂದಿ ಗಾಯಗೊಂಡಿದ್ದಾರೆ ಎಂದು ಸಚಿವಾಲಯ ಟೆಲಿಗ್ರಾಮ್‌ನಲ್ಲಿ ತಿಳಿಸಿದೆ. ಈ ಪ್ರದೇಶದ ಗವರ್ನರ್ ಅಲೆಕ್ಸಾಂಡರ್ ಬ್ರೆಚಲೋವ್, ಗಾಯಗೊಂಡವರಲ್ಲಿ ಮಕ್ಕಳು ಇದ್ದಾರೆ ಎಂಬುದನ್ನು ಖಚಿತಪಡಿಸಿದ್ದಾರೆ.

ಟಿವಿ ಚಾನೆಲ್‌ಗಳಲ್ಲಿ ಹಂಚಿಕೊಳ್ಳಲಾದ ದೃಶ್ಯಗಳಲ್ಲಿ ಶಾಲೆಯಲ್ಲಿನ ಗಾಯಾಳುಗಳನ್ನು ಸ್ಥಳಾಂತರಿಸುವುದು ಮತ್ತು ಆಂಬ್ಯುಲೆನ್ಸ್‌ಗಳು ಘಟನಾ ಸ್ಥಳಕ್ಕೆ ಆಗಮಿಸುತ್ತಿರುವುದು ಕಂಡುಬಂದಿದೆ.

6,40,000 ಜನಸಂಖ್ಯೆಯನ್ನು ಹೊಂದಿರುವ ಇಝೆವ್ಸ್ಕ್ ನಗರವು ಉಡ್ಮುರ್ಟಿಯಾ ಪ್ರದೇಶದ ರಾಜಧಾನಿಯಾಗಿದ್ದು, ಉರಲ್ ಪರ್ವತಗಳ ಪಶ್ಚಿಮಕ್ಕೆ, ಮಾಸ್ಕೋದಿಂದ ಪೂರ್ವಕ್ಕೆ ಸುಮಾರು 960 ಕಿಲೋಮೀಟರ್ ದೂರದಲ್ಲಿದೆ.

ಹೊಸ ಪಕ್ಷ ಘೋಷಿಸಿದ ಗುಲಾಂ ನಬಿ ಆಜಾದ್

ಜಮ್ಮು: ಜಮ್ಮು–ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಇತ್ತೀಚೆಗೆ ಕಾಂಗ್ರೆಸ್ ತೊರೆದ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಸೋಮವಾರ ಹೊಸ ಪಕ್ಷ ಘೋಷಿಸಿದ್ದಾರೆ. ಅದರ ಹೆಸರು ಡೆಮಾಕ್ರಟಿಕ್ ಆಜಾದ್ ಪಾರ್ಟಿ.



ಕಾಂಗ್ರೆಸ್ ತೊರೆದ ಸರಿಯಾದ ಒಂದು ತಿಂಗಳಲ್ಲಿ ಹೊಸ ಪಕ್ಷವನ್ನು ಗುಲಾಂ ನಬಿ ಆಜಾದ್ ಘೋಷಿಸಿದ್ದಾರೆ. ಇಂದು ಶ್ರೀನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೊಸ ಪಕ್ಷ ಘೋಷಿಸಿದ ಅವರು, ತಮ್ಮ ನೂತನ ಪಕ್ಷ ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ಸ್ವತಂತ್ರವಾಗಿರಲಿದ್ದು ಯಾವುದೇ ಪ್ರಭಾವ ಆಮಿಷಗಳಿಗೆ ಒಳಗಾಗುವುದಿಲ್ಲ ಎಂದಿದ್ದಾರೆ. ಪಕ್ಷದ ನೂತನ ಧ್ವಜವನ್ನು ಕೂಡ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದ್ದು, ಅದು ಸಾಸಿವೆ ಬಿಳಿ ಮತ್ತು ನೀಲಿ ಬಣ್ಣಗಳನ್ನು ಹೊಂದಿದೆ

ಮೈಸೂರು ಮಿತ್ರ ಮಂಗಳವಾರ 27 ಸೆಪ್ಟೆಂಬರ್ 2022



ತೊಡೆತಟ್ಟಿ ಸೆಣಸಾಟಕ್ಕೆ ಸಾಕ್ಷಿಯಾಯ್ತು ದಸರಾ ನಾಡಕುಸ್ತಿ

ಈ ಸಾಹಸ ಕ್ರೀಡೆಗೆ ಒತ್ತಾಸೆಯಾಗಿ ರಾಜ್ಯಕ್ಕೆ 100 ಗರಡಿ ಮನೆ ಕೊಡುಗೆ | **ಕ್ರೀಡಾ ಸಚಿವ ನಾರಾಯಣಗೌಡರಿಂದ ದಸರಾ ಕುಸ್ತಿ ಉದ್ಘಾಟನೆ**





ಮೈಸೂರು, ಸೆ.26(ಎಂಕೆ)– 100ಕ್ಕೂ ಹೆಚ್ಚು ಗರಡಿ ಮನೆಗಳನ್ನು ನೀಡುವ ಮೂಲಕ ರಾಜ್ಯ ಸರ್ಕಾರ ಕುಸ್ತಿ ಕ್ರೀಡೆಗೆ ಪ್ರೋತ್ಸಾಹ ನೀಡಿದೆ ಎಂದು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಹೇಳಿದರು.

ನಗರದ ದೊಡ್ಡಕೆರೆ ಮೈದಾನದ ಡಿ.ದೇವ ರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮೈಸೂರು ದಸರಾ ಮಹೋತ್ಸವ ಪ್ರಮುಖ ಆಕರ್ಷಣೆಯಾದ 'ದಸರಾ ನಾಡಕುಸ್ತಿ ಪಂದ್ಯಾವಳಿ'ಗೆ ಚಾಲನೆ ನೀಡಿ ಮಾತನಾಡಿದ ಅವರು, ದಸರಾ ಹಬ್ಬ ಎಂದರೆ ರಾಜ್ಯದ ಪ್ರತಿಯೊಬ್ಬರಿಗೂ ಹಬ್ಬವೇ. ಮೈಸೂರು ದಸರಾ ಕುಸ್ತಿಪಟುಗಳಿಗೆ ಹೆಚ್ಚಿನ ಶಕ್ತಿ ಹಾಗೂ ಪ್ರೋತ್ಸಾಹ ನೀಡಿದ್ದು, ರಾಜ್ಯ ಸರ್ಕಾರದಿಂದಲೂ ಗರಡಿ ಮನೆಗಳನ್ನು ನೀಡುವ ಮೂಲಕ ಕುಸ್ತಿ ಕಲೆ ಉಳಿಸಿ–ಬೆಳೆಸುವ ಮಹತ್ವ ಕಾರ್ಯ ಮಾಡಲಾಗುತ್ತಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಮಾತನಾಡಿ, ಬೇರೆ ಬೇರೆ ರಾಜ್ಯಗಳಿಂದ 30–40 ಮಂದಿ ಪೈಲ್ವಾನರನ್ನು ನಾಡಕುಸ್ತಿಗೆ ಕರೆತರಲಾಗಿದ್ದು, ಈ ವರ್ಷದ ಕುಸ್ತಿ ಪಂದ್ಯಾವಳಿ ಬಹಳ ವಿಶೇಷವೆನಿಸಿದೆ. ದಸರಾ ಕುಸ್ತಿ ಉಪ ಸಮಿತಿ ಅಚ್ಚುಕಟ್ಟಾಗಿ ಆಯೋಜನೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ರೀಡಾ ಜ್ಯೋತಿ ತಂದ ಹಿರಿಯ ಪೈಲ್ವಾನ್: ದಸರಾ ಕುಸ್ತಿ ಪಂದ್ಯಾವಳಿಗೂ ಮುನ್ನ ಕ್ರೀಡಾ ಜ್ಯೋತಿ ಹಿಡಿದು ಸಾಂಸ್ಕೃತಿಕ ಕಲಾ ತಂಡಗಳ ಜೊತೆಗೆ ಅಖಾಡಕ್ಕೆ ಬಂದ ಹಿರಿಯ ಕುಸ್ತಿಪಟು ಪೈಲ್ವಾನ್ ಕೆಎಸ್‌ಆರ್‌ಟಿಸಿ ಕೆಂಪೇಗೌಡ, ಮಟ್ಟಿಗೆ ಪೂಜೆ ಸಲ್ಲಿಸಿದರು.

ಶಾಸಕ ಎಲ್.ನಾಗೇಂದ್ರ, ದಸರಾ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಡಾ.ಬಿ.ಎನ್.ನಂದಿನಿ, ಅಧ್ಯಕ್ಷ ಕೆ.ದೇವ ರಾಜ್, ಕಾರ್ಯಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷರಾದ ಹೆಚ್.ಎಸ್.ವೇದರಾಜ್, ಮಹೇಶ್‌ರಾಜ್ ಅರಸ್, ಎಂ.ಎಂ. ರಾಜೇಗೌಡ, ಕಾರ್ಯದರ್ಶಿ ಎಸ್.ಜೆ. ಹರ್ಷವರ್ಧನ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಹಿರಿಯ ಕುಸ್ತಿ ಪೈಲ್ವಾನ್ ಪ್ರೊ. ರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕೊಲ್ಲಾಪುರ ಪೈಲ್ವಾನ್ ಮೇಲೆ ಕುಸ್ತಿ ಅಭಿಮಾನಿಗಳು ಗರಂ...

ಕೊಲ್ಲಾಪುರದ ಪೈಲ್ವಾನ್ ಸಿದ್ದಶ್ವರ್ ಮೌಲಿ ಜಮದಾಳೆ ಹಾಗೂ ಹರಿಯಾಣದ ಪೈಲ್ವಾನ್ ವಿಕಾಸ್ ಕಾಳ ವಿರುದ್ಧ ನಡೆದ ಮೊದಲ ಮಾರ್ಫಿಟ್ ಕುಸ್ತಿ ಪಂದ್ಯದ ವೇಳೆ ಕೊಲ್ಲಾಪುರ ಪೈಲ್ವಾನ್ ಸಿದ್ದಶ್ವರ್ ಮೌಲಿ ಜಮದಾಳೆ ವರ್ತನೆ ಕಂಡು ಕುಸ್ತಿ ಅಭಿಮಾನಿಗಳು ಸಿಟ್ಟಾದ ಪ್ರಸಂಗ ನಡೆಯಿತು.

ಆರಂಭದಿಂದಲೂ ಆಕ್ರಮಣಕಾರಿ ಆಟಕ್ಕೆ ಮುಂದಾಗಿದ್ದಲ್ಲದೆ ಕುಸ್ತಿ ನಿಯಮ ಪಾಲಿಸದ ಪೈ.ಸಿದ್ದಶ್ವರ್ ಮೌಲಿ ಜಮದಾಳೆ ವರ್ತನೆ ಕಂಡು ಕುಸ್ತಿ ಅಭಿಮಾನಿಗಳು ಸಿಟ್ಟಾದರು. ಈ ವೇಳೆ ಹಿರಿಯ ಪೈಲ್ವಾನ್ ಒಬ್ಬರು ಸರಿಯಾಗಿ ಕುಸ್ತಿ ಮಾಡುವಂತೆ ಜೋರಾಗಿ ಹೇಳಿದ್ದರಿಂದ ಕೋಪಗೊಂಡ ಪೈ.ಸಿದ್ದಶ್ವರ್ ಮೌಲಿ ಜಮದಾಳೆ, ಅಭಿಮಾನಿಗಳೊಂದಿಗೆ ಜಗಳಕ್ಕೆ ಮುಂದಾದರು. ಈ ವೇಳೆ ಪಂದ್ಯದ ರೆಫರಿ ಜವಾಬ್ದಾರಿ ನಿರ್ವಹಿಸುತ್ತಿದ್ದ ಮಾಜಿ ಪೈಲ್ವಾನರೂ ಆದ ಶಾಸಕ ಎಲ್.ನಾಗೇಂದ್ರ ಕುಸ್ತಿ ಅಭಿಮಾನಿಗಳು ಹಾಗೂ ಪೈಲ್ವಾನ್ ಸಿದ್ದಶ್ವರ್ ಮೌಲಿ ಜಮದಾಳೆ ಅವರನ್ನು ಸಮಾಧಾನಪಡಿಸಿ, ಆಟ ಮುಂದುವರೆಸಿದರು. 1 ಗಂಟೆ ಜಿದ್ದಾಜಿದ್ದಿನಿಂದ ನಡೆದ ಮಾರ್ಫಿಟ್ ಕುಸ್ತಿ ಕಡೆಗೂ ಸಮಬಲದೊಂದಿಗೆ ಅಂತಿಮವಾಯಿತು.

ಮೈಸೂರು–ಮಂಡ್ಯ ನಡುವೆ ಕುಸ್ತಿ...!

ದಸರಾ ಕುಸ್ತಿ ಉಪ ಸಮಿತಿಗೆ ಒಂದು ಆಫರ್ ನೀಡಿದ್ದೆ... ನಾನು, ಮಂಡ್ಯ ಉಸ್ತುವಾರಿ ಸಚಿವರಾದ ನಾರಾಯಣಗೌಡರ ವಿರುದ್ಧ ಕುಸ್ತಿ ಮಾಡುವುದಾಗಿ ಹೇಳಿದ್ದೆ. ಆದರೆ, ಕುಸ್ತಿ ಸಮಿತಿಯವರು ಅವಕಾಶ ನೀಡಲಿಲ್ಲ. ಇಲ್ಲದಿದ್ದರೆ ನಿಂದು ಅಥವಾ ನಂದು, ಮೈಸೂರು–ಮಂಡ್ಯ ಎಂಬುದು ಅಖಾಡದಲ್ಲಿ ತೀರ್ಮಾನವಾಗುತ್ತಿತ್ತು ಎಂದು ಹಾಸ್ಯ ಚಟಾಕಿ ಹಾರಿಸಿದ ಜಿಲ್ಲಾ ಉಸ್ತುವಾರಿ ಎಸ್.ಟಿ.ಸೋಮಶೇಖರ್, ಶಾಸಕ ನಾಗೇಂದ್ರ ಜಮಾನದಲ್ಲಿ ಕುಸ್ತಿ ಪೈಲ್ವಾನ್ ಆಗಿದ್ದು, ಕುಸ್ತಿ ಮಾಡುವಾಗ ಅವರ ದೇಹ ಕಬ್ಬಿಣದ ಗುಂಡಿನಂತೆ ಗಟ್ಟಿಮುಟ್ಟಾಗಿತ್ತು. ರಾಜಕೀಯಕ್ಕೆ ಬಂದ ಮೇಲೆ ಲೂಸ್ ಲೂಸ್ ಆಗೋಯ್ತು... ಅಲ್ವೇನಪ್ಪಾ ನಾಗೇಂದ್ರ.. ಯಾಕೆಂದರೆ ಈಗ ತಾನೇ ದೇವರಾಜ್, ನಿನ್ನ ಹಳೇ ಕುಸ್ತಿ ಫೋಟೋಗಳನ್ನು ತೋರಿಸಿದ್ರು... ಕುಸ್ತಿ ಆಡುತ್ತಿದ್ದಾಗ ಇದ್ದ ಬಾಡಿಗೂ ರಾಜಕೀಯ ಕುಸ್ತಿ ಆಡುವಾಗ ಇರುವ ಬಾಡಿಗೂ ವ್ಯತ್ಯಾಸ ಬರುತ್ತದೆ ಎಂದು ಹೇಳುವ ಮೂಲಕ ಎಲ್ಲರನ್ನು ನಗಿಸಿದರು.

ಮಟ್ಟಿಯಲ್ಲಿ ತೊಡೆ ತಟ್ಟಿ, ಧೂಳೆಬ್ಬಿಸಿದ ಪೈಲ್ವಾನರು...

ದಸರಾ ನಾಡಕುಸ್ತಿ ಪಂದ್ಯಾವಳಿಯ ಮೊದಲ ದಿನ 38 ಜೋಡಿಗಳ ವಿರುದ್ಧ ಸೆಣಸಾಟ ನಡೆಯಿತು. ಮಟ್ಟಿಯಲ್ಲಿ ತೊಡೆ ತಟ್ಟಿದ ಪೈಲ್ವಾನರು, ಧೂಳೆಬ್ಬಿಸಿದರು. ಮೊದಲ ಮಾರ್ಫಿಟ್ ಕುಸ್ತಿ(1 ಗಂಟೆ ಅವಧಿ)ಯಲ್ಲಿ ಪೈಪೋಟಿಗಿಳಿದ ಕೊಲ್ಲಾಪುರದ ಪೈಲ್ವಾನ್ ಸಿದ್ದಶ್ವರ್ ಮೌಲಿ ಜಮದಾಳೆ ಹಾಗೂ ಹರಿಯಾಣದ ವಿಕಾಸ್ ಕಾಳ ಗೆಲುವಿಗಾಗಿ ಸೆಣಸಾಟ ನಡೆಸಿದರು. ಕಡೆ ಹಂತದವರೆಗೂ ಪೈ.ಸಿದ್ದಶ್ವರ್ ಮೌಲಿ ಜಮದಾಳೆ, ಹಲವು ಬಗೆಯ ತಂತ್ರಗಳನ್ನು ಬಳಸಿ ಚಿತ್ ಮಾಡುವ ಯತ್ನ ನಡೆಸಿದರೂ ಫಲ ಸಿಗಲಿಲ್ಲ. ಕಡೆಗೆ ಪಂದ್ಯ ಸಮವೆಂದು ಘೋಷಣೆ ಮಾಡಲಾಯಿತು.

ನಂತರ ಮಹದೇವರ ಪೈ.ವಿಕಾಸ್ ಹಾಗೂ ಕೊಲ್ಲಾಪುರದ ಪೈ.ಸಾಗರ್ ಚೌಗ್ಲೆ ವಿರುದ್ಧ ನಡೆದ 20 ನಿಮಿಷಗಳ ಕಾಳಗವೂ ಡ್ರಾನಲ್ಲಿ ಅಂತ್ಯಗೊಂಡಿತು. ಮೈಸೂರಿನ ಪೈ.ಭೈರನಾಯಕ ಹಾಗೂ ಸತೀಸ್ ಕಳಲೆ ವಿರುದ್ಧದ ಪಂದ್ಯವೂ ಸಮವಾಯಿತು. ಬಳಿಕ ರಮ್ಮನಹಳ್ಳಿಯ ಪೈ.ಕೃಷ್ಣಗೋಪಾಲ್, ಮಹಮ್ಮದ್ ತಬಿಸ್ ಖಾನ್ ವಿರುದ್ಧ ಗೆಲುವು ಪಡೆದರು.

ಹೆಣ್ಣುಮಕ್ಕಳ ಕುಸ್ತಿಯಲ್ಲಿ ಕ್ಯಾತಮಾರನಹಳ್ಳಿ ಪೈ.ಮಹಾದೇವಿ ವಿರುದ್ಧ ಬನ್ನೂರಿನ ಪೈ.ಜಾನವಿ, ಅಗ್ರಹಾರದ ಪೈ.ರೇಖಾ ವಿರುದ್ಧ ಕ್ಯಾತಮಾರನಹಳ್ಳಿಯ ರಾಜೇಶ್ವರಿ, ಕ್ಯಾತಮಾರನಹಳ್ಳಿ ಪೈ.ದೇವಿಕ ವಿರುದ್ಧ ಗಾಣಿಗನಕೊಪ್ಪಲು ನಂದಿನಿ ವಿಜಯ ಸಾಧಿಸಿದರು.

ಯೋಗ ದಸರಾಕ್ಕೆ ಶಾಸಕ ನಾಗೇಂದ್ರ ಚಾಲನೆ

ದೇಹ ಸದೃಢವಾಗಿರಬೇಕೇ ನೀವೂ ಯೋಗ ಮಾಡಿ



ನಗರದ ಓವೆಲ್ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಸರಾ ಮತ್ತು ಯೋಗ ನೃತ್ಯ ರೂಪಕಕ್ಕೆ ಶಾಸಕ ಎಲ್. ನಾಗೇಂದ್ರ ಸೋಮವಾರ ಸಂಜೆ ಚಾಲನೆ ನೀಡಿದರು.



ನಿಧಿಶ್ರಿ ಮತ್ತು ನಿಖಿತ ತುಂಡ 'ಮಾ ತುಜೇ ಸಲಾಂ' ಗೀತೆಗೆ ಯೋಗ ನೃತ್ಯ ರೂಪಕ ಪ್ರದರ್ಶಿಸಿದರು

ಮೈಸೂರು, ಸೆ.26(ಜಿಎ)– ಯೋಗ ಎಂಬುದು ದೇಹವನ್ನು ಸದೃಢವಾಗಿಟ್ಟು ಕೊಳ್ಳಲು ಸಹಕಾರಿಯಾಗಿದೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ದಸರಾ ಮಹೋತ್ಸವದ ಅಂಗವಾಗಿ ನಗರದ ಓವೆಲ್ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಸರಾ ಮತ್ತು ಯೋಗ ನೃತ್ಯ ರೂಪಕಕ್ಕೆ ಶಾಸಕ ಎಲ್. ನಾಗೇಂದ್ರ ಸೋಮವಾರ ಸಂಜೆ ಚಾಲನೆ ನೀಡಿ ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಚ್.ಡಿ. ಭಾಸ್ಕರ್, ಯೋಗಿ ದೇವರಾಜ್, ಎ.ಪ್ರಭು, ಅರ್ಪಣ ಸುರೇಂದ್ರ ಬಾ.ಸು. ಅರವಿಂದ, ಗೀತ ಕುಮಾರ್, ಎಂ.ಎಸ್. ರಮೇಶ್ ಕುಮಾರ್ ಮತ್ತು ಶಿವ ಪ್ರಕಾಶ್ ಅವರಿಗೆ 'ಯೋಗ ಸಿರಿ' ಪ್ರಶಸ್ತಿ ನೀಡಿ ಅಭಿನಂದಿಸಿ ಮಾತನಾಡುತ್ತಿದ್ದರು.

ಪ್ರಧಾನ ಮಂತ್ರಿ ಮೋದಿ ಅವರು 2015ರಲ್ಲಿ ಯೋಗ ದಿನವನ್ನು ಘೋಷಣೆ ಮಾಡಬೇಕು ಎಂದು ವಿಶ್ವಸಂಸ್ಥೆ ಮನವಿ ಮಾಡಿದ್ದಾಗ ಅದಕ್ಕೆ ಪುರಸ್ಕಾರ ದೊರೆಯಿತು. ನಂತರ ಮೊದಲನೇ ವರ್ಷವೇ ವಿಶ್ವದ ಬಹುತೇಕ ದೇಶಗಳು ಯೋಗವನ್ನು ಭಾರತದೊಂದಿಗೆ ಕೈಜೋಡಿಸಿ, ವಿಶ್ವ ಯೋಗ ದಿನವನ್ನು ಯಶಸ್ವಿಗೊಳಿಸಿದರು. ಅದರ ಕೀರ್ತಿ ನಮ್ಮ ಹೆಮ್ಮೆಯ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಈ ಬಾರಿ ವಿಶ್ವ ಯೋಗ ದಿನದಂದು ಪ್ರಧಾನಿಗಳು ಮೈಸೂರಿಗೆ ಆಗಮಿಸಿ ಅರಮನೆ ಆವರಣದಲ್ಲಿ ಸುಮಾರು 15 ಸಾವಿರ ಯೋಗ ಪಟುಗಳೊಂದಿಗೆ ಯೋಗ ಪ್ರದರ್ಶನ ನೀಡಿದರು. ಮೈಸೂರು ವಿಶ್ವ ಮಟ್ಟಕ್ಕೆ ತಲುಪಿತು. ಮೈಸೂರಿನಲ್ಲಿ ಕೆ.ಪಟ್ಟಾಭಿ ಜೋಯಿಸ್, ಕೃಷ್ಣಮಾಚಾರ್ ಸುಂದರ ರಾಜ ಸೇರಿದಂತೆ ಅನೇಕರು ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ ಎಂದರು.

ಯೋಗ ಮಾಡುವುದೇ ನಮ್ಮ ಯೋಗ. ವಿಶ್ವದ ಅನೇಕ ದೇಶದ ಪ್ರಜೆಗಳು ನಗರದ ಗೋಕುಲಂ ಬಡಾವಣೆಯಲ್ಲಿ ಯೋಗಾಭ್ಯಾಸ ಮಾಡುತ್ತಿದ್ದಾರೆ. ಆದರೆ, ನಮ್ಮವರೇ ಯೋಗದ ಮಹತ್ವ ಅರಿಯದಿರುವುದು ವಿಷಾದಕಾರಿ ಸಂಗತಿ ಎಂದರು. ಯೋಗ ಮಾಡಿದರೆ, ದೈಹಿಕ ಮತ್ತು ಮಾನಸಿಕವಾಗಿ ಸದೃಢವಾಗಿರಬಹುದು. ಇದರಿಂದ ಜೀವನ ಶೈಲಿಯೂ ಬದಲಾಗುತ್ತದೆ. ಪ್ರತಿಯೊಬ್ಬರು ಯೋಗಾಭ್ಯಾಸ ಮಾಡಿ ಎಂದು ಕರೆ ನೀಡಿದರು.

ಮಂಡ್ಯ ಜಿಲ್ಲೆಯ ನಿಧಿಶ್ರಿ ಮತ್ತು ನಿಖಿತ ತಂಡ 'ಮಾ ತುಜೇ ಸಲಾಂ' ಗೀತೆಗೆ ಯೋಗ ನೃತ್ಯ ರೂಪಕ ಪ್ರದರ್ಶಿಸಿದರು.

ಯೋಗ ದಸರಾ ಕಾರ್ಯಕ್ರಮ : ಸೆ.27ರ ಬೆಳಗ್ಗೆ 8 ರಿಂದ 9ರವರೆಗೂ ನಗರದ ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್‌ನಲ್ಲಿ ಜನ ಪ್ರತಿನಿಧಿಗಳು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗೆ ಯೋಗ ವಾಹಿನಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸೆ.28ರ ಬೆಳಗ್ಗೆ 6 ರಿಂದ 8ರವರೆಗೂ ಮೈಸೂರು ಅರಮನೆ ಆವರಣದಲ್ಲಿ ನಡೆಯಲಿರುವ ಯೋಗ ಸಂಭ್ರಮ ಕಾರ್ಯಕ್ರಮದಲ್ಲಿ ಯೋಗಪಟುಗಳು, ಯೋಗಾಸಕ್ತರು, ವಿದ್ಯಾರ್ಥಿಗಳು, ಸಾರ್ವಜನಿಕರು ಮತ್ತು ಸರ್ವ ಧರ್ಮ ಗುರುಗಳ ಸಮಕ್ಷಮದಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ಪ್ರಯುಕ್ತ 75 ವಿಶಿಷ್ಟ ಯೋಗಾಸನ ಪ್ರದರ್ಶನ ನಡೆಯಲಿದೆ.

ಸೆ.29ರಂದು ಕರ್ನಾಟಕ ವಸ್ತು ಪ್ರದರ್ಶನದ ಆವರಣದಲ್ಲಿ ಬೆಳಗ್ಗೆ 9 ರಿಂದ ಸಂಜೆ 5ರವರೆಗೂ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆ ಆಯೋಜಿಸಿದ್ದು, ಸೆ.30ರಂದು ಬೆಳಗ್ಗೆ 6ರಿಂದ 8ರವರೆಗೂ ಅರಮನೆ ಆವರಣದಲ್ಲಿ ಯೋಗ ಸರಪಳಿ ನಡೆಯಲಿದ್ದು, ಯೋಗಾಸಕ್ತರು, ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಲು ಅವಕಾಶವಿದೆ.

ಕಾರ್ಯಕ್ರಮದಲ್ಲಿ ಯೋಗ ದಸರಾ ಉಪಸಮಿತಿ ಅಧ್ಯಕ್ಷ ಬಾಲಕೃಷ್ಣ, ಉಪಾಧ್ಯಕ್ಷರಾದ ಈಶ್ವರ್, ಕೆ.ವೈ. ಮಂಜು, ಜೆ.ಸಿ. ಯೋಗೇಶ್ ಕುಮಾರ್, ಯೋಗ ದಸರಾ ಉಪಸಮಿತಿ ಹಾಗೂ ಭೂ ದಾಖಲೆಗಳ ಉಪನಿರ್ದೇಶಕಿ ಆದ ಸೀಮಂತಿನಿ, ಕಾರ್ಯಾಧ್ಯಕ್ಷ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಆದ ಜಿ.ಆರ್.ಮಹೇಶ್, ಕಾರ್ಯದರ್ಶಿ ಹಾಗೂ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇನ್ನಿಲ್ಲದವರಿಂದ ಕಾವ್ಯ ವಾಚನ! ಚಾ.ನಗರ ಸಂಸದ ಪ್ರತಾಪ್ ಸಿಂಹ ಮುಖ್ಯ ಅತಿಥಿ!!

ದಸರಾ ಕವಿಗೋಷ್ಠಿ ಆಹ್ವಾನ ಪತ್ರಿಕೆಯಲ್ಲಿ ಅವಾಂತರ

ಮೈಸೂರು, ಸೆ.26– ವಿಶ್ವವಿಖ್ಯಾತ ಮೈಸೂರು ದಸರಾ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯಲ್ಲಿ ಪಾಲ್ಗೊಳ್ಳುವವರ ಹೆಸರು ಮುದ್ರಿತವಾಗಿರುತ್ತದೆ. ಅದನ್ನು ನೋಡಿ ಕೆಲ ಗಣ್ಯರು, ಕಲಾವಿದರು, ಸಾಹಿತಿಗಳು ಅಥವಾ ಕವಿಗಳನ್ನು ನೋಡಲು ಹಾಗೂ ಅವರ ಭಾಷಣ ಕೇಳಲು ಅಭಿಮಾನಿಗಳು ಕಾರ್ಯಕ್ರಮಗಳಿಗೆ ತೆರಳುತ್ತಾರೆ. ವಿಪರ್ಯಾಸವೆಂದರೆ ಆಹ್ವಾನ ಪತ್ರಿಕೆಯಲ್ಲಿ ತಮ್ಮ ಹೆಸರು ಮುದ್ರಿತವಾಗಿರುವುದು ಸಂಬಂಧಪಟ್ಟವರಿಗೆ ಗೊತ್ತೆ ಇರುವುದಿಲ್ಲ. ಇನ್ನು ಅವರು ಬಂದು ಭಾಗವಹಿಸುವುದು ಎಲ್ಲಿಂದ ಬಂತು. ಅತ್ಯಂತ ದುಃಖದ ವಿಷಯವೆಂದರೆ ಕಳೆದ 3 ವರ್ಷದ ಹಿಂದೆ ನಿಧನರಾಗಿರುವ ಕವಿಯೊಬ್ಬರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುವ ಮೂಲಕ ಅಧಿಕಾರಿಗಳು ತಮ್ಮ ಅತೀ ಬುದ್ಧಿವಂತಿಕೆ ಪ್ರದರ್ಶಿಸಿದ್ದಾರೆ.



ದಸರಾ ಕವಿಗೋಷ್ಠಿ ಅ.3ರಂದು ನಡೆಯಲಿದ್ದು, ಈ ಕವಿಗೋಷ್ಠಿಯಲ್ಲಿ ಕವಿ ಜಿ.ಕೆ.ರವೀಂದ್ರ ಕುಮಾರ್ ಭಾಗವಹಿಸಲಿದ್ದಾರೆ ಎಂದು ಆಹ್ವಾನ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ಆದರೆ ಜಿ.ಕೆ.ರವೀಂದ್ರ ಕುಮಾರ್ ಅವರು, 2019ರ ಅ.9ರಂದು ನಿಧನರಾಗಿದ್ದಾರೆ. ಹೀಗಿರುವಾಗ ದಿವಂಗತರು ಈ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿ ಕಾವ್ಯ ವಾಚನ ಮಾಡುವುದಾದರೂ ಹೇಗೆ? ಎಂದು 'ಮೈಸೂರು ಮಿತ್ರ'ನಿಗೆ ಕರೆ ಮಾಡಿದ ಅಭಿಮಾನಿಯೊಬ್ಬರು ಬೇಸರದಿಂದಲೇ ಪ್ರಶ್ನಿಸಿದರು. ಅಧಿಕಾರಿ ವರ್ಗದವರು ಆಹ್ವಾನ ಪತ್ರಿಕೆಯಲ್ಲಿ ಹೆಸರು ಮುದ್ರಿಸುವ ಮುನ್ನಾ ಸಂಬಂಧಪಟ್ಟವರನ್ನು ಸಂಪರ್ಕಿಸಿ ಅವರ ಅನುಮತಿ ಪಡೆಯುವ ಪರಿಪಾಠ ಬೆಳೆಸಿಕೊಳ್ಳದೇ ಇರುವುದೇ ಈ ಅವಾಂತರಕ್ಕೆ ಕಾರಣವಾಗಿದೆ.

ಸಂಸದರ ಕ್ಷೇತ್ರವೇ ಬದಲು: ಕವಿಗೋಷ್ಠಿ ಆಹ್ವಾನ ಪತ್ರಿಕೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸದಸ್ಯರಾದ ಪ್ರತಾಪ್ ಸಿಂಹ ಮುಖ್ಯ ಅತಿಥಿ ಎಂದು ನಮೂದಿಸುವ ಮೂಲಕ ಯಡವಟ್ಟು ಮಾಡಿದ್ದಾರೆ. ಇಲ್ಲಿ ಕಾಡುತ್ತಿರುವ ಪ್ರಶ್ನೆ ಎಂದರೆ ಕವಿಗೋಷ್ಠಿ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಬೇಕಾಗಿರುವುದು ಮೈಸೂರು–ಕೊಡಗು ಸಂಸದರೇ ಅಥವಾ ಚಾಮರಾಜನಗರ ಸಂಸದರೇ ಎಂಬುದು. ಕವಿಗೋಷ್ಠಿ ಆಹ್ವಾನ ಪತ್ರಿಕೆಯಲ್ಲಿ ಬದಲಾಗಿರುವುದು ಸಂಸದರ ಕ್ಷೇತ್ರವೇ ಅಥವಾ ಹೆಸರೇ? ಎಂದು ಕೆಲವರು ತಲೆಬಿಸಿ ಮಾಡಿಕೊಂಡಿದ್ದಾರೆ. ಕೆಲವರಂತೂ ಚಾಮರಾಜನಗರ ಸಂಸದರು ವಿ.ಶ್ರೀನಿವಾಸ ಪ್ರಸಾದ್ ಎಂಬುದು ಈ ಅಧಿಕಾರಿಗಳಿಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರೆ ಮತ್ತೆ ಕೆಲವರು ಪ್ರತಾಪ್ ಸಿಂಹ ಮೈಸೂರು–ಕೊಡಗು ಸಂಸದರು ಎಂಬುದು ಅಧಿಕಾರಿಗಳಿಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸುತ್ತಿದ್ದಾರೆ. ಒಟ್ಟಾರೆ ಈ ಅಧಿಕಾರಿಗಳು ಮುಖ್ಯ ಅತಿಥಿಯಾಗಿ ಯಾವ ಸಂಸದರನ್ನು ಕರೆಯಲು ತೀರ್ಮಾನಿಸಿದ್ದರು ಎಂಬುದೇ ಗೊಂದಲಮಯವಾಗಿದೆ.

ದಸರಾ ಉದ್ಘಾಟನಾ ವೇದಿಕೆಯಲ್ಲಿ ಸ್ಥಳೀಯರಿಗೆ ಅವಕಾಶ ಸಿಗಲಿಲ್ಲ

ಮೈಸೂರು: ನಾಡಹಬ್ಬದ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಮೇಯರ್ ಸೇರಿದಂತೆ ಮೈಸೂರಿನ ಯಾವೊಬ್ಬ ಗಣ್ಯರಿಗೂ ಸ್ಥಾನ ದೊರೆಯಲಿಲ್ಲ. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಸೋಮವಾರ ಆಯೋಜಿಸಿದ್ದ ದಸರಾ ಮಹೋತ್ಸವ ಉದ್ಘಾಟನೆಯನ್ನು ರಾಷ್ಟ್ರಪತಿಗಳು ನೆರವೇರಿಸಿದರು. ಕಾರ್ಯಕ್ರಮದ ವೇದಿಕೆಯಲ್ಲಿ ರಾಷ್ಟ್ರಪತಿಗಳೂ ಸೇರಿದಂತೆ ಒಟ್ಟು 13 ಗಣ್ಯರಿಗೆ ಆಸನ ವ್ಯವಸ್ಥೆ ಮಾಡಲಾಗಿತ್ತಾದರೂ, ನಂತರ ಬಂದ ಭದ್ರತಾ ಅಧಿಕಾರಿಗಳು, 6 ಆಸನಗಳನ್ನು ತೆಗೆಸಿ ಕೇವಲ 7 ಮಂದಿಗೆ ಸೀಮಿತಗೊಳಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಸಚಿವ ವಿ.ಸುನೀಲ್‌ಕುಮಾರ್ ಅವರಿಗೆ ಮಾತ್ರ ಅವಕಾಶ ಎಂಬುದು ಖಚಿತವಾಗುತ್ತಿದ್ದಂತೆಯೇ ಮೈಸೂರು ಪ್ರಥಮ ಪ್ರಜೆ ಶಿವಕುಮಾರ್, ಅಧ್ಯಕ್ಷತೆ ವಹಿಸಬೇಕಿದ್ದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ ಅವರಿಗೆ ವೇದಿಕೆಯಲ್ಲಿ ಅವಕಾಶ ಸಿಗಲಿಲ್ಲ. ವೇದಿಕೆ ಎದುರು ವ್ಯವಸ್ಥೆ ಮಾಡಿದ್ದ ಶಾಸಕರು, ವಿಧಾನಪರಿಷತ್ ಸದಸ್ಯರು, ನಿಗಮ–ಮಂಡಳಿ ಅಧ್ಯಕ್ಷರ ಎನ್‌ಕ್ಲೋಸರ್‌ನಲ್ಲಿ ಹೋಗಿ ಕುಳಿತರು. ಸರ್ಕಾರದ ಆದೇಶದ ಪ್ರಕಾರ ಯಾವುದೇ ಸರ್ಕಾರಿ ಕಾರ್ಯಕ್ರಮಗಳಲ್ಲಿ ಅಲ್ಲಿಯ ಸ್ಥಳೀಯ ಶಾಸಕರೇ ಅಧ್ಯಕ್ಷತೆ ವಹಿಸಬೇಕು. ಅದರಂತೆ ಜಿ.ಟಿ.ದೇವೇಗೌಡರಿಗೆ ಈ ವೇದಿಕೆಯಲ್ಲಿ ಅವಕಾಶ ಕಲ್ಪಿಸಲೇಬೇಕಾಗಿತ್ತು. ಆದರೆ ದಸರಾದಂತಹ ವಿಶ್ವಖ್ಯಾತಿ ಹಬ್ಬದ ಉದ್ಘಾಟನಾ ಸಮಾರಂಭದಲ್ಲಿ ಅವರಿಗೆ ಅವಕಾಶ ನೀಡದೆ ಅವಮಾನಿಸಲಾಗಿದೆ ಎಂದು ಅವರ ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ನಿಗಮ–ಮಂಡಳಿ ಅಧ್ಯಕ್ಷರಿಗೆ ಆಸನ ವ್ಯವಸ್ಥೆ ಮಾಡಿದ್ದ ಸ್ಥಳದಿಂದ ವೇದಿಕೆ ಸರಿಯಾಗಿ ಕಾಣುತ್ತಿರಲಿಲ್ಲವಾದ್ದರಿಂದ ಕಾಪುಸಿದ್ದಲಿಂಗಸ್ವಾಮಿ ಸೇರಿದಂತೆ ಹಲವರು ಅಲ್ಲಿಂದ ಹಿರಿಯ ಅಧಿಕಾರಿಗಳಿಗೆ ವ್ಯವಸ್ಥೆ ಮಾಡಿದ್ದ ಆಸನಗಳಲ್ಲಿ ಕುಳಿತರು. ಇದರಿಂದ ಉಂಟಾದ ಗೊಂದಲ ನಿವಾರಿಸಲು ಬಂದ ಪೊಲೀಸರ ವಿರುದ್ಧ ಕಾಪು ತಿರುಗಿ ಬಿದ್ದರು. ಕಡೆಗೂ ಅವರು ತಮಗಾಗಿ ಮೀಸಲಿರಿಸಿದ್ದ ಆಸನಕ್ಕೆ ಹೋಗಲೇ ಇಲ್ಲ.

ಮೈಸೂರಲ್ಲಿ ಐಎಸ್‌ಎಂಸಿಯಿಂದ 22,500 ಕೋಟಿ ಬಂಡವಾಳ ಹೂಡಿಕೆ

- ಇದೇ ಮೊದಲು ಮೈಸೂರಲ್ಲಿ ಕೈಗಾರಿಕಾ ದಸರಾ; ಸಚಿವ ಮುರುಗೇಶ್ ನಿರಾಣಿ ಚಾಲನೆ
- ಮೈಸೂರನ್ನು ಪ್ರಮುಖ ಕೈಗಾರಿಕಾ ಹಬ್ ಮಾಡಲು ಸರ್ಕಾರದ ಸರ್ವ ಪ್ರಯತ್ನ

ಮೈಸೂರು, ಸೆ.26(ಆರ್‌ಕೆಬಿ)– ಕೈಗಾರಿಕೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸಾಕಷ್ಟು ಮುನ್ನಡೆ ಸಾಧಿಸುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬಹುರಾಷ್ಟ್ರೀಯ ಕಂಪನಿಯಾದ ಐಎಸ್‌ಎಂಸಿ 22,500 ಕೋಟಿ ರೂ. ಬಂಡವಾಳ ಹೂಡಲು ಮುಂದೆ ಬಂದಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಇಂದಿಲ್ಲಿ ಪ್ರಕಟಿಸಿದರು.

ಮೈಸೂರಿನ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ ನಾಡಹಬ್ಬ ಮೈಸೂರು ದಸರಾ ಪ್ರಯುಕ್ತ ಇದೇ ಮೊದಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರ ಸೋಮವಾರ ಆಯೋಜಿಸಿದ್ದ ಕೈಗಾರಿಕಾ ದಸರಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಐಎಸ್‌ಎಂಸಿ ಕಂಪನಿಯು ಸುಮಾರು 22,500 ಕೋಟಿ ಹೂಡಿಕೆ ಮಾಡುತ್ತಿದ್ದು, ಸೆಮಿಕಂಡಕ್ಟರ್ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರದೊಂದಿಗೆ ಎಂಒಯುಗೆ ಸಹಿ ಹಾಕಿದೆ. ಇದರಿಂದ ಈ ಭಾಗದಲ್ಲಿ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ರಾಜಧಾನಿ ಬೆಂಗಳೂರಿನಲ್ಲಿ ಈಗಾಗಲೇ ಸಾಕಷ್ಟು ಕೈಗಾರಿಕೆಗಳು ಸ್ಥಾಪನೆಯಾಗಿರುವುದರಿಂದ ನಮ್ಮ ಸರ್ಕಾರ 2 ಮತ್ತು 3ನೇ ಹಂತದ ನಗರಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಒತ್ತು ಕೊಡುತ್ತಿದೆ. ಮೈಸೂರು ಕೂಡ ನಮ್ಮ ಆದ್ಯತೆಯ ನಗರಗಳಲ್ಲಿ ಒಂದಾಗಿದೆ ಎಂದರು.



ಮೈಸೂರಿನಲ್ಲಿ ಇದೇ ಮೊದಲು ಕೈಗಾರಿಕಾ ದಸರಾಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ್ ನಿರಾಣಿ ಚಾಲನೆ ನೀಡಿದರು. ಚಿತ್ರದಲ್ಲಿ ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ಇನ್ನಿತರರನ್ನು ಕಾಣಬಹುದು.

ಬೆಂಗಳೂರಿನಲ್ಲಿ ನ.2ರಿಂದ 4ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕಾಗಿ ಸಿದ್ಧತೆಗಳು ಕೈಗೊಂಡಿದ್ದು, ಇತ್ತೀಚೆಗೆ ದಾವೋಸ್, ಅಮೇರಿಕಾ ಹಾಗೂ ಜಪಾನ್‌ಗೆ ಭೇಟಿ ನೀಡಿದ ವೇಳೆ ವಿಶ್ವದ ಮುಂಚೂಣಿಯಲ್ಲಿರುವ ಉದ್ಯಮಿಗಳನ್ನು ಭೇಟಿಯಾಗಿ ರಾಜ್ಯದಲ್ಲಿ ಬಂಡವಾಳ ಹೂಡಲು ಆಹ್ವಾನ ನೀಡಿದ್ದೇವೆ. ಅನೇಕರು ಆಸಕ್ತಿ ತೋರಿಸಿದ್ದಾರೆ. ಈ ಬಾರಿಯ ಹೂಡಿಕೆದಾರರ ಸಮಾವೇಶದಲ್ಲಿ ನಮಗೆ ಅಂದಾಜು 5 ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗಿ 10 ಲಕ್ಷ ಹುದ್ದೆಗಳು ಸೃಷ್ಟಿಯಾಗುವ ವಿಶ್ವಾಸವಿದೆ ಎಂದರು.

ವಿಶ್ವದಲ್ಲೇ ಕೈಗಾರಿಕೆಗೆ ಹೊಸ ಮಾನ್ಯತೆ ತಂದುಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ್ ನನಗೆ ಎಂದೆಂದಿಗೂ ಆದರ್ಶಪ್ರಾಯರು. ಈ ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ಕೂಡ ನನಗೆ ಪ್ರಾತಃ ಸ್ಮರಣೀಯರು ಎಂದು ನಿರಾಣಿ ಸ್ಮರಿಸಿದರು.

ಶತಮಾನಗಳ ಹಿಂದೆ ಕೈಗಾರಿಕೆಗಳ ಸ್ಥಾಪನೆಗೆ ಮುನ್ನುಡಿ ಬರೆದ ಮೊದಲ ಮಹಾರಾಜರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್. ಕರ್ನಾಟಕ ಇಂದು ಕೈಗಾರಿಕೆ, ಶಿಕ್ಷಣ, ಆರೋಗ್ಯ ಇಷ್ಟೊಂದು ಸಾಧನೆ ಮಾಡಿದೆ ಎಂದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ ಎಂದು ಹೇಳಿದರು.

ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ನಮ್ಮ ಶಿಕ್ಷಣ ಸಂಸ್ಥೆ ಸೇರಿದಂತೆ ಮತ್ತಿತರ ಕಡೆ ಕಡ್ಡಾಯವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯನವರ ಪ್ರತಿಮೆಗಳನ್ನು ಸ್ಥಾಪನೆ ಮಾಡಿ ಅವರ ಆದರ್ಶಗಳನ್ನು ಅನುಸರಿಸುತ್ತಿದ್ದೇವೆ ಎಂದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿಯೂ ಆದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಹರ್ಷವರ್ಧನ್, ಮೈಸೂರು ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಆರ್.ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಕರಗ ಉತ್ಸವದೊಂದಿಗೆ ಮಡಿಕೇರಿ ದಸರಾಗೆ ಚಾಲನೆ






ಮಡಿಕೇರಿ,ಸೆ.26– ಒಂದೂವರೆ ಶತಮಾನಕ್ಕೂ ಮೀರಿದ ಪೌರಾಣಿಕ ಹಿನ್ನೆಲೆ ಹೊಂದಿರುವ ನಾಲ್ಕು ಶಕ್ತಿ ದೇವತೆಗಳ 'ಕರಗ ಉತ್ಸವ'ಕ್ಕೆ ನಗರದ ಪಂಪಿನ ಕೆರೆಯ ಬನ್ನಿಮಂಟಪದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸುವ ಮೂಲಕ ಸೋಮವಾರ ಸಂಜೆ ವಿದ್ಯುಕ್ತ ಚಾಲನೆ ನೀಡಲಾಯಿತು. ಆ ಮೂಲಕ ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ ಸಂದೇಶ ಸಾರುವ ಮಡಿಕೇರಿ ದಸರಾ ಉತ್ಸವ ಆರಂಭಗೊಂಡಿತು. ಸಹಸ್ರ ಭಕ್ತ ಜನ ಸಮೂಹದ ನಡುವೆ ಮಡಿಕೇರಿ ನಗರ ದಸರಾ ಸಮಿತಿ, ದಶಮಂಟಪ ಸಮಿತಿಯ ಪದಾಧಿಕಾರಿಗಳು, ಸಾರ್ವಜನಿಕ ಪ್ರಮುಖರು, ಜನಪ್ರತಿನಿಧಿಗಳು, ಅಧಿಕಾರಿಗಳು ನಾಲ್ಕು ಶಕ್ತಿ ದೇವತೆಗಳ ಕರಗಗಳಿಗೆ ಸಂಜೆ ಪೂಜೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ವ್ರತಧಾರಿಗಳಿಗೆ ಗೌರವ: ಕರಗ ಮೆರವಣಿಗೆಯ ಆರಂಭಕ್ಕೂ ಮುನ್ನ ಶಾಸಕ ಕೆ.ಜಿ.ಬೋಪಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ನಾಲ್ಕು ಶಕ್ತಿದೇವತೆಗಳ ಕರಗವನ್ನು ಹೊರುವ ವ್ರತಧಾರಿಗಳಿಗೆ ಹೂಮಾಲೆ, ಶಾಲು ಹೊದಿಸಿ ಗೌರವಿಸಿದರು.

ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆ ಒಳಗೊಂಡ ನಗರದ ರಾಜಾಸೀಟು ಬಳಿಯ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ಕರಗವನ್ನು ವ್ರತಧಾರಿ ಪಿ.ಪಿ.ಚಾಮಿ, ಗೌಳಿ ಬೀದಿಯ ಶ್ರೀ ಕಂಚಿಕಾಮಾಕ್ಷಿ ಕರಗವನ್ನು ಪೂಜಾರಿ ನವೀನ್ ಕುಮಾರ್, ನಗರಸಭೆ ಬಳಿಯ ಶ್ರೀ ದಂಡಿನ ಮಾರಿಯಮ್ಮ ಕರಗವನ್ನು 50ನೇ ಬಾರಿಗೆ ಜಿ.ಎ.ಉಮೇಶ್ ಮತ್ತು ಶ್ರೀ ಕೋಟೆ ಮಾರಿಯಮ್ಮ ಕರಗವನ್ನು ಉಮೇಶ್ ಸುಬ್ರಮಣಿ ಹೊರುವ ಮೂಲಕ ನಗರ ಸಂಚಾರ ಆರಂಭಿಸಿದರು.

ನವರಾತ್ರಿ ಉತ್ಸವದ ಆರಂಭದ ಹಿನ್ನೆಲೆಯಲ್ಲಿ ಸೋಮವಾರ ಮಧ್ಯಾಹ್ನ ನಾಲ್ಕು ಶಕ್ತಿದೇವತೆಗಳ ದೇವಸ್ಥಾನಗಳಿಂದ ವ್ರತಧಾರಿಗಳೊಂದಿಗೆ ದೇವಾಲಯ ಸಮಿತಿಯವರು ಕರಗ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಹೊತ್ತು ಬನ್ನಿಮಂಟಪಕ್ಕೆ ತೆರಳಿ ಅಗತ್ಯ ಪೂಜಾ ವಿಧಿ–ವಿಧಾನಗಳೊಂದಿಗೆ ಅತ್ಯಾಕರ್ಷಕವಾಗಿ ಕರಗಗಳನ್ನು ಕಟ್ಟಿ ಹೂವುಗಳಿಂದ ಅಲಂಕರಿಸಿ ಸಂಜೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದರು.

ಕರಗ ಮೆರವಣಿಗೆಯ ಆರಂಭದಲ್ಲಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಮಡಿಕೇರಿ ದಸರಾ ಸಮಿತಿ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷರೂ ಆದ ಅನಿತಾ ಪೂವಯ್ಯ, ಕಾರ್ಯಾಧ್ಯಕ್ಷ ಕೆ.ಎಸ್.ರಮೇಶ್, ಉಪಾಧ್ಯಕ್ಷೆ ಸವಿತಾ ರಾಕೇಶ್, ಖಜಾಂಚಿ ಶ್ವೇತಾ, ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ, ಎಸ್.ಪಿ. ಕ್ಯಾಪ್ಟನ್ ಎಂ.ಎ. ಅಯ್ಯಪ್ಪ, ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ದಶ ಮಂಟಪ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ದಸರಾ ಸಮಿತಿಯ ವಿವಿಧ ಉಪಸಮಿತಿಗಳ ಪದಾಧಿಕಾರಿಗಳು, ಗಣ್ಯರು ಹಾಜರಿದ್ದರು.

ನಗರ ಪ್ರದಕ್ಷಿಣೆ

ಪಂಪಿನಕೆರೆ ಬಳಿಯಿಂದ ಹೊರಟ ನಾಲ್ಕು ಕರಗಗಳು ಮಹದೇವಪೇಟೆಯ ಚೌಡೇಶ್ವರಿ ದೇವಾಲಯ, ಕನ್ನಿಕಾ ಪರಮೇಶ್ವರಿ ದೇಗುಲದಲ್ಲಿ ಪೂಜೆ ಸ್ವೀಕರಿಸಿದ ಬಳಿಕ ಸಂಪ್ರದಾಯದಂತೆ ಪೇಟೆ ಶ್ರೀರಾಮಮಂದಿರ ತಲುಪಿ, ಅಲ್ಲಿಯೂ ಕರಗಗಳಿಗೆ ಪೂಜೆ ಸಲ್ಲಿಸಿದ ಬಳಿಕ ತಮ್ಮ ತಮ್ಮ ದೇವಾಲಯಗಳಿಗೆ ತೆರಳಿದವು.

ಕೂಂಬಿಂಗ್ ವೇಳೆ ನಾಪತ್ತೆಯಾಗಿದ್ದ ಅರಣ್ಯ ವೀಕ್ಷಕ ತರುಣ್ ಮೃತದೇಹ ಕೊಕ್ಕ ಹೊಳೆಯಲ್ಲಿ ಪತ್ತೆ



ಮಡಿಕೇರಿ,ಸೆ.26– ಮಾಕುಟ್ಟ ಮೀಸಲು ಅರಣ್ಯ ವ್ಯಾಪ್ತಿಗೆ ಒಳಪಡುವ ವಿ.ಬಾಡಗ ಗ್ರಾಮದ ಬಳಿ ಕೂಂಬಿಂಗ್‌ಗೆ ತೆರಳಿದ್ದ ಸಂದರ್ಭ ನಾಪತ್ತೆಯಾಗಿದ್ದ ಅರಣ್ಯ ವೀಕ್ಷಕ ತರುಣ್‌ಕುಮಾರ್(23) ಅವರ ಮೃತದೇಹ ಸೋಮವಾರ ಕೊಕ್ಕ ಹೊಳೆಯಲ್ಲಿ ಪತ್ತೆಯಾಗಿದೆ. ಪೊಲೀಸ್ ಇಲಾಖೆ, ಅಗ್ನಿ ಶಾಮಕ ದಳ ಮತ್ತು ಎನ್‌ಡಿಆರ್‌ಎಫ್ ಯೋಧರು ಹಾಗೂ ಮಂಗಳೂರಿನ ನುರಿತ ಈಜುಗಾರರ ತಂಡ ತರುಣ್ ಮೃತದೇಹವನ್ನು ನದಿಯಿಂದ ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಘಟನೆ ಹಿನ್ನೆಲೆ: ಬೆಂಗಳೂರಿನ ದೊಮ್ಮಲೂರು ಮೂಲದ ತರುಣ್ ಕುಮಾರ್ ಅರಣ್ಯ ವೀಕ್ಷಕರಾಗಿ ವಿ.ಬಾಡಗ ಗ್ರಾಮದ ಕೊಕ್ಕ ಕ್ಯಾಂಪ್‌ಗೆ ನಿಯೋಜನೆಯಾಗಿದ್ದರು. ಸೆ.23ರ ಸಂಜೆ ತರುಣ್ ಮತ್ತು ನಾಲ್ವರ ತಂಡ ವಿ.ಬಾಡಗ ಗ್ರಾಮದಲ್ಲಿ ಕೂಂಬಿಂಗ್ ಕಾರ್ಯಾಚರಣೆಗೆ ತೆರಳಿದ್ದು, ಈ ವೇಳೆ ತರುಣ್ ದಿಢೀರ್ ಆಗಿ ನಾಪತ್ತೆಯಾಗಿದ್ದರು. ಮಾಹಿತಿ ತಿಳಿದು ಅರಣ್ಯ ಇಲಾಖೆ ಸಿಬ್ಬಂದಿಗಳು, ಪೊಲೀಸ್ ಇಲಾಖೆ ಅರಣ್ಯದಲ್ಲಿ ಹುಡುಕಾಟ ನಡೆಸಿದ್ದರೂ ತರುಣ್ ಪತ್ತೆಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಅರಣ್ಯದ ನಡುವೆ ಹರಿಯುವ ಕೊಕ್ಕ ಹೊಳೆಗೆ ತರುಣ್ ಕಾಲು ಜಾರಿ ಬಿದ್ದಿರಬಹುದೆಂದು ಶಂಕಿಸಲಾಗಿತ್ತು.

ಶೋಧಕಾರ್ಯ: ಅಗ್ನಿಶಾಮಕ ದಳ, ಮಡಿಕೇರಿಯಿಂದ ಕರೆಸಿಕೊಂಡಿದ್ದ ಎನ್‌ಡಿಆರ್‌ಎಫ್ ಸಿಬ್ಬಂದಿಗಳ ಒಂದು ತಂಡ, ಪೊಲೀಸ್ ಇಲಾಖೆ ನಿರಂತರವಾಗಿ 3 ದಿನಗಳಿಂದ ಅರಣ್ಯ ಮತ್ತು ನದಿಯಲ್ಲಿ ಶೋಧ ಕಾರ್ಯ ನಡೆಸಿತ್ತಾದರೂ, ಭಾನುವಾರ ಸಂಜೆವರೆಗೂ ತರುಣ್ ಬಗ್ಗೆ ಯಾವುದೇ ಕುರುಹುಗಳು ಪತ್ತೆಯಾಗಿರಲಿಲ್ಲ.

ಎಂದಿನಂತೆ ಸೋಮವಾರ ಬೆಳಗ್ಗೆ ಅಗ್ನಿ ಶಾಮಕ ದಳ ಹಾಗೂ ಎನ್‌ಡಿಆರ್‌ಎಫ್ ಯೋಧರು ಹಾಗೂ ಮುಳುಗು ತಜ್ಞರ ತಂಡ ಕೊಕ್ಕೆಹೊಳೆ ನದಿಯಲ್ಲಿ ಆಕ್ಸಿಜನ್ ಸಿಲಿಂಡರ್ ಬಳಸಿ ಶೋಧ ಕಾರ್ಯ ಆರಂಭಿಸಿತು. ಈ ವೇಳೆ ನದಿ 50 ಅಡಿ ಎತ್ತರದಿಂದ ಧುಮ್ಮಿಕ್ಕುವ ನೀರು ಗುಂಡಿ ಎಂಬಲ್ಲಿನ ಆಳದ ಪ್ರದೇಶದಲ್ಲಿ ಬೆಳಗಿನ 8.30ರ ಹೊತ್ತಿಗೆ ತರುಣ್‌ಮಾರ್ ಮೃತದೇಹ ಪತ್ತೆಯಾಗಿದೆ. ಆ ಮೂಲಕ ನಿಗೂಢವಾಗಿ ನಾಪತ್ತೆಯಾಗಿದ್ದ ಅರಣ್ಯ ವೀಕ್ಷಕ ತರುಣ್ ಕುಮಾರ್ ಪ್ರಕರಣ ದುರಂತ ಅಂತ್ಯ ಕಂಡಿದೆ.

ವಿರಾಜಪೇಟೆ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು. ಈ ಘಟನೆ ಕುರಿತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೃತರ ತಂದೆ ಮುನಿಯಪ್ಪ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲಾ ಉಪ ಅರಣ್ಯ ಸಂರಕ್ಷಣಾ ಅಧಿಕಾರಿ ಶಿವರಾಂ ಬಾಬು, ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿದರು. ತಕ್ಷಣವೇ 2 ಲಕ್ಷ ರೂ. ಪರಿಹಾರ ನೀಡುತ್ತೇವೆ. ಮುಂದಿನ ದಿನಗಳಲ್ಲಿ ಇಲಾಖೆಯ ವತಿಯಿಂದ ಸಿಗಬೇಕಾದ ಸವಲತ್ತುಗಳನ್ನು ನೀಡುವುದಾಗಿ ತಿಳಿಸಿದರು.

ಶವಪರೀಕ್ಷೆ ವೇಳೆ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ ರಾಜೆ ಅರಸ್, ಗ್ರಾಮಾಂತರ ಠಾಣಾಧಿಕಾರಿ ರವಿಕುಮಾರ್, ನಗರ ಠಾಣಾಧಿಕಾರಿ ಶ್ರೀಧರ್, ಬಾಳೆಲೆ, ಬಿಟ್ಟಾಂಗಾಲ ಗ್ರಾಮಸ್ಥರು, ಮಾನವ ಹಕ್ಕು ಆಯೋಗದ ಪಡಿಕಲ್ ಕುಸುಮಾವತಿ ಹಾಗೂ ಮೃತ ತರುಣ್ ಅವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ವುಶು ಕ್ರೀಡಾಕೂಟದಲ್ಲಿ ಕೊಡಗಿನ ಕುವರಿ ಎಸ್.ಪ್ರೀತಿ ರಾಜ್ಯ ಮಟ್ಟಕ್ಕೆ ಆಯ್ಕೆ



ಮಡಿಕೇರಿ, ಸೆ.26– ಉಡುಪಿಯ ಅಜ್ಜರಕಾಡು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ವಿಭಾಗ ಮಟ್ಟದ ದಸರಾ ವುಶು ಕ್ರೀಡಾಕೂಟದಲ್ಲಿ ಮಾದಾಪುರದ ಇಗೋಡ್ಲು ಗ್ರಾಮದ ಎಸ್.ಪ್ರೀತಿ ಚಿನ್ನದ ಪದಕ ಪಡೆದುಕೊಂಡು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ಕೊಡಗು ವುಶು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್.ಸಿ. ಸುದರ್ಶನ್ ತರಬೇತಿ ನೀಡಿದ್ದಾರೆ. ಕೊಡಗರಹಳ್ಳಿಯ ಶಾಂತಿನಿಕೇತನ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈಕೆ ಮಾದಾಪುರದ ಶಿವಜ್ಞಾನಂ ಹಾಗೂ ಜಯಪ್ರಿಯ ದಂಪತಿಗಳ ಪುತ್ರಿ.

ಸೆ.29, ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ಸಾಂಬಾರ ಪದಾರ್ಥಗಳ ಮಳಿಗೆ ಉದ್ಘಾಟನೆ

ಮಡಿಕೇರಿ, ಸೆ.26– ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ಸಾಂಬಾರ ಪದಾರ್ಥಗಳ (ಸ್ಪೈಸಸ್) ಮಳಿಗೆಯ ಉದ್ಘಾಟನೆ ಹಾಗೂ ಸನ್ಮಾನ ಕಾರ್ಯಕ್ರಮ ಸೆ.29 ರಂದು ನಡೆಯಲಿದೆ.

ಅಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮಳಿಗೆಯನ್ನು ಮಾಜಿ ಸಚಿವ ಎಂ.ಸಿ.ನಾಣಯ್ಯ ಉದ್ಘಾಟಿಸಲಿದ್ದಾರೆ. ಏಲಕ್ಕಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಸೂದನ ಎಸ್.ಈರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಪಾಲ್ಗೊಳ್ಳಲಿದ್ದು, ಅತಿಥಿಗಳಾಗಿ ನಗರಸಭಾ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ಸದಸ್ಯರುಗಳಾದ ರಾಜೇಶ್ ಯಲ್ಲಪ್ಪ, ಎಸ್.ಸಿ.ಸತೀಶ್, ಸಹಕಾರ ಸಂಘಗಳ ಉಪನಿಬಂಧಕ ಹೆಚ್.ಎನ್.ರಮೇಶ್, ಸಂಬಾರ ಮಂಡಳಿಯ ಸಹಾಯಕ ನಿರ್ದೇಶಕ ಎಸ್.ಎಸ್.ಬಿಜು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಂ.ಈ.ಮೋಹನ್ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳಾದ ಹುದೇರಿ ಬಿ.ರಾಜೇಂದ್ರ, ಮುದ್ದಂಡ, ಬಿ.ದೇವಯ್ಯ, ಮಾಚೇಟಿರ ಚೋಟು ಕಾವೇರಪ್ಪ ಹಾಗೂ ಬಿ.ಈ.ಬೋಪಯ್ಯ ಅವರನ್ನು ಸನ್ಮಾನಿಸಿ ಗೌರವಿಸಲಾಗುವುದು.

ಸಂಘದಲ್ಲಿ ಕಳೆದ 35–40 ವರ್ಷಗಳಿಂದ ಸ್ಥಗಿತಗೊಂಡಿದ್ದ ಏಲಕ್ಕಿ ಮಾರಾಟ ವ್ಯವಹಾರವನ್ನು ಕಳೆದ ವರ್ಷದಿಂದ ಆರಂಭಗೊಳಿಸಲಾಗಿದ್ದು, ಏಲಕ್ಕಿ ಹಾಗೂ ಇನ್ನಿತರ ಸಾಂಬಾರ ಬೆಳೆಗಾರರಿಗೆ ಉತ್ತಮ ದರ ದೊರಕಿಸಿಕೊಡುವುದು, ಏಲಕ್ಕಿ ಮತ್ತು ಕರಿಮೆಣಸು ಸಂಘದ ಮೂಲಕ ಖರೀದಿಸುವುದು ಹಾಗೂ ಠೇವಣಿ ಇಟ್ಟುಕೊಂಡು ಉತ್ತಮ ದರಕ್ಕೆ ಮಾರಾಟ ಮಾಡಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ಸಂಘದ್ದಾಗಿದೆ ಎಂದು ಅಧ್ಯಕ್ಷ ಸೂದನ ಎಸ್.ಈರಪ್ಪ ತಿಳಿಸಿದ್ದಾರೆ.

ಗೋಣಿಕೊಪ್ಪ ದಸರಾ ದೀಪಾಲಂಕಾರ ಸ್ಪರ್ಧೆ

ಗೋಣಿಕೊಪ್ಪ,ಸೆ.26– ಗೋಣಿಕೊಪ್ಪ ದಸರಾದಲ್ಲಿ ಶ್ರೀ ಕಾವೇರಿ ದಸರಾ ಸಮಿತಿ ಮತ್ತು ಚೇಂಬರ್ ಆಫ್ ಕಾಮರ್ಸ್ ಸಹಯೋಗದಲ್ಲಿ ಆಯುಧ ಪೂಜೆ ಮತ್ತು ವಿಜಯದಶಮಿಗೆ ದೀಪಾಲಂಕಾರ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಸುನಿಲ್ ಮಾದಪ್ಪ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅ.4 ರಂದು ತೀರ್ಪುಗಾರರು ಪಟ್ಟಣದಲ್ಲಿ ವೀಕ್ಷಣೆ ನಡೆಸಿ ಫಲಿತಾಂಶ ನೀಡಲಿದ್ದಾರೆ. 10 ವಿಭಾಗಕ್ಕೆ ತಲಾ ಮೂರು ಬಹುಮಾನ ನೀಡಲಾಗುವುದು. ವಾಣಿಜ್ಯ ಮಳಿಗೆ– ಬ್ಯಾಂಕ್ ಮತ್ತು ಸರ್ಕಾರಿ ಕಚೇರಿ, ಬೇಕರಿ ಮತ್ತು ದಿನಸಿ ಅಂಗಡಿ, ಚಿನ್ನದ ಮಳಿಗೆ, ಎಲೆಕ್ಟ್ರಿಕಲ್, ಮೊಬೈಲ್ ಶಾಪ್, ಬ್ಯೂಟಿ ಪಾರ್ಲರ್, ಸಲೂನ್, ಹೋಟೆಲ್, ಮದ್ಯದ ಮಳಿಗೆ, ವರ್ಕ್‌ಶಾಪ್, ಸರ್ವಿಸ್ ಸ್ಟೇಷನ್, ಹಾರ್ಡ್‌ವೇರ್ ಮತ್ತು ಪೈಂಟ್ ಅಂಗಡಿ, ಮೆಡಿಕಲ್ ಶಾಪ್, ಪೆಟ್ರೋಲ್ ಬಂಕ್, ಫರ್ನಿಚರ್ ಶಾಪ್, ರೆಡಿಮೇಡ್ ಬಟ್ಟೆ ಅಂಗಡಿ, ಇನ್ನಿತರ ಬಟ್ಟೆ ಮಳಿಗೆ, ಇತರೆ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಸಮಿತಿ ಪ್ರಮುಖರಾದ ಪೊನ್ನಿಮಾಡ ಸುರೇಶ್, ಶಿವಾಜಿ, ಪ್ರಭಾಕರ್ ನೆಲ್ಲಿತ್ತಾಯ, ಮನೋಹರ್ ಇದ್ದರು.

ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ

ಮಡಿಕೇರಿ ಸೆ.26– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಪ್ರವಾಸೋದ್ಯಮ ಪಾಲುದಾರರು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ–2022 'ಪ್ರವಾಸೋದ್ಯಮದ ಪುನರಾವಲೋಕನ' ಸಂದೇಶದೊಂದಿಗೆ ಸೆ.27 ರಂದು ಬೆಳಗ್ಗೆ 10.30 ಗಂಟೆಗೆ ಹೋಟೆಲ್ ಲೀ ಕೂರ್ಗ್‌ನಲ್ಲಿ ನಡೆಯಲಿದೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್ ಹಾಗೂ ಕೆ.ಜಿ.ಬೋಪಯ್ಯ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಬೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಡಾ.ಯತೀಶ್ ಉಳ್ಳಾಲ್ ಇತರರು ಪಾಲ್ಗೊಳ್ಳಲಿದ್ದಾರೆ.

ಅ.1, ಪಟ್ಟೋಲೆ ಪಳಮೆ ಕೃತಿ ಬಿಡುಗಡೆ

ಮಡಿಕೇರಿ,ಸೆ.26– ಮಂಗಳೂರು ವಿಶ್ವವಿದ್ಯಾನಿಲಯ ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ ಪ್ರಸಾರಾಂಗ ಮತ್ತು ಕೊಡವ ಮಕ್ಕಡ ಕೂಟ ಇದರ ಜಂಟಿ ಆಶ್ರಯದಲ್ಲಿ 'ಪಟ್ಟೋಲೆ ಪಳಮೆ'(ಕೊಡವ, ಕನ್ನಡ, ಇಂಗ್ಲಿಷ್ ಆವೃತ್ತಿ) ಕೃತಿ ಬಿಡುಗಡೆ ಸಮಾರಂಭ ಅ.1ರಂದು ನಗರದ ಪತ್ರಿಕಾ ಭವನದಲ್ಲಿ ನಡೆಯಲಿದೆ ಎಂದು ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ತಿಳಿಸಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಬೊವೇರಿಯಂಡ ನಂಜಮ್ಮ ಮತ್ತು ಚಿಣ್ಣಪ್ಪ ಅನುವಾದಿಸಿರುವ ಕೃತಿಯನ್ನು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಬಿಡುಗಡೆಗೊಳಿಸಲಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಂಬೈ ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ವೀಣಾ ಪೂಣಚ್ಚ ಕೃತಿ ಪರಿಚಯ ಮಾಡಲಿದ್ದಾರೆ ಎಂದು ಬೊಳ್ಳಜಿರ ಬಿ.ಅಯ್ಯಪ್ಪ ಮಾಹಿತಿ ನೀಡಿದ್ದಾರೆ.

ಇಂದಿನಿಂದ ಚಾಮರಾಜನಗರದಲ್ಲಿ ದಸರಾ





ಇಂದಿನ ಕಾರ್ಯಕ್ರಮಗಳು....

ಶ್ರೀ ಚಾಮರಾಜೇಶ್ವರ ದೇಗುಲದ ವೇದಿಕೆ

ಮಧ್ಯಾಹ್ನ 3.30ಕ್ಕೆ ಗೊರವರ ಕುಣಿತ, ವೀರಗಾಸೆ, ಸಾಯಂಕಾಲ 4ಕ್ಕೆ ವಾದ್ಯ ಸಂಗೀತ, 4.15ಕ್ಕೆ ಭರತನಾಟ್ಯ, 4.30ಕ್ಕೆ ನವರಾತ್ರಿ ವೈಭವ ನೃತ್ಯ, ಸಂಜೆ 6.30ಕ್ಕೆ ನೃತ್ಯೋತ್ಸವ, ರಾತ್ರಿ 7ಕ್ಕೆ ಜಾನಪದ ಗೀತೆ ವೈಭವ, 8ಕ್ಕೆ ಸಂಗೀತ ರಸಗಂಗೆ, 8.30ಕ್ಕೆ ನೃತ್ಯೋತ್ಸವ ಕಾರ್ಯಕ್ರಮ ನಡೆಯಲಿವೆ.

ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ

ಬೆಳಗ್ಗೆ 10ಕ್ಕೆ ಕವಿಗೋಷ್ಠಿ, ಮಧ್ಯಾಹ್ನ 2ಕ್ಕೆ ಮಾಧ್ಯಮ ವ್ಯಾಯೋಗ ಸಾಮಾಜಿಕ ನಾಟಕ, ಸಾಯಂಕಾಲ 4ಕ್ಕೆ ಯಥಾಪ್ರಕಾರ ಹಾಸ್ಯನಾಟಕ, 6ಕ್ಕೆ ಕಂಚುಗನ್ನಡಿ ಸಾಮಾಜಿಕ ನಾಟಕ ಪ್ರದರ್ಶನ.

ಜೆ.ಎಚ್. ಪಟೇಲ್ ಸಭಾಂಗಣ

ಬೆಳಗ್ಗೆ 9.30ಕ್ಕೆ ನಾದಸ್ವರ, 10ಕ್ಕೆ ಡೊಳ್ಳುಕುಣಿತ, 10.15ಕ್ಕೆ ಭರತನಾಟ್ಯ, 10.30ಕ್ಕೆ ಗೊರವರಕುಣಿತ, 10.45ಕ್ಕೆ ಭಕ್ತಿಗೀತೆಗಳು, 11ಕ್ಕೆ ತಂಬೂರಿಪದ, 11.45ಕ್ಕೆ ಹರಿಕಥೆ, ಮಧ್ಯಾಹ್ನ 12ಕ್ಕೆ ತೊಗಲುಗೊಂಬೆ ಕಲಾ ಪ್ರದರ್ಶನ, 12.15ಕ್ಕೆ ನೃತ್ಯರೂಪಕ, 12.30ಕ್ಕೆ ಜನಪದ ಸಂಗೀತ, 1ಕ್ಕೆ ನೃತ್ಯರೂಪಕ, 1.30ಕ್ಕೆ ಸಂಗೀತಗಂಗೆ, 2ಕ್ಕೆ ಭಜನೆ–ತತ್ವಪದ, 2.30ಕ್ಕೆ ಭಜನೆ ಸಂಭ್ರಮ, 3ಕ್ಕೆ ಸೋಬಾನೆ ಸಂಭ್ರಮ, ಸಾಯಂಕಾಲ 5ಕ್ಕೆ ಗೀತಾಗಾಯನ, 5.30ಕ್ಕೆ ಸುಗಮ ಸಂಗೀತ, 6ಕ್ಕೆ ಜನಪದ ಗೀತಾ ಕಾರ್ಯಕ್ರಮ.

ಚಾಮರಾಜನಗರ, ಸೆ.26–ಜಿಲ್ಲಾಡಳಿತ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿ ಆಶ್ರಯದಲ್ಲಿ ಸೆ.27ರಿಂದ ಸೆ.30ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ಜಿಲ್ಲಾ ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ನಗರದಲ್ಲಿ ಬಹುತೇಖ ಸಿದ್ಧತೆ ಪೂರ್ಣಗೊಂಡಿದ್ದು, ಎಲ್ಲೆಡೆ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ.

ಮಂಗಳವಾರ ಬೆಳಗ್ಗೆ 10.15ಕ್ಕೆ ನಗರದ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ಪೂಜಾ ಕೈಂಕರ್ಯದೊಂದಿಗೆ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಜಿಲ್ಲಾಡಳಿತ ಭವನ ಆವರಣದಲ್ಲಿರುವ ಜೆ.ಎಚ್. ಪಟೇಲ್ ಸಭಾಂಗಣ, ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ನಾಲ್ಕು ದಿನಗಳವರೆಗೆ ಬೆಳಗ್ಗಿನಿಂದ ಸಂಜೆ ತನಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ಪ್ರತಿದಿನ ಮಧ್ಯಾಹ್ನ 3 ಗಂಟೆಯಿಂದ ದೇವಾಲಯ ಮುಂಭಾಗದ ಪ್ರಧಾನ ವೇದಿಕೆಯಲ್ಲೂ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಲಾಗಿದೆ.

ದೀಪಾಲಂಕಾರ: ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ, ದೇವಸ್ಥಾನದ ಸುತ್ತಲೂ, ಬಿ.ರಾಚಯ್ಯ ಜೋಡಿ ರಸ್ತೆ ಅರ್ಧ ಭಾಗ, ಭುವನೇಶ್ವರಿ ವೃತ್ತ, ಸಂತೇಮರಳ್ಳಿ ವೃತ್ತ, ಸುಲ್ತಾನ್ ಷರೀಫ್ ವೃತ್ತ ಡಾ. ರಾಜ್‌ಕುಮಾರ್ ರಂಗಮಂದಿರ, ಜಿಲ್ಲಾಡಳಿತ ಭವನ, ಎಸ್‌ಪಿ ಕಚೇರಿ, ತಹಸೀಲ್ದಾರ್ ಕಚೇರಿ, ಸೆಸ್ಕ್ ಕಚೇರಿಗೆ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಜೋಡಿರಸ್ತೆಯಲ್ಲಿ ದೀಪಾಲಂಕಾರವನ್ನು ತಹಸೀಲ್ದಾರ್ ಕಚೇರಿವರೆಗೆ ಮಾತ್ರ ಮಾಡಿದ್ದು, ಇದು ರಾಮಸಮುದ್ರ ನಾಗರಿಕರ ಕೆಂಗಣ್ಣಿಗೆ ಗುರಿಯಾಗಿದೆ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ ಎನ್ನಲಾಗಿದೆ.

ವಿವಿಧ ಕಾರ್ಯಕ್ರಮಗಳು: ಜಿಲ್ಲಾಡಳಿತ ಅವರಣದಲ್ಲಿ ಸೆ.28ರಿಂದ 30ರವರೆಗೆ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಅಲ್ಲದೆ ಮ್ಯಾರಥಾನ್, ಮಹಿಳಾ ದಸರಾ, ರೈತ ದಸರಾವನ್ನು ಆಯೋಜಿಸಿದ್ದು, ದಸರಾ ಉತ್ಸವದಲ್ಲಿ ಸ್ತಬ್ದಚಿತ್ರಗಳ ಮೆರವಣಿಗೆ ಗಮನ ಸೆಳೆಯಲಿದೆ. ಒಟ್ಟಾರೇ ನಗರದಲ್ಲಿ ನಾಲ್ಕು ದಿನಗಳ ದಸರಾ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಜನತೆ ಕಾತರರಾಗಿದ್ದಾರೆ.

ಜಿಲ್ಲಾಧಿಕಾರಿ ಸಿದ್ಧತೆ ವೀಕ್ಷಣೆ

ಚಾಮರಾಜನಗರ: ಚಾಮರಾಜನಗರ ದಸರಾ ಮಹೋತ್ಸವದ ಅಂತಿಮ ಸಿದ್ಧತಾ ಕಾರ್ಯಗಳನ್ನು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಪರಿಶೀಲಿಸಿದರು. ನಗರದ ಚಾಮರಾಜೇಶ್ವರ ದೇವಸ್ಥಾನದ ಆವರಣದ ಮುಂಭಾಗದ ವೇದಿಕೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ, ಅಲ್ಲಿನ ಸಿದ್ಧತೆಗಳನ್ನು ವೀಕ್ಷಿಸಿ, ಗಣ್ಯರ ಆಸನ, ಬೃಹತ್ ವೇದಿಕೆ, ವಿಶಾಲವಾದ ವಾಟರ್ ಪ್ರೂಫ್ ಶಾಮಿಯಾನ, ಕಲಾವಿದರು ಪ್ರಸ್ತುತ ಪಡಿಸುವ ಕಾರ್ಯಕ್ರಮಗಳಿಗೆ ಪೂರಕ ವ್ಯವಸ್ಥೆ, ಸಾರ್ವಜನಿಕರ ಆಸನಗಳ ವ್ಯಸವಸ್ಥೆ ಪರಿಶೀಲಿಸಿದರು. ಚಾಮರಾಜೇಶ್ವರ ದೇವಾಲಯಕ್ಕೂ ಭೇಟಿ ನೀಡಿ ದಸರಾ ಉದ್ಘಾಟನೆ, ಪೂಜಾ ಕೈಂಕರ್ಯಗಳ ಸಿದ್ಧತೆ ಪರಿಶೀಲಿಸಿದರು. ಈ ವೇಳೆ ಜಿಪಂ ಸಿಇಓ ಅಧಿಕಾರಿ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

ಭಾರತ್ ಜೋಡೋ ಪಾದಯಾತ್ರೆ ಗುಂಡ್ಲುಪೇಟೆಯಲ್ಲಿ ವರಿಷ್ಠರ ಪರಿಶೀಲನೆ



ಭಾರತ್ ಜೋಡೋ ಯಾತ್ರೆ ಹಿನ್ನೆಲೆ ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ.ಶಿವಕುಮಾರ್ ಗುಂಡ್ಲುಪೇಟೆಯ ಅಂಬೇಡ್ಕರ್ ಭವನ ಬಳಿ ಪರಿಶೀಲನೆ ನಡೆಸಿದರು.

ಗುಂಡ್ಲುಪೇಟೆ, ಸೆ.26– ಭಾರತ್ ಜೋಡೋ ಅಂಗವಾಗಿ ಕಾಂಗ್ರೆಸ್ ಆಯೋಜಿಸಿರುವ ಪಾದಯಾತ್ರೆ ತಾಲೂಕಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಉಸ್ತುವಾರಿ ಸುರ್ಜೇವಾಲ ಪಟ್ಟಣಕ್ಕೆ ಆಗಮಿಸಿ ಪರಿಶೀಲಿಸಿದರು.

ಸೆ.30ರಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ನೇತೃತ್ವದ ಪಾದಯಾತ್ರೆ ಪಟ್ಟಣಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಪರಿಷತ್ ವಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಶಾಸಕ ಸಂತೋಷ್‌ಲಾಡ್ ಜೊತೆಗೂಡಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನ ಹಾಗೂ ಕೆಬ್ಬೆಕಟ್ಟೆ ಶನೇಶ್ವರಸ್ವಾಮಿ ದೇವಾಲಯದ ಬಳಿ ಸ್ಥಳ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡಪ್ರಸಾದ್, ಮಾಜಿ ಸಂಸದ ಎ.ಸಿದ್ದರಾಜು, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಆಲತ್ತೂರು ಜಯರಾಂ ಮತ್ತಿತರರಿದ್ದರು.

ಸ್ಥಳೀಯರಿಗೆ ಬಿಜೆಪಿ ಟಿಕೆಟ್ ನೀಡುವಂತೆ ಒತ್ತಾಯ



ಚಾಮರಾಜನಗರ, ಸೆ.26–ಭೂಸೇನಾ ನಿಗಮದ ಅಧ್ಯಕ್ಷ ರುದ್ರೇಶ್ ಅವರು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಜನರಲ್ಲಿ ಗೊಂದಲ ಸೃಷ್ಟಿಸುತ್ತಿದ್ದು, ಈ ಬಗ್ಗೆ ಪಕ್ಷದ ವರಿಷ್ಠರಿಗೆ ದೂರು ಸಲ್ಲಿಸಲಾಗುವುದು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಿದರೆ ಎಲ್ಲರೂ ಒಗ್ಗಟ್ಟಿನಿಂದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುವುದಾಗಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರ ಅವರು, ಅಮ್ಮನಪುರ ಮಲ್ಲೇಶ್, ಜಿ.ನಿಜಗುಣರಾಜು, ಎಂ.ರಾಮಚಂದ್ರ, ಡಾ.ಎ.ಆರ್.ಬಾಬು, ಸಿ.ಎಸ್.ಬಾಲರಾಜು ಸೇರಿದಂತೆ ಸ್ಥಳೀಯವಾಗಿ ಎಳೆಂಟು ಜನರು ಟಿಕೆಟ್ ಆಕಾಂಕ್ಷಿಗಳಿದ್ದು, ಇವರಲ್ಲಿ ಯಾರಿಗಾದರೂ ಟಿಕೆಟ್ ನೀಡುವಂತೆ ಒತ್ತಾಯಿಸಿದರು. ಭೂ ಸೇನಾ ನಿಗಮದ ಅಧ್ಯಕ್ಷ ರುದ್ರೇಶ್ ಅವರು ಕ್ಷೇತ್ರಕ್ಕೆ ಆಗಮಿಸಿದ ವೇಳೆ, ನನ್ನನ್ನು ಪಕ್ಷದ ವರಿಷ್ಠರು ಇಲ್ಲಿಗೆ ಕಳುಹಿಸುತ್ತಿದ್ದಾರೆ. ನಾನೊಬ್ಬ ಟಿಕೆಟ್ ಆಕಾಂಕ್ಷಿ ಎಂದು ಹೇಳಿದ್ದಾರೆ. ಇವರನ್ನು ಪಕ್ಷದ ಯಾವೊಬ್ಬ ವರಿಷ್ಠರು ಈ ಕ್ಷೇತ್ರಕ್ಕೆ ಹೋಗಿ ಎಂದು ಹೇಳಿಲ್ಲ. ರುದ್ರೇಶ್ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು. ಭ್ರಷ್ಟಾಚಾರ ಮಾಡಿದ ಹಣದಿಂದ ಸ್ಪರ್ಧೆ ಮಾಡಬಹುದು ಎಂಬ ಮನಸ್ಥಿತಿ ಅವರಿಗೆ ಇದ್ದರೆ ಅದನ್ನು ಬಿಡಬೇಕು ಎಂದು ರುದ್ರೇಶ್ ವಿರುದ್ಧ ಮುಖಂಡರು ಹರಿಹಾಯ್ದರು.

ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂದು ಏಳೆಂಟು ಜನರು ಆಕಾಂಕ್ಷೆ ಹೊಂದಿದ್ದಾರೆ. ಇವರೆಲ್ಲರೂ ಕ್ಷೇತ್ರದ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ, ತಮ್ಮ ಕೈಲಾದ ಸಹಾಯ ಮಾಡುತ್ತಾ ಬರುತ್ತಿದ್ದಾರೆ. ಹೀಗಿರುವಾಗ ಹೊರ ಜಿಲ್ಲೆಯ ವ್ಯಕ್ತಿ ಕ್ಷೇತ್ರಕ್ಕೆ ಆಗಮಿಸುವುದು ತರವಲ್ಲ. ಕೆಲವರು ಆಮಿಷಗಳಿಗೆ ಒಳಗಾಗಿ ರುದ್ರೇಶ್ ಅವರೊಂದಿಗೆ ಓಡಾಡುತ್ತಿದ್ದಾರೆ. ಅಂತಹವರಿಗೂ ಸೂಕ್ತ ಸಮಯದಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಹನೂರು, ಸೆ.26–ತಾಲೂಕಿನ ನಾಗನತ್ತ ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಆರ್.ನರೇಂದ್ರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಲೋಕೋಪಯೋಗಿ ಇಲಾಖೆಯ ಎಂಡಿಆರ್ ಯೋಜನೆಯಡಿ 3 ವರ್ಷಗಳ ಹಿಂದೆಯೇ ಈ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಅನುದಾನ ಬಿಡುಗಡೆ ಮಾಡಲಾಗಿತ್ತು. ಕಾರಣಾಂತರಗಳಿಂದ ಕಾಮಗಾರಿ ಆರಂಭಗೊಳ್ಳದೆ ಅನುದಾನ ವಾಪಸ್ಸಾಗಿತ್ತು. ಸರ್ಕಾರಕ್ಕೆ ಮತ್ತೆ ಪ್ರಸ್ತಾವನೆ ಸಲ್ಲಿಸಿದ್ದರಿಂದ ಅನುದಾನ ದೊರೆತು ಕಾಮಗಾರಿ ಪ್ರಾರಂಭಿಸಲಾಗುತ್ತಿದೆ. ಗುತ್ತಿಗೆದಾರರು ಗ್ರಾಮಸ್ಥರ ಸಹಕಾರದೊಂದಿಗೆ ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದರು. ಈ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು, ಸಾರ್ವಜನಿಕರಿದ್ದರು.

ರಾಘವೇಂದ್ರ ನಿಧನ



ಗುಂಡ್ಲುಪೇಟೆ, ಸೆ.26–ತಾಲೂಕಿನ ಕೊಡಸೋಗೆ ಗ್ರಾಮದ ಪತ್ರಿಕಾ ವಿತರಕ ಚಿನ್ನಸ್ವಾಮಿ ಪುತ್ರ ರಾಘವೇಂದ್ರ(24) ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಮೃತರಿಗೆ ತಾಯಿ ಹಾಗೂ ಸಹೋದರಿ ಇದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವಕರ್ಮರು ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕು



ಗುಂಡ್ಲುಪೇಟೆ, ಸೆ.26–ವಿಶ್ವಕರ್ಮ ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಶಾಸಕ ಸಿ.ಎಸ್. ನಿರಂಜನಕುಮಾರ್ ಕಿವಿಮಾತು ಹೇಳಿದರು.

ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಯಾವುದೇ ಕಟ್ಟಡ ನಿರ್ಮಾಣ ಹಾಗೂ ವಾಸ್ತುಶಿಲ್ಪದಲ್ಲಿ ವಿಶ್ವಕರ್ಮರ ಪಾತ್ರ ದೊಡ್ಡದು. ಕುಲಕಸುಬನ್ನೇ ನಂಬಿ ಅನೇಕ ಮಂದಿ ವಿಶ್ವಕರ್ಮರ ದುಡಿಯುತ್ತಿದ್ದಾರೆ ಎಂದರಲ್ಲದೆ, ಪಟ್ಟಣದಲ್ಲಿ ವಿಶ್ವಕರ್ಮ ಸಮುದಾಯ ಭವನಕ್ಕೆ ನಿರ್ಮಿಸಲು 30 ಲಕ್ಷ ರೂ. ಮೀಸಲಿಡುವುದಾಗಿ ಪ್ರಕಟಿಸಿದರು. ಹಿರಿಯ ಚಿತ್ರನಟಿ ಭವ್ಯ ಮಾತನಾಡಿ, ವಿಶ್ವಕರ್ಮ ಸಮು ದಾಯವು ಒಗ್ಗಟ್ಟಿನ ಕೊರತೆಯಿಂದ ಹಿಂದುಳಿದಿದೆ. ಶೈಕ್ಷಣಿಕ ವಾಗಿ ಮುಂದುವರೆದರೆ ಮಾತ್ರ ಆರ್ಥಿಕ ಅಭಿವೃದ್ಧಿ ಸಾಧ್ಯ. ಯುವಕರು ಸಂಘಟಿತರಾಗುವ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮುಂದಾಗಿರುವುದು ಸ್ವಾಗತಾರ್ಹ ಎಂದರು. ಮುಂದೆಯೂ ಸಹ ಇದೇ ರೀತಿ ಸಂಘಟಿತರಾಗಿ ಸಮಾಜದ ಏಳಿಗೆಗೆ ಯುವ ಜನತೆ ದುಡಿಯುವಂತೆ ಸಲಹೆ ನೀಡಿದರು.

ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಹಳ್ಳದಕೇರಿಯಲ್ಲಿರುವ ಶ್ರೀ ಕಾಳಿಕಾಂಬ ಕಮಟೇಶ್ವರ ದೇವಾಲಯದಿಂದ ಅಲಂಕೃತ ವಾಹನದಲ್ಲಿ ಮಹರ್ಷಿ ವಿಶ್ವಕರ್ಮರ ಭಾವಚಿತ್ರವನ್ನು ಮಂಟಪದಲ್ಲಿ ಇರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಚಾಮುಲ್ ನಿರ್ದೇಶಕ ಎಚ್.ಎಸ್.ನಂಜುಂಡಪ್ರಸಾದ್, ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ.ಸುನಿಲ್, ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ವೀರಶೈವ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಕೊಡಸೋಗೆ ಶಿವಬಸಪ್ಪ, ಸಮುದಾಯದ ಮುಖಂಡರಾದ ಪುಟ್ಟಸ್ವಾಮಿ, ನಂದಕುಮಾರ್ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ವಿಶ್ವಕರ್ಮ ಸಮುದಾಯದ ಮುಖಂಡರು, ಯುವಕರು ಮತ್ತು ಸಂಘಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿದ್ದರು.

ಕಂಡವರ ನಿವೇಶನಕ್ಕೆ ಕರಾರು ಮಾಡಿಕೊಟ್ಟು 15 ಲಕ್ಷ ವಂಚಿಸಿದ ರಿಯಲ್ ಎಸ್ಟೇಟ್ ಏಜೆಂಟ್

ಮೈಸೂರು, ಸೆ.26– ಮಾರಾಟ ಮಾಡಿದ್ದ ನಿವೇಶನಕ್ಕೆ ಕ್ರಯದ ಕರಾರು ಪತ್ರ ಮಾಡಿಕೊಟ್ಟು 15 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 3ನೇ ಹಂತದ ಸೌಪರ್ಣಿಕ ಬ್ಲ್ಯೂಬೆಲ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿರುವ ಉದ್ಯಮಿ ಅರವಿಂದ ಶೆಟ್ಟಿ ವಂಚನೆಗೊಳಗಾದವರಾಗಿದ್ದು, ರಿಯಲ್ ಎಸ್ಟೇಟ್ ಏಜೆಂಟ್ ಉದಯಗಿರಿ ನಿವಾಸಿ ಸಲಾವುದ್ದೀನ್(38) ಎಂಬಾತ ಮೈಸೂರಿನ ಬೋಗಾದಿ ಎ ಬ್ಲಾಕ್, ಎಸ್‌ಬಿಎಂ ಲೇಔಟ್ ನಿವೇಶನ ಸಂಖ್ಯೆ 150 ತನಗೆ ಸೇರಿದ್ದು ಎಂದು ತಿಳಿಸಿ 15 ಲಕ್ಷ ಮುಂಗಡ ಪಡೆದು ಮೇ 7ರಂದು ಕ್ರಯದ ಕರಾರು ಪತ್ರ ಮಾಡಿಸಿಕೊಟ್ಟಿದ್ದಾರೆ. ಈ ಆಸ್ತಿಯ ಬಗ್ಗೆ ಅರವಿಂದ ಶೆಟ್ಟಿ ಅವರು ನೋಂದಣಾಧಿಕಾರಿಗಳ ಕಚೇರಿಯಲ್ಲಿ ಇಸಿ ತೆಗೆದಾಗ ನಿವೇಶನವನ್ನು ಸಲಾವುದ್ದೀನ್ 2018ರ ಜನವರಿ 11ರಂದೇ ಸತೀಶ್ ಎಂಬುವವರಿಗೆ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹಣ ದುರುಪಯೋಗ; ಫೈನಾನ್ಸ್ ಮಾಜಿ ಅಧಿಕಾರಿ ವಿರುದ್ಧ ಪ್ರಕರಣ ದಾಖಲು

ನಂಜನಗೂಡು, ಸೆ.26– ಸ್ತ್ರೀಶಕ್ತಿ ಸಂಘಗಳಿಂದ ವಸೂಲಿ ಮಾಡಿದ್ದ ಸಾಲದ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇರೆಗೆ ಮೈಕ್ರೋಫೈನಾನ್ಸ್ ಕಂಪನಿಯೊಂದರ ಮಾಜಿ ಕ್ಷೇತ್ರ ಅಭಿವೃದ್ಧಿ ಅಧಿಕಾರಿ ವಿರುದ್ಧ ಪ್ರಕರಣ ದಾಖಲಾಗಿದೆ.

ನಂಜನಗೂಡು ತಾಲೂಕು ಹುಲ್ಲಹಳ್ಳಿಯಲ್ಲಿರುವ ಬೆಲ್‌ಸ್ಟಾರ್ ಮೈಕ್ರೋಫೈನಾನ್ಸ್ ಕಂಪನಿಯ ಮಾಜಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮೈಸೂರಿನ ದಟ್ಟಗಳ್ಳಿ ನಿವಾಸಿ ಡಿ.ಪಿ. ಸುನೀಲ್ ಕುಮಾರ್(30) ಆರೋಪಕ್ಕೆ ಒಳಗಾದವರಾಗಿದ್ದು, ಇವರು ಕಂಪನಿಯಿಂದ ಸಾಲ ಪಡೆದಿದ್ದ ಸ್ತ್ರೀಶಕ್ತಿ ಗುಂಪುಗಳಿಂದ ವಸೂಲಿ ಮಾಡಿದ್ದ 4,04,843 ರೂ.ಗಳನ್ನು ಕಂಪನಿಗೆ ಪಾವತಿಸದೇ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬುದು 2021ರ ಜೂನ್‌ನಿಂದ ಡಿಸೆಂಬರ್‌ವರೆಗಿನ ಲೆಕ್ಕ ಪರಿಶೋಧನೆ ನಡೆಸಿದ ವೇಳೆ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಕಂಪೆನಿಯಿಂದ ಅವರನ್ನು ವಜಾ ಮಾಡಲಾಗಿತ್ತು. ದುರುಪಯೋಗಪಡಿಸಿಕೊಂಡ ಹಣದಲ್ಲಿ 2,07,020 ರೂ.ಗಳನ್ನು ಕಂತುಗಳ ಮೂಲಕ ಪಾವತಿಸಿದ್ದು, ಉಳಿದ 1,97,823 ರೂ.ಗಳನ್ನು ಕಂಪೆನಿಗೆ ಪಾವತಿಸದೇ ವಂಚಿಸಲಾಗಿದೆ ಎಂದು ಫೈನಾನ್ಸ್‌ನ ಶಾಖಾ ವ್ಯವಸ್ಥಾಪಕ ಜೆ.ಆರ್. ನಾಗೇಂದ್ರ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹುಲ್ಲಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬ್ಯಾಂಕ್ ಮಹಿಳಾ ಉದ್ಯೋಗಿ ಸರ ಕಳವು

ಮಂಡ್ಯ, ಸೆ.26– ಬ್ಯಾಂಕ್ ಮಹಿಳಾ ಉದ್ಯೋಗಿಯೊಬ್ಬರ ಚಿನ್ನದ ಸರ



ಅಪಹರಿಸಿರುವ ಘಟನೆ ಮಂಡ್ಯದ ಚಾಮುಂಡೇಶ್ವರಿ ನಗರದಿಂದ ವರದಿಯಾಗಿದೆ. ಕಿಲಾರದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಕ್ಲರ್ಕ್ ಜ್ಞಾನೇಶ್ವರಿ(24) ಸರ ಕಳೆದುಕೊಂಡವರಾಗಿದ್ದು, ಮಂಡ್ಯದ ಚಾಮುಂಡೇಶ್ವರಿ ನಗರ 9ನೇ ಕ್ರಾಸ್‌ನಲ್ಲಿ ವಾಸವಿರುವ ಇವರು ಸೆ.24ರಂದು ರಾತ್ರಿ 8.35ರ ಸುಮಾರಿನಲ್ಲಿ ತರಕಾರಿ ಖರೀದಿಸಿ, ಮನೆಗೆ ಹಿಂದಿರುಗುತ್ತಿದ್ದಾಗ ಸ್ಕೂಟರ್‌ನಲ್ಲಿ ಬಂದ ಸರಗಳ್ಳರು ಇವರ ಕತ್ತಿನಲ್ಲಿದ್ದ 15 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ಚಿನ್ನ ನೀಡಿ ಅಸಲಿ ಚಿನ್ನಾಭರಣ ಪಡೆದು ಇಬ್ಬರು ಮಹಿಳೆಯರಿಂದ ವಂಚನೆ

ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಕೊಳ್ಳೇಗಾಲ, ಸೆ.26– ಇಬ್ಬರು ವಂಚಕ ಮಹಿಳೆಯರು ಚಿನ್ನದ ಅಂಗಡಿಗೆ ನಕಲಿ ಚಿನ್ನ ನೀಡಿ, 3.95 ಲಕ್ಷ ರೂ. ಮೌಲ್ಯದ ಅಸಲಿ ಚಿನ್ನ ಕೊಂಡೊಯ್ದ ಘಟನೆ ಕೊಳ್ಳೇಗಾಲ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ವೈವಿಧ್ಯ ಜ್ಯುವೆಲರ್ಸ್‌ಗೆ ಸೆ.19ರಂದು ಬೆಳಗ್ಗೆ ಇಬ್ಬರು ಮಹಿಳೆಯರು ಬಂದು ಕೆಲವೊಂದು ಚಿನ್ನಾಭರಣ ಆಯ್ಕೆ ಮಾಡಿಕೊಂಡಿದ್ದಾರೆ. ನಂತರ ತಮ್ಮ ಬಳಿ ಹಳೆ ಚಿನ್ನಾಭರಣವಿದ್ದು ಅದನ್ನು ತೆಗೆದುಕೊಂಡು ಹೊಸ ಚಿನ್ನಾಭರಣ ನೀಡುವಂತೆ ಕೇಳಿದ್ದಾರೆ. ಮಹಿಳೆಯರು ನೀಡಿದ್ದ 82.480 ಗ್ರಾಂ ತೂಕದ ಹಳೆ ಚಿನ್ನಾಭರಣವನ್ನು ಅಂಗಡಿಯ ಸೇಲ್ಸ್‌ಮ್ಯಾನ್ ಅನಲೈಸ್ ಯಂತ್ರದಿಂದ ಪರಿಶೀಲಿಸಿ ಅದು ಅಸಲಿ ಎಂಬುದನ್ನು ದೃಢಪಡಿಸಿಕೊಂಡು 71.605 ಗ್ರಾಂ ಹೊಸ ಚಿನ್ನಾಭರಣವನ್ನು ಪ್ಯಾಕ್ ಮಾಡಲು ಮುಂದಾಗಿದ್ದಾರೆ. ಈ ವೇಳೆ ಓರ್ವ ಮಹಿಳೆ ಹೊರಗೆ ತಮ್ಮ ಸಂಬಂಧಿಕರಿದ್ದಾರೆ ಅವರಿಗೆ ಹೇಳಿ ಬರುತ್ತೇನೆ ಎಂದು ಅಂಗಡಿಯಿಂದ ಹೊರ ಹೋಗಿ ಬಂದಿದ್ದಾಳೆ. ಸೇಲ್ಸ್‌ಮ್ಯಾನ್ ಈಗಾಗಲೇ ಹಳೆ ಚಿನ್ನವನ್ನು ಪರೀಕ್ಷಿಸಿ ಅಸಲಿ ಎಂದು ಖಚಿತಪಡಿಸಿಕೊಂಡಿದ್ದರಿಂದ ಮಹಿಳೆಯರು ನೀಡಿದ್ದ ಹಳೇ ಚಿನ್ನಾಭರಣ ಪಡೆದು 3,95,809 ರೂ. ಮೌಲ್ಯದ ಹೊಸ ಚಿನ್ನ ಕೊಟ್ಟು ಕಳುಹಿಸಿದ್ದಾನೆ.

ಮರುದಿನ ಹಳೆ ಚಿನ್ನ ಕರಗಿಸಲು ಹೋದಾಗ ಅದು ನಕಲಿ ಎಂಬುದು ಪತ್ತೆಯಾಗಿದೆ. ಈ ವಂಚಕ ಮಹಿಳೆಯರು ಮೊದಲಿಗೆ ಅಸಲಿ ಚಿನ್ನಾಭರಣ ಕೊಟ್ಟು ಅದನ್ನು ಪರೀಕ್ಷಿಸಿದ ನಂತರ ಹೊರಹೋಗಿ ಬಂದ ಮಹಿಳೆ ಅಸಲಿ ಚಿನ್ನದ ಮಾದರಿಯೇ ಇದ್ದ ನಕಲಿ ಚಿನ್ನವನ್ನು ಬದಲಾಯಿಸಿ ಸೇಲ್ಸ್‌ಮ್ಯಾನ್‌ಗೆ ಕೊಟ್ಟಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ ಈ ಸಂಬಂಧ ಅಂಗಡಿಯ ಸೇಲ್ಸ್‌ಮ್ಯಾನ್ ಅಶ್ರಫ್ ಅಲಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆಶೀರ್ವಾದದ ನೆಪದಲ್ಲಿ ಮಹಿಳೆ ಮಾಂಗಲ್ಯ ಸರವನ್ನೇ ಕದ್ದ ಖದೀಮರು

ಶ್ರೀರಂಗಪಟ್ಟಣ, ಸೆ.26– ಬಟ್ಟೆ ಅಂಗಡಿ ತೆರೆಯಲು ಆಶೀರ್ವಾದ ಪಡೆಯುವ ನೆಪದಲ್ಲಿ ಮಹಿಳೆಯೊಬ್ಬರ 110 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಳವು ಮಾಡಿದ ಘಟನೆ ಶ್ರೀರಂಗಪಟ್ಟಣದ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಶ್ರೀ ಸಾಯಿ ಸೇವಾ ಅನಾಥಾಶ್ರಮದಲ್ಲಿ ನಡೆದಿದೆ.

ಶ್ರೀ ಸಾಯಿ ಆಶ್ರಮದ ಸಂಸ್ಥಾಪಕಿ ಶ್ರೀಮತಿ ಲಕ್ಷ್ಮಮ್ಮ(62) ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ಇವರು ಅನಾಥಾಶ್ರಮದಲ್ಲಿದ್ದಾಗ ಸೆ.25ರಂದು ಮಧ್ಯಾಹ್ನ ಅಲ್ಲಿಗೆ ಬಂದ ಇಬ್ಬರು ಖದೀಮರು ಆಶ್ರಮದಲ್ಲಿರುವ ಶ್ರೀ ಸಾಯಿ ಬಾಬಾ ಮಂದಿರದಲ್ಲಿ ದೇವರ ದರ್ಶನ ಪಡೆದ ನಂತರ ಲಕ್ಷ್ಮಮ್ಮ ಅವರ ಬಳಿಗೆ ಬಂದು ತಾವು ಹೊಸದಾಗಿ ಜವಳಿ ಅಂಗಡಿ ಆರಂಭಿಸುತ್ತಿದ್ದೇವೆ. ಅದಕ್ಕೆ ನೀವು ನಿಮ್ಮ ಕತ್ತಿನಲ್ಲಿರುವ ಸರದಿಂದ ಆಶೀರ್ವಾದ ಮಾಡಿಕೊಡಿ ಎಂದು ಕೇಳಿದ್ದಾರೆ.

ವಂಚಕರು ನೀಡಿದ್ದ 500 ರೂ. ಮುಖಬೆಲೆಯ ಎರಡು ನೋಟುಗಳಿಗೆ ಲಕ್ಷ್ಮಮ್ಮ ಅವರು ತಮ್ಮ ಮಾಂಗಲ್ಯ ಸರವನ್ನು ಮುಟ್ಟಿಸಿ ಕೊಟ್ಟಾಗ ಖದೀಮರು ಸರ ಬಿಚ್ಚಿಕೊಡುವಂತೆ ಕೇಳಿ ತಾವು ಲಕ್ಷ್ಮಮ್ಮ ಅವರಿಗೆ ನೀಡಿದ್ದ ನೋಟುಗಳಲ್ಲೇ ಸರವನ್ನು ಸುತ್ತಿ ಆಶ್ರಮದ ಮುಂಭಾಗದಲ್ಲಿರುವ ಕಿಟಕಿ ಪಕ್ಕ ಅದನ್ನಿಟ್ಟು 10 ನಿಮಿಷದ ನಂತರ ತೆಗೆದುಕೊಳ್ಳುವಂತೆ ತಿಳಿಸಿ ತೆರಳಿದ್ದಾರೆ. ಆನಂತರ ಲಕ್ಷ್ಮಮ್ಮ ಅವರು ನೋಟುಗಳು ಮತ್ತು ಸರವನ್ನು ಸುತ್ತಿಟ್ಟಿದ್ದ ಬಟ್ಟೆಯನ್ನು ತೆರೆದು ನೋಡಿದಾಗ ಸರ ಇರಲಿಲ್ಲ. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ವಿಚಾರಣೆಗಳನ್ನು ನೇರ ಪ್ರಸಾರ ಮಾಡಲು ಸ್ವಂತ ಪ್ಲಾಟ್ ಫಾರ್ಮ್ ಸಿದ್ಧವಾಗಲಿದೆ

ನವದೆಹಲಿ: ತನ್ನ ವಿಚಾರಣೆಗಳನ್ನು ನೇರ ಪ್ರಸಾರ ಮಾಡಲು ತನ್ನದೇ ಆದ ಪ್ಲಾಟ್ ಫಾರ್ಮ್ ಅನ್ನು ಹೊಂದಲಿದೆ. ಸದ್ಯ ವಿಚಾರಣೆಗಳ ನೇರ ಪ್ರಸಾರದ ಉದ್ದೇಶಕ್ಕಾಗಿ ಯೂಟ್ಯೂಬ್ ಬಳಕೆ ತಾತ್ಕಾಲಿಕವಾಗಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸುಪ್ರೀಂ ಕೋರ್ಟ್ ಕಲಾಪಗಳ ಹಕ್ಕುಸ್ವಾಮ್ಯವನ್ನು ಯೂಟ್ಯೂಬ್‌ನಂತಹ ಖಾಸಗಿ ವೇದಿಕೆಗಳಿಗೆ ಒಪ್ಪಿಸಲು ಸಾಧ್ಯವಿಲ್ಲ ಎಂದು ಬಿಜೆಪಿಯ ಮಾಜಿ ನಾಯಕ ಕೆ.ಎನ್ ಗೋವಿಂದಾಚಾರ್ಯ ಅವರ ಪರ ವಕೀಲರು ವಾದಿಸಿದಾಗ, ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ನೇತೃತ್ವದ ಪೀಠವು ಹೀಗೆ ಹೇಳಿದೆ.

ಯೂಟ್ಯೂಬ್ ವೆಬ್‌ಕಾಸ್ಟ್‌ನ ಹಕ್ಕುಸ್ವಾಮ್ಯವನ್ನು ನೀಡುವಂತೆ ಸ್ಪಷ್ಟವಾಗಿ ಕೇಳಿದೆ ಎಂದು ವಕೀಲ ವಿರಾಗ್ ಗುಪ್ತಾ ಅವರು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಜೆ.ಬಿ. ಪರ್ದಿವಾಲಾ ಅವರನ್ನೊಳಗೊಂಡ ಪೀಠಕ್ಕೆ ತಿಳಿಸಿದರು.

ಇವು ಆರಂಭಿಕ ಹಂತಗಳು. ಖಂಡಿತವಾಗಿಯೂ ನಾವು ನಮ್ಮದೇ ಆದ ಪ್ಲಾಟ್ ಫಾರ್ಮ್‌ಗಳನ್ನು ಹೊಂದುತ್ತೇವೆ. ಅದನ್ನು (ಹಕ್ಕುಸ್ವಾಮ್ಯ ಸಮಸ್ಯೆ) ನಾವು ನೋಡಿಕೊಳ್ಳುತ್ತೇವೆ ಎಂದು ಸಿಜೆಐ ಹೇಳಿದರು ಮತ್ತು ಗೋವಿಂದಾ ಚಾರ್ಯ ಅವರ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ಅಕ್ಟೋಬರ್ 17 ಕ್ಕೆ ಮುಂದೂಡಿದರು.

2018ರ ತೀರ್ಪನ್ನು ಉಲ್ಲೇಖಿಸಿದ ವಕೀಲರು, ಈ ನ್ಯಾಯಾಲಯದಲ್ಲಿ ದಾಖಲಿಸಲಾದ ಮತ್ತು ಪ್ರಸಾರವಾದ ಎಲ್ಲಾ ವಿಚಾರಣೆಗಳ ಮೇಲಿನ ಹಕ್ಕುಸ್ವಾಮ್ಯವು ಈ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ. YouTubeನ ಬಳಕೆಯ ನಿಯಮಗಳನ್ನು ಉಲ್ಲೇಖಿಸಿದ ಅವರು, ಈ ಖಾಸಗಿ ವೇದಿಕೆಯು ಕೂಡ ಹಕ್ಕುಸ್ವಾಮ್ಯವನ್ನು ಪಡೆಯುತ್ತದೆ ಎಂದು ಹೇಳಿದರು.

ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ ಮೈಸೂರು ದಸರಾ ಮೆರವಣಿಗೆ ನೆನಪಿಸಬೇಕು

ಕಾರ್ಯಕರ್ತರಿಗೆ ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಸೂಚನೆ



ಮೈಸೂರು, ಸೆ.26(ಜಿಎ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಳಿವು, ಉಳಿವು ಮತ್ತು ಪ್ರತಿಷ್ಠೆಯ ಕ್ಷೇತ್ರವಾದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಆಗಮಿಸುವ ರಾಹುಲ್‌ಗಾಂಧಿ ಅವರನ್ನು ಅಭೂತಪೂರ್ವವಾಗಿ ಸ್ವಾಗತ ಮಾಡಬೇಕು ಎಂದು ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಕಾರ್ಯಕರ್ತರಿಗೆ ಕರೆ ನೀಡಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಭಾರತ್ ಜೋಡೋ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸೆ.30 ರಂದು ಗುಂಡ್ಲುಪೇಟೆಗೆ ಆಗಮಿಸುವ ರಾಹುಲ್ ಗಾಂಧಿ ಅವರನ್ನು ಮೈಸೂರಿಗೆ ಬರ ಮಾಡಿಕೊಳ್ಳುವ ದಿನವೇ ದಸರಾ ಮೆರವಣಿಗೆ ಆರಂಭವಾಯಿತು ಎಂಬ ಭಾವನೆ ಸಾರ್ವಜನಿಕರಲ್ಲಿ ಮೂಡುವಂತೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಿ. ಈಗಾಗಲೇ ಅನೇಕ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಈ ಬಾರಿ ತಮ್ಮಗೆ ವಹಿಸಿರುವ ಕೆಲಸಗಳನ್ನು ಎಲ್ಲರೂ ಗಂಭೀರವಾಗಿ ತೆಗೆದುಕೊಳ್ಳಿ ಎಂದರು.

ಕಲಾತಂಡಗಳು, ನಂದಿ ಕುಣಿತ, ವೀರಗಾಸೆ, ಗೊಂಬೆ ಕುಣಿತ ಸೇರಿದಂತೆ ನಾಡಿನ ಎಲ್ಲಾ ಕಲಾ ಪ್ರಕಾರಗಳನ್ನು ಯಾತ್ರೆಯಲ್ಲಿ ಕಾಣಬೇಕು. ಅವರು ಆಗಮಿಸುವ ರಸ್ತೆಯ ಎರಡು ಭಾಗಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸುವುದರ ಜೊತೆ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಬೇಕು. ಮೈಸೂರಿನ ಎಲ್ಲಾ ಕ್ಷೇತ್ರಗಳ ಮನೆಗಳಿಗೂ ಭಿತ್ತಿ ಪತ್ರ ತಲುಪಬೇಕು. ಅದರೊಟ್ಟಿಗೆ ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಮತ ಹಾಕುವ ಮನೆಗಳಿಗೂ ತಲುಪಿಸಿ. ಏಕೆಂದರೆ, ಪ್ರಸ್ತುತ ದೇಶದಲ್ಲಿರುವ ಸಮಸ್ಯೆಗಳನ್ನು ಎಲ್ಲರಿಗೂ ತಿಳಿಸಬೇಕಾದ ಅವಶ್ಯಕತೆ ಇದೆ ಎಂದು ತಿಳಿಸಿದರು.

ಇದೇ ವೇಳೆ ಎಐಸಿಸಿ ಮೈಸೂರು ವಿಭಾಗದ ಉಸ್ತುವಾರಿ ಕಾರ್ಯದರ್ಶಿ ರೋಹಿ ಜಾನ್ ಮಾತನಾಡಿ, ಯಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರೆ, ಅವರೇ ನಿಜವಾದ ಕಾಂಗ್ರೆಸಿಗ. ಇದು ನಮ್ಮೆಲ್ಲರ ಕರ್ತವ್ಯ ಜೊತೆಗೆ ಜವಾಬ್ದಾರಿಯೂ ಆಗಿದೆ ಎಂದರು.

ನಂತರ ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ ಮಾತನಾಡಿ, ರಾಹುಲ್ ಗಾಂಧಿ ಮಾಡುತ್ತಿರುವ ಯಾತ್ರೆಯೂ ಐತಿಹಾಸಿಕ ಘಟನೆಯಾಗಲಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧಿಜೀ ಅವರು ಮಾಡಿದ ಯಾತ್ರೆ ನಂತರ ಇವರು ಈಗ 20ನೇ ಶತಮಾನದಲ್ಲಿ ಮಾಡುತ್ತಿರುವುದು ಯುವಶಕ್ತಿಗೆ ಸ್ಫೂರ್ತಿಯಾಗಲಿದೆ. ಯಾತ್ರೆಯಲ್ಲಿ ಭಾಗವಹಿಸುವವರು ಮುಂಜಾಗ್ರತಾ ಕ್ರಮವಾಗಿ ಮಾಸ್ಕ ಧರಿಸಿ ಎಲ್ಲರಿಗೂ ಮಾದರಿಯಾಗೋಣ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಮರಿಗೌಡ, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಮುಖಂಡ ಎಂ.ಶಿವಣ್ಣ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

> ಕಾರ್ಯಕ್ರಮದ ಪಟ್ಟಿಯನ್ನು ಸರಿಯಾಗಿ ಸಿದ್ಧಪಡಿಸಿ ದೆಹಲಿಯ ಎಐಸಿಸಿ ಕಚೇರಿಗೆ ಕಳುಹಿಸಿ ಅನುಮೋದನೆ ಪಡೆಯಬೇಕಿದೆ. ಇದರಲ್ಲಿ ಏನಾದರೂ ಸಮಸ್ಯೆಯಾದರೆ ಟಿಕೆಟ್ ಮೇಲೆ ಪರಿಣಾಮ ಬೀಳಲಿದ್ದು, ನನ್ನ ಮೇಲೆ ಅನುಕಂಪ ಇಟ್ಟುಕೊಂಡು ನಿಯಮಾನುಸಾರ ಪಟ್ಟಿ ಸಿದ್ಧಪಡಿಸಿ.
> -ಹೆಚ್.ಸಿ. ಮಹದೇವಪ್ಪ, ಮಾಜಿ ಸಚಿವ



ಮೈಸೂರಿನ ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಮಹಾಸಭೆಯನ್ನು ಸಂಘದ ಅಧ್ಯಕ್ಷ ಎಂ.ಭೈರಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ಮಹಾಲಕ್ಷ್ಮಿ, ನಿರ್ದೇಶಕರಾದ ಎನ್.ಚಂದ್ರಶೇಖರ್, ರಾಘವ ಎಂ.ಗೌಡ, ಎಂ. ಸೋಮಣ್ಣ, ಈ.ಲೋಕೇಶ್ವರ, ಟಿ.ಸೋಮು, ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಲಕ್ಷ್ಮಮ್ಮ, ಸಿ.ಸಂತೋಷ್, ಕೆ.ಸುರೇಶ್, ಪ್ರದೀಪ್ ನಾಯಕ, ಕಾರ್ಯದರ್ಶಿ ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

2014–15ನೇ ಸಾಲಿನ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ಪ್ರಕರಣ

ಶಿಕ್ಷಣ ಇಲಾಖೆಯ ಐವರು ಹಾಲಿ, ಮಾಜಿ ಅಧಿಕಾರಿಗಳ ಬಂಧನ

ಬೆಂಗಳೂರು, ಸೆ.26– 2014–15ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ ಸೇರಿದಂತೆ ಐವರು ಹಾಲಿ ಹಾಗೂ ಮಾಜಿ ಅಧಿಕಾರಿಗಳನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ.

ಗೀತಾ ಅಲ್ಲದೆ ಪಠ್ಯಪುಸ್ತಕ ಸಮಿತಿ ನಿರ್ದೇಶಕ ಮಾದೇಗೌಡ, ನಿವೃತ್ತ ಜಂಟಿ ನಿರ್ದೇಶಕರಾದ ಜಿ.ಆರ್. ಬಸವರಾಜು, ಕೆ. ರತ್ನಯ್ಯ, ಡಿ.ಕೆ. ಶಿವಕುಮಾರ್ ಬಂಧಿತರಾಗಿದ್ದು, ಇವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಹೆಚ್ಚಿನ ವಿಚಾರಣೆಗಾಗಿ ಅ.1ರವರೆಗೆ ಆರೋಪಿಗಳನ್ನು ಸಿಐಡಿ ಕಸ್ಟಡಿಗೆ ನೀಡಲಾಗಿದೆ.

2014–15ನೇ ಸಾಲಿನಲ್ಲಿ ನಡೆದ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿಇಟಿ ಪರೀಕ್ಷೆಗೆ ಹಾಜರಾಗದೇ ಇದ್ದ ಕೆಲವರು ಶಿಕ್ಷಕರ ಹುದ್ದೆ ದೊರೆತು ಕರ್ತವ್ಯಕ್ಕೆ ಹಾಜರಾಗದೇ ಇರುವವರ ಸ್ಥಳದಲ್ಲಿ ನೇಮಕಗೊಂಡಿದ್ದರು ಎಂಬುದು ಮೇಲ್ನೋಟಕ್ಕೆ ಕಂಡುಬಂದಿತ್ತು. ಅಲ್ಲದೆ, ಕೆಲವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಫ್‌ಡಿಸಿವೊಬ್ಬರ ಮೂಲಕ ಹಣ ನೀಡಿ ಅಕ್ರಮವಾಗಿ ನೇಮಕಗೊಂಡಿದ್ದರೂ ಎಂಬ ಆರೋಪಗಳು ಕೂಡ ಕೇಳಿಬಂದಿದ್ದವು. ಸರ್ಕಾರ ಈ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಿತ್ತು ಕಳೆದ ಸೆ.6ರಂದು ಸಿಐಡಿ ಅಧಿಕಾರಿಗಳು 11 ಮಂದಿಯನ್ನು ಬಂಧಿಸಿದ್ದರು. ಇವರಲ್ಲಿ ಅಕ್ರಮವಾಗಿ ನೇಮಕವಾದ ಶಿಕ್ಷಕರ ಸಂಖ್ಯೆಯೇ ಹೆಚ್ಚಾಗಿತ್ತು.



ಮೈಸೂರಿನ ಉದಯಗಿರಿಯಲ್ಲಿ 25 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಎಕ್ಬಾಲ್, ಉಪಾಧ್ಯಕ್ಷ ಶಹೀನ್ ಷಾ ಅಹಮದ್, ಮೊಹಮದ್ ಜಮೀಲ್, ಶಫಿವುಲ್ಲಾ, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಸೌಕತ್ ಅಲಿ, ವೆಂಕಟೇಶ್, ಕೆಆರ್‌ಐಡಿಎಲ್ ಎಇಇ ತಿಪ್ಪಾರೆಡ್ಡಿ ಇನ್ನಿತರರಿದ್ದರು.

ಆಯುಷ್ಮಾನ್ ಡಿಜಿಟಲ್ ಮಿಷನ್ ಆರೋಗ್ಯ ಸೌಲಭ್ಯಗಳ ನೋಂದಣಿ: ಕರ್ನಾಟಕ ಮುಂಚೂಣಿಯಲ್ಲಿ

ಬೆಂಗಳೂರು, ಸೆ.26– ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ (ಎನ್‌ಎಚ್‌ಎ) ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ಅಡಿಯಲ್ಲಿ ಆರೋಗ್ಯ ಸೌಲಭ್ಯಗಳ ನೋಂದಣಿಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ.

ಈ ಬಹು ಉದ್ದೇಶಿತ ಯೋಜನೆ ಪ್ರಾರಂಭವಾದ ಒಂದು ವರ್ಷದ ನಂತರ, ಮೂರು ತಿಂಗಳ ಹಿಂದೆ ಸೇವೆಯಲ್ಲಿ ಹಿಂದುಳಿದಿದ್ದ ಕರ್ನಾಟಕ, ಈಗ ಲಾಗ್ ಇನ್ ಮಾಡಿದ ಆರೋಗ್ಯ ಸೌಲಭ್ಯಗಳ ಸಂಖ್ಯೆಯಲ್ಲಿ ದೇಶದಲ್ಲೇ ಮೊದಲ ಸ್ಥಾನಕ್ಕೇರಿದೆ. ಹೆಲ್ತ್ ಫೆಸಿಲಿಟಿ ರಿಜಿಸ್ಟ್ರಿ (HFR), ಆರೋಗ್ಯ ವೃತ್ತಿಪರರ ನೋಂದಣಿ (HPR) ಮತ್ತು ಆರೋಗ್ಯ ದಾಖಲೆಗಳಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ (ABHA) IDಗೆ ಡಿಜಿಟಲ್ ಲಿಂಕ್ ಮಾಡಲಾಗುತ್ತಿದೆ.

ಬೆಂಗಳೂರು ಡಿಜಿಟಲ್ ಹಬ್ ಆಗಿರುವುದರಿಂದ, ನಗರದ ಆರೋಗ್ಯ ಸೌಧದಲ್ಲಿ NHAನ ಟೆಕ್ ಸೆಂಟರ್/ಪ್ರಾದೇಶಿಕ ಘಟಕವನ್ನು ಸ್ಥಾಪಿಸಲು ರಾಜ್ಯ ಆರೋಗ್ಯ ಇಲಾಖೆ ಸಿದ್ಧವಾಗಿದೆ. ಕಾರ್ಯಕ್ಷಮತೆಯ ಪ್ರಾಮುಖ್ಯತೆಯ ಬಗ್ಗೆ ಕೇಳಿದಾಗ, ರಾಜ್ಯದ ಎಬಿಡಿಎಂ ಮಿಷನ್ ನಿರ್ದೇಶಕ ಡಿ. ರಂದೀಪ್ ಪ್ರತಿಕ್ರಿಯಿಸಿ, ನಾವು ಖಾಸಗಿ ಆಸ್ಪತ್ರೆಗಳ ಸಹಕಾರವನ್ನು ಪಡೆಯಲು PHANA (ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್) ಮತ್ತು IMA ಅನ್ನು ತೊಡಗಿಸಿಕೊಂಡಿದ್ದೇವೆ. ಜಿಲ್ಲಾ ಆರೋಗ್ಯ ಅಧಿಕಾರಿಗಳು ಮತ್ತು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳ ತಂಡಗಳು ಎಲ್ಲಾ ಸರ್ಕಾರಿ ಪಿಎಚ್‌ಐಗಳು, ವೈದ್ಯರು ಮತ್ತು ದಾದಿಯರನ್ನು ನೋಂದಾಯಿಸಲು ಮನವರಿಕೆ ಮಾಡಿಕೊಟ್ಟೆವು. ಎಲ್ಲಾ 'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಸ್ಪತ್ರೆಗಳು' ಮತ್ತು 'ಮಾತೃತ್ವ ಆರೈಕೆ ಆಸ್ಪತ್ರೆಗಳು' ರೋಗಿಗಳ ABHA ಐಡಿಗಳನ್ನು ಆಸ್ಪತ್ರೆಯ ಆರೋಗ್ಯ ದಾಖಲೆಗಳೊಂದಿಗೆ ಲಿಂಕ್ ಮಾಡಲು ಕೇಳಲಾಯಿತು ಎಂದು ಹೇಳಿದರು.

ನಾವು ಸೆಪ್ಟೆಂಬರ್ 5 ರಿಂದ ಹೊಸ GOI-GOK ಸಹ–ಬ್ರಾಂಡ್ ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ–ಆರೋಗ್ಯ ಕರ್ನಾಟಕವನ್ನು ಆರೋಗ್ಯ ಕಾರ್ಡ್‌ಗೆ ಬದಲಾಯಿಸಿದ್ದೇವೆ ಮತ್ತು ನಾವು ಈಗಾಗಲೇ 40 ಲಕ್ಷ ಕಾರ್ಡ್‌ಗಳನ್ನು ನೀಡಿದ್ದೇವೆ, ಇದು ABHA IDಗಳನ್ನು ರಚಿಸುವಲ್ಲಿ ಸಹಾಯ ಮಾಡಿದೆ. ಅವರ ABHA IDಗಳನ್ನು ಆರೋಗ್ಯ ದಾಖಲೆಗಳಿಗೆ ಲಿಂಕ್ ಮಾಡಲು ನಾವು ಜಾಗೃತಿ ಮೂಡಿಸುತ್ತಿದ್ದೇವೆ. 3.15 ಲಕ್ಷ ABHA ಐಡಿಗಳನ್ನು ರಚಿಸಲು ಅಧಿಕಾರಿಗಳಿಗೆ ದೈನಂದಿನ ಗುರಿಯನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಸುಭಾಷ್ ಚಂದ್ರಬೋಸ್ ಪ್ರತಿಮೆ ರೂವಾರಿ

ಶಿಲ್ಪಿ ಅರುಣ್ ಯೋಗಿರಾಜ್‌ರಿಂದ ಮೈಸೂರು ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿ

ದಸರಾ ಚಿತ್ರಕಲೆ, ಶಿಲ್ಪ ಕಲೆ ಪ್ರದರ್ಶನ ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ಹರ್ಷ



ಮೈಸೂರು, ಸೆ.26(ಎಸ್‌ಪಿಎನ್)– ಸಾಂಸ್ಕೃತಿಕ ನಗರಿ ಮೈಸೂರು ಕಲೆ, ಸಾಹಿತ್ಯ, ಚಿತ್ರ ಕಲೆ ಹಾಗೂ ಇತರೆ ಕಲೆಗಳಿಗೆ ಹೆಸರುವಾಸಿಯಾಗಿದೆ ಎಂದು ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದಲ್ಲಿ ಮೈಸೂರು ದಸರಾ ಮಹೋತ್ಸವದ ಲಲಿತ ಕಲೆ ಮತ್ತು ಕರಕುಶಲ ಉಪ ಸಮಿತಿ ಆಯೋಜಿಸಿದ್ದ ರಾಜ್ಯಮಟ್ಟದ ಚಿತ್ರಕಲೆ, ಶಿಲ್ಪಕಲೆ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚೆಗೆ ನವದೆಹಲಿಯ ಸೆಂಟ್ರಲ್ ವಿಸ್ಟಾ ಕಟ್ಟಡದ ಮುಂಭಾಗ ನೇತಾಜಿ ಸುಭಾಷ್ ಚಂದ್ರ ಬೋಸ್ ಪ್ರತಿಮೆಯನ್ನು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಸುಂದರವಾಗಿ ನಿರ್ಮಿಸಿ, ರಾಷ್ಟ್ರಮಟ್ಟದಲ್ಲಿ ಹೆಸರುವಾಗಿಯಾಗಿರುವುದು ನಮ್ಮ ರಾಜ್ಯಕ್ಕೆ ಅದರಲ್ಲೂ ಮೈಸೂರಿಗೆ ಹೆಮ್ಮೆಯ ಸಂಗತಿ ಎಂದರು.

ಮೈಸೂರು ಸಂಸ್ಥಾನದ ಒಡೆಯರ್ ಅವರು ತಮ್ಮ ಆಳ್ವಿಕೆಯಲ್ಲಿ ಕಲೆ, ಸಾಹಿತ್ಯ, ಕೈಗಾರಿಕೆ, ಕೃಷಿ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರದಲ್ಲಿ ತಮ್ಮ ಕಾರ್ಯವನ್ನು ವಿಸ್ತರಿಸಿ, ಕರ್ನಾಟಕದ ಅಭಿವೃದ್ಧಿ ವಿಷಯದಲ್ಲಿ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಶಿಲ್ಪ ಕಲಾವಿದ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯಮಟ್ಟದ ಶಿಲ್ಪ ಮತ್ತು ಚಿತ್ರ ಕಲೆಯಲ್ಲಿ ಭಾಗವಹಿಸಿದ್ದ ಕಲಾವಿದರಿಗೆ ಪ್ರಮಾಣ ಪತ್ರ ವಿಸರಿಸಲಾಯಿತು.

ಈ ವೇಳೆ ಲಲಿತ ಕಲಾ ಉಪ ಸಮಿತಿ ಅಧ್ಯಕ್ಷರಾದ ಟಿ.ಎನ್.ಶಾಂತ, ಉಪಾಧ್ಯಕ್ಷ ಎಂ.ಎನ್.ಚಿದಂಬರ, ಲೋಕೇಶ್ ನಾಯಕ, ಸದಸ್ಯರಾದ ವೆಂಕಟೇಶ್, ಕರ್ನಾಟಕ ಶಿಲ್ಪ ಅಕಾಡೆಮಿ ಅಧ್ಯಕ್ಷ ವೀರಣ್ಣ, ಅರ್ಕಸಾಲಿ ಮತ್ತು ಅಕಾಡೆಮಿ ರಿಜಿಸ್ಟಾರ್ ಚಂದ್ರಶೇಖರ್, ಅಧಿಕಾರಿಗಳಾದ ಜಿ.ಆರ್. ವಿಜಯ್ ಕುಮಾರ್, ಮಲ್ಲಿಕಾರ್ಜುನ ಸ್ವಾಮಿ, ಬಿ.ರಶ್ಮಿ ಉಪಸ್ಥಿತರಿದ್ದರು. ಈ ಪ್ರದರ್ಶನ ಇಂದಿನಿಂದ ಅ.3ರವರೆಗೆ ಇರಲಿದ್ದು, ಸಾರ್ವಜನಿಕರು ಪ್ರತಿ ದಿನ ಬೆಳಗ್ಗೆ 10 ರಿಂದ ಸಂಜೆ 7 ರವರಗೆ ಭೇಟಿ ನೀಡಿ ಶಿಬಿರದಲ್ಲಿ ವಿವಿಧ ಕಲಾವಿದರು ರಚಿಸಿರುವ ಶಿಲ್ಪ ಮತ್ತು ಚಿತ್ರ ಕಲೆಗಳನ್ನು ವೀಕ್ಷಿಸಬಹುದು.

ಆರ್‌ಎಸ್‌ಎಸ್ ಮುಗಿಸಲು ನಮಗೆ ಹತ್ತೇ ಸೆಕೆಂಡ್ ಸಾಕು.....

ಕೇರಳದಲ್ಲಿ ಎಸ್‌ಡಿಪಿಐ ಮುಖಂಡನ ಆಕ್ರೋಶದ ನುಡಿ

ಎರ್ನಾಕುಲಂ (ಕೇರಳ), ಸೆ. 26– ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ದೇಶಾದ್ಯಂತ ಪಿಎಫ್‌ಐ ನಾಯಕರು ಹಾಗೂ ಸದಸ್ಯರನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಎಸ್‌ಡಿಪಿಐ ಮುಖಂಡ ನೋರ್ವ "ಆರ್‌ಎಸ್‌ಎಸ್ ಅನ್ನು ಮುಗಿಸಲು ನಮಗೆ ಹತ್ತೇ ಸೆಕೆಂಡ್ ಸಾಕು" ಎಂದು ಸಾರ್ವಜನಿಕವಾಗಿಯೇ ಬೆದರಿಕೆ ಹಾಕಿರುವ ವಿಡಿಯೋ ವೈರಲ್ ಆಗಿದೆ.

"ಆಪರೇಷನ್ ಆಕ್ಟೋಪಸ್" ಎಂಬ ಹೆಸರಿನಲ್ಲಿ ಎನ್‌ಐಎ ಸೆಪ್ಟೆಂಬರ್ 22ರಂದು ದೇಶದ 15 ರಾಜ್ಯಗಳ 93 ಸ್ಥಳಗಳಲ್ಲಿ ಪಿಎಫ್‌ಐ ನಾಯಕರು ಹಾಗೂ ಸದಸ್ಯರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿ, 45 ಮಂದಿಯನ್ನು ಬಂಧಿಸಿತ್ತು. ಈ ಕಾರ್ಯಾಚರಣೆ ವಿರುದ್ಧ ದೇಶದ ಹಲವೆಡೆ ಪಿಎಫ್‌ಐ ಮತ್ತು ಎಸ್‌ಡಿಪಿಐ ಪ್ರತಿಭಟನೆಗಳನ್ನು ನಡೆಸುತ್ತಿದೆ. ಕೇರಳದಲ್ಲಂತೂ ಪ್ರತೀದಿನ ಪ್ರತಿಭಟನೆ ನಡೆಸಲಾಗುತ್ತಿದೆ.

ಎರ್ನಾಕುಲಂನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ರಸ್ತೆಯಲ್ಲಿ ನಿಂತು ಮಾತನಾಡುವ ಎಸ್‌ಡಿಪಿಐ ಮುಖಂಡ ಶಿಜು ಬಕ್ಕರ್ ಎಂಬಾತ "ಬಿಜೆಪಿ ಎನ್‌ಐಎಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಪಿಎಫ್‌ಐ ಮತ್ತು ಎಸ್‌ಡಿಪಿಐ ಅನ್ನು ಮುಗಿಸಲು ಸಂಚು ರೂಪಿಸುತ್ತಿದೆ" ಎಂದು ಕಿಡಿಕಾರಿರುವ ಆತ, "ಆರ್‌ಎಸ್‌ಎಸ್‌ನವರಿಗೆ ನಾನು ಹೇಳುವುದೇನೆಂದರೆ, ನಿಮ್ಮ ಮುಂದೆ ನಾವು ಸೋಲೊಪ್ಪುವುದಿಲ್ಲ. ಒಂದೋ ನಮ್ಮ ಆದರ್ಶಗಳು ದೇಶದಲ್ಲಿ ಗೆಲ್ಲುತ್ತವೆ ಅಥವಾ ನಾವು ಕನಸು ಕಾಣುವ ಹುತಾತ್ಮತೆಯನ್ನು ಸ್ವೀಕರಿಸುತ್ತೇವೆ. ನೀವು ಕತ್ತಲೆ ಹಿಂದೆ ನಿಂತು ನಮ್ಮ ಕಾರ್ಯಕರ್ತರ ಮೇಲೆ ದಾಳಿ ಮಾಡಿದ್ದೀರಿ. ಆದರೆ ನಾವು ನಿಮ್ಮನ್ನು ಹತ್ತೇ ಸೆಕೆಂಡ್‌ಗಳಲ್ಲಿ ಮುಗಿಸಬಲ್ಲೆವು. ನಿಮ್ಮ ಬೆದರಿಕೆಗೆ ಮಣಿಯದೇ ಮುಂದೆ ಹೋಗುವ ಒಂದು ಸಂಘಟನೆ ಮತ್ತು ಅದರ ಕಾರ್ಯಕರ್ತರು ಇಲ್ಲಿದ್ದಾರೆ" ಎಂದು ಆತ ಅಬ್ಬರಿಸಿದಾಗ, ನೆರೆದಿದ್ದ ಪಿಎಫ್‌ಐ ಮತ್ತು ಎಸ್‌ಡಿಪಿಐ ಕಾರ್ಯಕರ್ತರು ಆತನನ್ನು ಹುರಿದುಂಬಿಸುವಂತೆ ಘೋಷಣೆಗಳನ್ನು ಕೂಗಿದ್ದಾರೆ.

ಪಾಕ್‌ನಲ್ಲಿ ಹೆಲಿಕಾಪ್ಟರ್ ಅಪಘಾತ: ಆರು ಸೇನಾಧಿಕಾರಿಗಳ ಸಾವು

ಇಸ್ಲಾಮಾಬಾದ್, ಸೆ. 26– ನೈರುತ್ಯ ಬಲೋಚಿಸ್ತಾನ್ ಪ್ರಾಂತ್ಯದಲ್ಲಿ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ಇಬ್ಬರು ಪೈಲಟ್ ಸೇರಿದಂತೆ ಪಾಕಿಸ್ತಾನದ ಆರು ಸೇನಾಧಿಕಾರಿಗಳು ಸಾವನ್ನಪ್ಪಿದ್ದಾರೆ ಎಂದು ಪಾಕ್ ಸೇನೆ ಸೋಮವಾರ ತಿಳಿಸಿದೆ. ಬಲೋಚಿಸ್ತಾನ್ ಪ್ರಾಂತ್ಯದ ಹರ್ನಾಯ್‌ನಲ್ಲಿನ ಕೋಸ್ಟ್ ಬಳಿ ಭಾನುವಾರ ರಾತ್ರಿ ಹೆಲಿಕಾಪ್ಟರ್ ಹಾರಾಟ ನಡೆಸುವಾಗ ಈ ಘಟನೆ ನಡೆದಿದೆ. ಆದರೆ, ಅಪಘಾತಕ್ಕೆ ಕಾರಣ ತಿಳಿದುಬಂದಿಲ್ಲ. ಕಳೆದ ತಿಂಗಳು ಕೂಡಾ ಇದೇ ರೀತಿಯ ಅಪಘಾತ ನಡೆದಿತ್ತು. ಆಗಸ್ಟ್ 1 ರಂದು ನಡೆದಿದ್ದ ಹೆಲಿಕಾಪ್ಟರ್ ಅಪಘಾತದಲ್ಲಿ ಲೆಫ್ಟಿನೆಂಟ್ ಜನರಲ್ ಸೇರಿದಂತೆ ಆರು ಮಂದಿ ಸಾವನ್ನಪ್ಪಿದ್ದರು. ಹವಾಮಾನ ವೈಪರೀತ್ಯ ಕಾರಣದಿಂದ ಈ ಅಪಘಾತ ಸಂಭವಿಸಿದೆ ಎಂದು ಸೇನೆ ಹೇಳಿತ್ತು.

ಎಸ್‌ಸಿ, ಎಸ್‌ಟಿ ಮೀಸಲು ಹೆಚ್ಚಳ: ಅ.8ರಂದು ಸರ್ವಪಕ್ಷ ಸಭೆ

ಹೊಸಪೇಟೆ (ವಿಜಯನಗರ): ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂಬ ಬೇಡಿಕೆ ಬಗ್ಗೆ ಚರ್ಚಿಸಲು ಸರ್ಕಾರ ಅ. 8ರಂದು ಬೆಂಗಳೂರಿನಲ್ಲಿ ಸರ್ವಪಕ್ಷಗಳ ಸಭೆ ಕರೆದಿದೆ. ಎಲ್ಲ ಪಕ್ಷಗಳ ಮುಖಂಡರ ಸಲಹೆ, ಅಭಿಪ್ರಾಯ ಪಡೆದು, ಆದಷ್ಟು ಶೀಘ್ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು. ಜಿಲ್ಲೆಯ ಕೂಡ್ಲಿಗಿಯಲ್ಲಿ ಸೋಮವಾರ ನಡೆದ ಮಿನಿ ವಿಧಾನಸೌಧ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಪಕ್ಷ ಹಾಗೂ ಸರ್ಕಾರ ಕೊಟ್ಟ ಮಾತಿನಂತೆ ಮೀಸಲು ಕಲ್ಪಿಸಲು ಬದ್ಧವಾಗಿದೆ. ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ ಎಂದರು.



ಜಾತ್ಯತೀತ ಜನತಾದಳದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಅಬ್ದುಲ್ಲಾ ಅವರನ್ನು ಉದ್ಯಮಿ ಹಾಗೂ ಜೆಡಿಎಸ್ ನಗರ ಉಪಾಧ್ಯಕ್ಷ ಜಿ.ಮಂಜುಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಜೀದ್ ಹುಸೇನ್, ಸಾಗರ್‌ಗೌಡ, ಅಕ್ಮಲ್ ಇತರರಿದ್ದರು.

ಮೈಸೂರು ಮಿತ್ರ



ಅಡುಗೆ ಒಲೆಗೆ ಬೆಂಕಿ ಹಚ್ಚುವ ಮೂಲಕ ಆಹಾರ ಮೇಳಕ್ಕೆ ಚಾಲನೆ

● ಸಸ್ಯಾಹಾರ, ಮಾಂಸಾಹಾರದ ಮಳಿಗೆಗಳ ಜೊತೆಗೆ ವಿವಿಧ ಚಾಟ್‌ಗಳು ಲಭ್ಯ ● ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಲಲಿತಮಹಲ್ ಪ್ಯಾಲೇಸ್ ಬಳಿಯ ಮೈದಾನದಲ್ಲಿ ಖಾದ್ಯ ಮೇಳ





ಮೈಸೂರು, ಸೆ.26(ಆರ್‌ಕೆಬಿ)– ನಾಡಹಬ್ಬ ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ 8 ದಿನಗಳ ಆಹಾರ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಇಂದಿಲ್ಲಿ ಉದ್ಘಾಟನೆ ನೆರವೇರಿಸಿದರು.

ನಂದಿಧ್ವಜ ಕುಣಿತ, ವೀರಗಾಸೆ ಕುಣಿತ, ಕಂಸಾಳೆ ಇನ್ನಿತರೆ ಜಾನಪದ ಕಲಾ ತಂಡಗಳೊಡನೆ ಆಗಮಿಸಿದ ಸಚಿವ ಸೋಮಶೇಖರ್ ಅಡುಗೆ ಒಲೆಗೆ ಬೆಂಕಿ ಹಚ್ಚುವ ಮೂಲಕ ಆಹಾರ ಮೇಳಕ್ಕೆ ಚಾಲನೆ ನೀಡಿದರು. ಅವರೊಂದಿಗೆ ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ ಇನ್ನಿತರರು ಸಾಥ್ ನೀಡಿದರು.

ಉದ್ಘಾಟನೆ ಬಳಿಕ ಸಚಿವರು ಆರೋಮಾ ಬೇಕ್ಸ್ ಅವರ ಮಳಿಗೆಯಲ್ಲಿ ಕೇಕ್ ಸವಿದರು. ನಂತರ ಆಹಾರ ಮೇಳದ ಕೆಲ ಮಳಿಗೆಗಳಿಗೆ ಭೇಟಿ ನೀಡಿ ಸಸ್ಯಹಾರ ಮತ್ತು ಮಾಂಸಾಹಾರದ ಖಾದ್ಯಗಳನ್ನು ವೀಕ್ಷಿಸಿದರು. ಬುಡಕಟ್ಟು ಜನರ ಮಳಿಗೆಗೆ ಭೇಟಿ ನೀಡಿ, ಅಲ್ಲಿ ತಯಾರಾಗುತ್ತಿದ್ದ ಬೊಂಬು ಬಿರಿಯಾನಿ ಸಿದ್ಧವಾಗುತ್ತಿದ್ದುದನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಆಹಾರ ಮೇಳ ಉಪ ಸಮಿತಿ ಕಾರ್ಯಾಧ್ಯಕ್ಷೆಯೂ ಆದ ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ, ಆಹಾರ ಇಲಾಖೆ ವ್ಯವಸ್ಥಾಪಕ ಸತೀಶ್, ಆಹಾರ ಮೇಳದ ಉಪ ವಿಶೇಷಾಧಿಕಾರಿ ಜಿ.ಟಿ.ದಿನೇಶ್‌ಕುಮಾರ್, ಮೇಳದ ಅಧ್ಯಕ್ಷ ದೇವರಾಜೇಗೌಡ, ಉಪಾಧ್ಯಕ್ಷ ಈರೇಗೌಡ, ಮೋಹನ್, ಭಾನುಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

> ದಸರಾ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಎರಡು ಕಡೆ ಆಹಾರ ಮೇಳ ಆಯೋಜಿಸಲಾಗಿದ್ದು, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ ಮತ್ತು ಲಲಿತಮಹಲ್ ಪ್ಯಾಲೇಸ್ ಬಳಿಯ ಮೈದಾನದಲ್ಲಿ ಆಹಾರ ಮೇಳ ಆಯೋಜಿಸಲಾಗಿದೆ. ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ 117 ಮತ್ತು ಲಲಿತಮಹಲ್ ಬಳಿ 74 ಮಳಿಗೆಗಳು ಸೇರಿ ಒಟ್ಟು 192 ಮಳಿಗೆಗಳನ್ನು ತೆರೆಯಲಾಗಿದೆ. ಇವುಗಳಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ವಿಭಾಗಗಳಾಗಿ ವಿಂಗಡಿಸಲಾಗಿದೆ. ಬೇರೆ ಬೇರೆ ರಾಜ್ಯ ಮತ್ತು ಮೈಸೂರು ಜಿಲ್ಲೆಯ ವಿವಿಧ ರೀತಿಯ ಖಾದ್ಯ, ವೈವಿಧ್ಯಮಯ, ರುಚಿಕರ ಖಾದ್ಯಗಳನ್ನು ಸವಿಯಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿನ ಸ್ಥಳೀಯರಿಗೆ ಮಳಿಗೆಗಳಲ್ಲಿ ಅವಕಾಶ ಕಲ್ಪಿಸಿದ್ದು, ನಿಗದಿಪಡಿಸಿರುವ ಖಾದ್ಯಗಳ ದರವನ್ನು ಮಳಿಗೆಗಳ ಮುಂದೆ ಪ್ರದರ್ಶಿಸಲು ಸೂಚಿಸಲಾಗಿದೆ. ಅ.3ರವರೆಗೆ ಆಹಾರ ಮೇಳ ನಡೆಯಲಿದೆ. ಶುಚಿ ಮತ್ತು ರುಚಿಗೆ ಆದ್ಯತೆ ನೀಡಲಾಗಿದೆ.
>
> – **ಕುಮುದಾ,** ಆಹಾರ ಇಲಾಖೆ ಜಂಟಿ ನಿರ್ದೇಶಕಿ, ಆಹಾರ ಮೇಳ ಉಪಸಮಿತಿ ಕಾರ್ಯಾಧ್ಯಕ್ಷೆ

ನಾಟಿಕೋಳಿ ಬೊಂಬು ಬಿರಿಯಾನಿ ವಿಶೇಷ

ಮೈಸೂರು ದಸರಾ ಆಹಾರ ಮೇಳ ಎಂದರೆ ಮಾಂಸಾಹಾರ ಪ್ರೇಮಿಗಳಿಗೆ ನೆನಪಾಗುವುದು ಬೊಂಬು ಬಿರಿಯಾನಿ. ಅಂತೆಯೇ ಈ ಬಾರಿ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ



ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯದವರ ಮಳಿಗೆಯಲ್ಲಿ ಬುಡಕಟ್ಟು ಜನರ ಸಾಂಪ್ರದಾಯಿಕ ನಾಟಿ ಕೋಳಿ ಬೊಂಬು ಬಿರಿಯಾನಿ ಆಕರ್ಷಣೆಯಾಗಿದೆ ಈ ನಾಟಿಕೋಟಿ ಬೊಂಬು ಬಿರಿಯಾನಿ ಪ್ರತಿ ಪ್ಲೇಟ್‌ಗೆ 225 ರೂ. ನಿಗದಿಪಡಿಸಿದ್ದಾರೆ.

ಪ್ರಕೃತಿ ಆದಿವಾಸಿ ಫೌಂಡೇಷನ್ ಟ್ರಸ್ಟ್ ವತಿಯಿಂದ ತೆರೆಯಲಾಗಿರುವ ಮಳಿಗೆಯಲ್ಲಿ ಈ ಬಾರಿ ನೈಸರ್ಗಿಕವಾಗಿ ಕಾಡಿನಲ್ಲೇ ಬೆಳೆಯುವಂತಹ ಪ್ರೋಟೀನ್‌ಯುಕ್ತ ಸೊಪ್ಪುಗಳಾದ ಪಲ್ಲೆಯ ಸೊಪ್ಪು, ಮಾಗಡೆ ಸೊಪ್ಪು, ಜಾಗಡಿ ಸೊಪ್ಪು, ಆಲೆ ಸೊಪ್ಪು, ಗಣಿಕೆ ಸೊಪ್ಪುಗಳನ್ನು ಒಳಗೊಂಡ ವಿಶೇಷ ಪಲ್ಯ ಆಹಾರ ಪ್ರಿಯರಿಗೆ ಲಭ್ಯವಾಗಲಿದೆ. ಇದರ ಬೆಲೆ ಒಂದು ಪ್ಲೇಟ್‌ಗೆ 50 ರೂ. ನಿಗದಿಪಡಿಸಿದ್ದಾರೆ. ಇವುಗಳ ಸೇವನೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದಲ್ಲದೆ, ಆರೋಗ್ಯವೂ ವೃದ್ಧಿಸುತ್ತದೆ ಎನ್ನುತ್ತಾರೆ ಮಳಿಗೆಯ ಎಂ.ಕೃಷ್ಣಯ್ಯ.

ಪ್ರತಿ ವರ್ಷದಂತೆ ಈ ಬಾರಿಯೂ ಆದಿವಾಸಿ ಗಿಡಮೂಲಿಕೆ ತಜ್ಞೆ ನಾಗಮ್ಮ ಹಾಜರಿದ್ದು, ವಿವಿಧ ಕಾಯಿಲೆಗಳಿಗೆ ಆದಿವಾಸಿಗಳಲ್ಲಿ ಜನಪ್ರಿಯವಾಗಿರುವ ಔಷಧಿ ನೀಡುತ್ತಿದ್ದಾರೆ.

ಮೇಳದಲ್ಲಿ ನಳ್ಳಿ ಸಾರು, ಮುದ್ದೆ ಒಂದು ಪ್ಲೇಟ್‌ಗೆ 100 ರೂ., ಕಾಡುಗೆಣಸು ಜೇನುತುಪ್ಪ ಮಿಶ್ರಾ ಪ್ಲೇಟ್‌ಗೆ 50 ರೂ., ಬಿದಿರಕ್ಕಿ ಪಾಯಸ 50 ರೂ., ಮಾಕಳಿ ಬೇರಿನ ಟೀ 20 ರೂ. ನಿಗದಿಯಾಗಿದೆ

ಆಹಾರ ಮೇಳದಲ್ಲಿ ಸಚಿವರ ವಿರುದ್ಧ ರೈತರ ಘೋಷಣೆ

ಮೈಸೂರು, ಸೆ.26(ಆರ್‌ಕೆಬಿ)– ದಸರಾ ಆಹಾರ ಮೇಳದ ಉದ್ಘಾಟನೆಗೆ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಮೈಸೂರು ಜಿಲ್ಲೆಯ ಕಡಕೊಳ ಗ್ರಾಮದ ರೈತರ ಪ್ರತಿಭಟನೆಯ ಬಿಸಿ ತಟ್ಟಿತು.

ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆಯ ಕಡಕೊಳ ಗ್ರಾಮ ಘಟಕದ ಕಾರ್ಯಕರ್ತರು, ಮುಖಂಡ ಇಮ್ಮಾವು ರಘು ನೇತೃತ್ವದಲ್ಲಿ ಆಹಾರ ಮೇಳಕ್ಕೆ ಆಗಮಿಸಿದ್ದ ಸಚಿವರಿಗೆ ಮನವಿ ಸಲ್ಲಿಸಲು ಮುಂದಾದರು. ಆದರೆ ಸಚಿವರು ಏಕಾಏಕಿ ಕಾರು ಹತ್ತಿ ಹೊರಟಿದ್ದರಿಂದ ಆಕ್ರೋಶಗೊಂಡ ಕೆಲ ರೈತರು ಸಚಿವರ ವಿರುದ್ಧ ಘೋಷಣೆ ಕೂಗಿ, ಸಚಿವರು ರೈತ ವಿರೋಧಿ ಧೋರಣೆ ತಳೆದಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾಧ್ಯಮದೊಂದಿಗೆ ಮಾತನಾಡಿದ ರೈತ ಮುಖಂಡ ಇಮ್ಮಾವು ರಘು, ಮೈಸೂರು ತಾಲೂಕಿನ ಕಡಕೊಳ ಸೇರಿದಂತೆ ಹಲವು ಗ್ರಾಮಗಳ ರೈತರಿಂದ ಕೆಐಎಡಿಬಿಯು ಪಡೆದ ಭೂಮಿಗೆ ಸೂಕ್ತ ಪರಿಹಾರವನ್ನು ನೀಡಿಲ್ಲ ರೈತರ ಕುಟುಂಬಗಳಿಗೆ ಉದ್ಯೋಗ ನೀಡದೆ ವಂಚಿಸುತ್ತಿವೆ. ಕನಿಷ್ಠ ಭೂಮಿ ಕಳೆದುಕೊಂಡ ರೈತ ಮಕ್ಕಳಿಗೆ ಖಾಯಂ ಉದ್ಯೋಗ ನೀಡದೆ, ಉದ್ಯೋಗ ಭದ್ರತೆ ನೀಡುವಲ್ಲಿ ಸರ್ಕಾರವೂ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಅಹವಾಲು ಆಲಿಸದಿದ್ದಕ್ಕೆ ಆಕ್ರೋಶ



ಇಂದಿನಿಂದ ದಸರಾ ಚಲನಚಿತ್ರೋತ್ಸವ

ಮೈಸೂರು, ಸೆ.26– ದಸರಾ ಚಲನಚಿತ್ರೋತ್ಸ ಸೆ.27ರಿಂದ ಆರಂಭವಾಗಿ ಅ.3ರವರೆಗೆ ಒಟ್ಟು 112 ಚಿತ್ರಗಳು ಪ್ರದರ್ಶನಗೊಳ್ಳಲಿದ್ದು, ಚಲನಚಿತ್ರೋತ್ಸವದಲ್ಲಿ 56 ಕನ್ನಡ, 28 ಪನೋರಮಾ, 28 ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ಸಿನಿಮಾಗಳು ಐನಾಕ್ಸ್‌ನಲ್ಲಿ 3 ಮತ್ತು ಡಿಆರ್‌ಸಿಯ 1 ಸ್ಕ್ರೀನ್‌ನಲ್ಲಿ ಪ್ರದರ್ಶನಗೊಳ್ಳಲಿದೆ.

ದಿ. ಪುನೀತ್ ರಾಜ್‌ಕುಮಾರ್ ಹಾಗೂ ಸಂಚಾರಿ ವಿಜಯ್ ನಟಿಸಿರುವ ಜನಪ್ರಿಯ ಸಿನಿಮಾಗಳನ್ನು ಪ್ರದರ್ಶಿಸಲಾಗುತ್ತಿದ್ದು, ಪುನೀತ್ ನಟನೆಯ ಬೆಟ್ಟದ ಹೂ, ಅಂಜನಿಪುತ್ರ, ರಾಜಕುಮಾರ್, ಮೈತ್ರಿ, ಪೃಥ್ವಿ, ಯುವರತ್ನ ಹಾಗೂ ಸಂಚಾರಿ ವಿಜಯ್ ಅಭಿನಯದ ತಲೆದಂಡ, ಪುಕ್ಸಟ್ಟೆ ಲೈಫು, ಆಕ್ಟ್ 1978 ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

ಕನ್ನಡ ಚಿತ್ರಗಳಾದ 100, 777 ಚಾರ್ಲಿ, ಶ್ರೀಸುತ್ತೂರು ಮಠ–ಗುರುಪರಂಪರೆ, ಆದ್ಯಾ, ಅವನೇ ಶ್ರೀಮನ್ನಾರಾಯಣ, ಅವತಾರ ಪುರುಷ, ಬಡವರಾಸ್ಕಲ್, ಭಜರಂಗಿ–2, ಭರಾಟೆ, ದಿಯಾ, ದೃಶ್ಯ–2, ಗಾಳಿಪಟ, ಗರುಡಗಮನ ವೃಷಭವಾಹನ, ಜಂಟಲ್ ಮನ್, ಗಿಫ್ಟ್ ಬಾಕ್ಸ್, ಹರಿಕಥೆ ಅಲ್ಲ ಗಿರಿಕಥೆ, ಹೀರೋ, ಇಂಡಿಯಾ ವರ್ಸಸ್ ಇಂಗ್ಲೆಂಡ್, ಇನ್ಸಪೆಕ್ಟರ್ ವಿಕ್ರಂ, ಕವಚ, ಕವಲುದಾರಿ, ಕೆಜಿಎಫ್ 1, ಕೆಜಿಎಫ್ 2, ಲವ್ ಮಾಕ್ಟೇಲ್1, ಲವ್ ಮಾಕ್ಟೇಲ್–2, ಮದಗಜ, ಮುಗಿಲ್‌ಪೇಟೆ, ನಿನ್ನ ಸನಿಹಕೆ, ಒಂಭತ್ತನೇ ದಿಕ್ಕು, ಪೈಲ್ವಾನ್, ರೈಡರ್, ರಾಬರ್ಟ್, ಸಖತ್, ಸಲಗ, ಸೀತಾರಾಮ ಕಲ್ಯಾಣ, ಶಿವಾಜಿ ಸುರತ್ಕಲ್, ವಿಕ್ರಾಂತ್ ರೋಣ, ವಿಂಡೋಸೀಟ್ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಭಾರತೀಯ ಚಿತ್ರಗಳಾದ ಎ ಡಾಗ್ & ಹಿಸ್ ಮ್ಯಾನ್, ಹರಿವ ನದಿಗೆ ಮೈಯೆಲ್ಲಾ ಕಾಲು, ಅಡಿಯುಗೊಡಾರ್ಡ್, ಅಗ್ನಿವರ್ಷ, ಐಸೇ ಹಿ, ಬಾಫ್, ಬೂಂಬಾ ರೈಡ್, ಈ ಮಣ್ಣು, ಘೋಡೇ ಕೋ ಜಲೇಬಿ ಖಿಲಾನೆ ಲೇಜಾರಿಯಾ ಹೂಂ, ಹಾರುವ ಹಂಸಗಳು, ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಇಂಟು ದಿ ಮಿಸ್ಟ್, ದಿ ಕ್ಲೌಡ್ &ದಿ ಮ್ಯಾನ್, ಮನುಸಂಗಡ, ಮಿಂಚುಹುಳು, ಮೂಕಜ್ಜಿಯ ಕನಸುಗಳು, ನೀಲಿಹಕ್ಕಿ, ನೋಯ್, ಪದಕ, ಸಾರಾ ವಜ್ರ, ಉರಿಯಟ್ಟು ವಿಡೋ ಆಫ್ ಸೈಲೆನ್ಸ್ ಪ್ರದರ್ಶನಗೊಳ್ಳಲಿವೆ.

ವಿಶ್ವ ಚಿತ್ರಗಳಾದ ಜೆಂಟಲ್ ಕ್ರೀಚರ್, ಎ ಹೀರೋ, ಅಡಲ್ಟ್ಸ್ ಇನ್ ದಿ ರೂಮ್, ಅನದರ್ ರೌಂಡ್, ಆ್ಯಶ್ ಇಸ್ ದಿ ಪ್ಯೂರೆಸ್ಟ್ ವೈಟ್, ಕ್ಯಾಪರ್ನಾಮ್, ಎವರಿಥಿಂಗ್ ಎವೆರಿವೇರ್ ಅಳ್ ಎಟ್ ಒನ್ಸ್, ಎಕ್ಸೈಲ್, ಐ ಡೇನಿಯಲ್ ಬ್ಲೇಕ್, ಲವ್ ಲೆಸ್, ನಾರ್ಥ್ ಸಿ, ಪ್ಯಾರಲೆಲ್ ಮದರ್ಸ್, ಪ್ಯಾರಾ ಸೈಟ್, ಪೋಟ್ರೇಟ್ ಆಫ್ ಎ ಲೇಡಿ ಆನ್ ಫೈರ್, ಸಾರಿ ವಿ ಮಿಸ್ಡ್ ಯೂ, ಸ್ಪೆನ್ಸರ್, ಬೈಸಿಕಲ್ ಥೀವ್ಸ್, ದಿ ಲಾಸ್ಟ್ ಎಕ್ಸೆ ಕ್ಯೂಷನ್, ದಿ ಸೆವೆಂತ್ ಸೀಲ್, ದಿ ಟ್ಯೂರಿನ್ ಹಾರ್ಸ್, ಥ್ರೋನ್ ಆಫ್ ಬ್ಲಡ್, ಆನ್ ಡೈನ್, ವ್ಯಾಗಾ ಬಾಂಡ್, ವಾಕಬೌಟ್, ವೆನ್ ಹಿಟ್ಲರ್ ಸ್ಟೋಲ್ ಪಿಂಕ್ ರ್ಯಾಬಿಟ್, ವೈಫ್ ಆಫ್ ಎ ಸ್ಪೈ, ವಿಮೆನ್ ಇನ್ ದಿ ಡ್ಯೂನ್ಸ್ ಪ್ರದರ್ಶನಗೊಳ್ಳಲಿದೆ. ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಇಚ್ಛಿಸುವವರು https://bit.ly/3UwiZm7 ವೆಬ್‌ಸೈಟ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ 300 ರೂ. ಹಾಗೂ ಇತರರಿಗೆ 500 ರೂ. ದರವನ್ನು ನಿಗದಿಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೂರ ದರ್ಶನವೂ ಸೇರಿ ಇತರೆ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ದಸರಾ ನೇರಪ್ರಸಾರ : ವ್ಯಾಪಕ ಪ್ರಶಂಸೆ

ಮೈಸೂರು, ಸೆ.26(ಜಿಎ)– ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟನಾ ಕಾರ್ಯಕ್ರಮವನ್ನು ವಿಶ್ವದಾದ್ಯಂತ ದೂರ ದರ್ಶನ, ಇತರೆ ದೃಶ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣದ ಮೂಲಕ ಲಕ್ಷಾಂತರ ಜನರು ವೀಕ್ಷಿಸಿದ್ದು, ಯಾವುದೇ ಅಡ–ತಡೆಗಳಿಲ್ಲದೆ ನೇರಪ್ರಸಾರ ವ್ಯವಸ್ಥೆ ಕಲ್ಪಿಸಿದ ಅಧಿಕಾರಿಗಳನ್ನು ಸಾರ್ವಜನಿಕರು ಪ್ರಶಂಸಿಸಿದ್ದಾರೆ.

ಈ ಬಾರಿಯ ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸುತ್ತಿದ್ದಾರೆ ಎಂದ ತಕ್ಷಣ ಸಾರ್ವಜನಿಕ ವಲಯದಲ್ಲಿ ಬಾರೀ ಕುತೂಹಲ ಮೂಡಿತು. ಭದ್ರತಾ ವಿಚಾರವಾಗಿ ಚಾಮುಂಡಿ ಬೆಟ್ಟದಲ್ಲಿನ ಉದ್ಘಾಟನಾ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ನಿರ್ಬಂಧ ಹೇರಿ, ಕೆಲ ಗಣ್ಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಸಂಬಂಧ ವೆಬ್ ಸೈಟ್ ನೋಡೆಲ್ ಅಧಿಕಾರಿ ಹಾಗೂ ವಾರ್ತಾಧಿಕಾರಿ ಹರೀಶ್ ಅವರು ಅನುಭವಿ ತಂತ್ರಜ್ಞರನ್ನು ಬಳಸಿಕೊಂಡು ದಸರಾ ನೇರಪ್ರಸಾರದಲ್ಲಿ ಯಾವುದೇ ಅಡೆ–ತಡೆಯಾಗದಂತೆ ಯ್ಯೂಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ದಸರಾ ವೀಕ್ಷಣೆ ವ್ಯವಸ್ಥೆ ಕಲ್ಪಿಸಿದರು.

ಈ ವ್ಯವಸ್ಥೆಗೆ ಈಗ ಮೈಸೂರು ಸೇರಿದಂತೆ ಅಕ್ಕ–ಪಕ್ಕದ ಜಿಲ್ಲೆಗಳ ಜನರಿಂದ ಬಾರೀ ಮೆಚ್ಚುಗೆ ವ್ಯಕ್ತವಾಗಿದ್ದು, ಹರೀಶ್ ಅವರಿಗೆ ಕರೆ ಮಾಡಿ ಪ್ರಶಂಸಿಸಿದ್ದಾರೆ. 45 ಕ್ಕೂ ಹೆಚ್ಚು ಟಿವಿ ಮಾಧ್ಯಮಗಳು, ಫೇಸ್‌ಬುಕ್ ಮೂಲಕ 40 ಸಾವಿರಕ್ಕೂ ಅಧಿಕ ಮಂದಿ ವೀಕ್ಷಿಸಿದ್ದು, ಯೂಟ್ಯೂಬ್‌ನಲ್ಲಿ 4ಸಾವಿರ ಮಂದಿ ವೀಕ್ಷಣೆ ಮಾಡಿದ್ದಾರೆ. ಅರಮನೆ ಆವರಣದಲ್ಲಿ ಸಂಜೆ ಆರಂಭವಾದ ಸಾಂಸ್ಕೃತಿಕ ಕಾರ್ಯಕ್ರಮವು ಯಾವುದೇ ಅಡಚಣೆ ಇಲ್ಲದೆ ಸುಗಮ ರೀತಿ ನೇರಪ್ರಸಾರವಾಗುತ್ತಿದೆ.

FacebookLink:https://facebook.mysoredasara.gov.in, YouTubeLink:https://youtube.mysoredasara.gov.in, Website Link: https://mysoredasara.gov.in/)

ಅರಮನೆ ಸುತ್ತ ಕಾಲ್ನಡಿಗೆಯಲ್ಲಿ ದೀಪಾಲಂಕಾರ ಸವಿಯಿರಿ...

ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸಲಹೆ

ಮೈಸೂರು, ಸೆ.26(ಆರ್‌ಕೆ)–ದಸರಾ ದೀಪಾಲಂಕಾರವನ್ನು ಕಾಲ್ನಡಿಗೆಯಲ್ಲಿ ಸವಿಯಿರಿ ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ವಿದ್ಯುದ್ದೀಪಾಲಂಕಾರ ನೋಡಲು ರಾತ್ರಿ ವೇಳೆ ಲಕ್ಷಾಂತರ ಮಂದಿ ವಾಹನಗಳಲ್ಲಿ ಬರುವುದರಿಂದ ಅರಮನೆ ಸುತ್ತಮುತ್ತ ಹಾಗೂ ಹೃದಯ ಭಾಗದಲ್ಲಿ ವಾಹನ ದಟ್ಟಣೆಯಿಂದ ಟ್ರಾಫಿಕ್ ಜಾಮ್ ಆಗಲಿದ್ದು, ಮಕ್ಕಳೊಂದಿಗೆ ಬರುವ ಜನರಿಗೆ ತೀವ್ರ ತೊಂದರೆಯಾಗುತ್ತದೆಯಲ್ಲದೆ, ಏಕಮುಖ ಸಂಚಾರವಿರುವುದರಿಂದ ಸಂಚಾರಕ್ಕೂ ಅಡ್ಡಿಯಾಗುತ್ತದೆ ಎಂದು ಅವರು ತಿಳಿಸಿದರು.

ಸುಗಮ ಸಂಚಾರಕ್ಕೆ ಅನುವು ಮಾಡಿ, ದೀಪಾಲಂಕಾರ ಸವಿಯುವ ಸಲುವಾಗಿ ವಾಹನಗಳನ್ನು ಪಾರ್ಕಿಂಗ್ ಲಾಟ್‌ನಲ್ಲಿ ನಿಲ್ಲಿಸಿ, ಕಾಲ್ನಡಿಗೆಯಲ್ಲಿ ಬಂದರೆ ಸಂಚಾರ ದಟ್ಟಣೆ ಕಿರಿಕಿರಿ ತಪ್ಪಿಸಬಹುದಾಗಿದೆ. ಅಕ್ಟೋಬರ್ 4ರವರೆಗೆ ರಾತ್ರಿ 9 ಗಂಟೆ ನಂತರ ಅರಮನೆ ಸುತ್ತಲಿನ ರಸ್ತೆಗಳಲ್ಲಿ ವಾಹನ ಸಂಚಾರವನ್ನು ನಿಷೇಧಿಸುವ ಬಗ್ಗೆ ಚಿಂತನೆ ನಡೆಸುತ್ತಿದ್ದು, ಸದ್ಯದಲ್ಲೇ ಈ ಸಂಬಂಧ ಅಧಿಸೂಚನೆ ಹೊರಡಿಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದರು. ಅ ವೇಳೆ ಸಮೀಪದ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸಿ ನಡೆದುಕೊಂಡೇ ಅರಮನೆ ಸುತ್ತ ದೀಪಾಲಂಕಾರ ವೀಕ್ಷಿಸಬೇಕು ಎಂದು ಅವರು ಹೇಳಿದರು.

ಚಂದನವನದ ತಾರೆಯರ ಮೆರುಗು; ದಸರಾ ಚಲನಚಿತ್ರೋತ್ಸವಕ್ಕೆ ಚಾಲನೆ

ಅಪರೂಪದ ಚಿತ್ರ ಪ್ರದರ್ಶನಕ್ಕೆ ನಾಲ್ಕು ಪರದೆಯಲ್ಲಿ ಅವಕಾಶ

ಮೈಸೂರು,ಸೆ.26(ಪಿಎಂ)– ಮೈಸೂರು ದಸರಾ ಚಲನಚಿತ್ರ ಉಪಸಮಿತಿ ವತಿಯಿಂದ ನಾಳೆಯಿಂದ (ಸೆ.27) ಅ.3ರವರೆಗೆ ಐನಾಕ್ಸ್ ಮತ್ತು ಡಿಆರ್‌ಸಿಯಲ್ಲಿ ಆಯೋಜಿಸಿರುವ ದಸರಾ ಚಲನಚಿತ್ರೋತ್ಸವದ ಸಿನಿಮಾಗಳ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಚಂದನವನದ ತಾರೆಯರ ಮೆರುಗು ಸೇರಿದಂತೆ ಮತ್ತಿತರ ಅತಿಥಿ ಗಣ್ಯರ ಸಮ್ಮುಖದಲ್ಲಿ ಚಾಲನೆ ನೀಡಿದ ಅವರು, ಇದೇ ವೇಳೆ ಚಿತ್ರೋತ್ಸವದ ಕೈಪಿಡಿ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿ, ಚಲನಚಿತ್ರೋತ್ಸವದಲ್ಲಿ ಹಲವು ಚಲನಚಿತ್ರಗಳನ್ನು ವೀಕ್ಷಿಸುವ ಸುವರ್ಣ ಅವಕಾಶ ದೊರೆಯಲಿದೆ. ಇದರಲ್ಲಿ ಒಂದು ದಿನ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಅವರು ಅಭಿನಯದ ಸಿನಿಮಾಗಳನ್ನೇ ಪ್ರದರ್ಶನ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಈ ವರ್ಷ ಅದ್ಧೂರಿ ದಸರಾ ಮಹೋತ್ಸವ ಆಚರಣೆ ಮಾಡುತ್ತಿದ್ದು, ನಗರದ 124 ಕಿ.ಮೀ. ವ್ಯಾಪ್ತಿಯ ರಸ್ತೆಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ 96 ವೃತ್ತಗಳನ್ನು ವಿದ್ಯುತ್ ದೀಪಾಲಂಕಾರದೊಂದಿಗೆ ಶೃಂಗಾರಗೊಳಿಸಲಾಗಿದೆ. ಇಂದು ಉದ್ಘಾಟನೆಗೆ ನಟ ಶಿವರಾಜ್‌ಕುಮಾರ್ ಆಗಮಿಸಬೇಕಿತ್ತು. ಆದರೆ ಕಾರಣಾಂತರದಿಂದ ಮತ್ತೊಂದು ದಿನ ಬರುವುದಾಗಿ ತಿಳಿಸಿದ್ದಾರೆ. ಸೆ.28ರ ಯುವ ದಸರಾದಲ್ಲಿ ಅಪ್ಪು ನಮನ ಕಾರ್ಯಕ್ರಮ ಏರ್ಪಡಿಸಿದ್ದು, ಅಂದು ಪುನೀತ್ ರಾಜ್‌ಕುಮಾರ್ ಧರ್ಮಪತ್ನಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಿನಿಮಾ ನಾಯಕ ನಟಿ ಅನುಪ್ರಭಾಕರ್ ಮುಖರ್ಜಿ ಮಾತನಾಡಿ, 2007ರಲ್ಲಿ ಇದೇ ವೇದಿಕೆಯಲ್ಲಿ ನನಗೆ ವೃತ್ತಿಜೀವನಕ್ಕೆ ಜನ್ಮ ನೀಡಿದ ತಾಯಿ ದಿವಂಗತ ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ದಿವಂಗತ ಎಂ.ಪಿ.ಶಂಕರ್ ಜೊತೆಗೆ ದಸರಾ ಚಲನಚಿತ್ರೋತ್ಸವ ಉದ್ಘಾಟನೆ ಮಾಡಿದ್ದೆ. ಇದಾಗಿ 15 ವರ್ಷಗಳು ಕಳೆದಿವೆ. ಇದನ್ನು ನೆನಸಿಕೊಂಡಾಗ, ಅಷ್ಟು ವಯಸ್ಸು ಆಗಿ ಹೋಯಿತೇ? ಎಂದು ನನಗೆ ಅನ್ನಿಸಿತು ಎಂದು ಹಾಸ್ಯ ಚಟಾಕಿ ಹಾರಿಸಿದರು.

ಈ ಚಲನಚಿತ್ರೋತ್ಸವ ನನಗೆ ವಿಶೇಷ. ಕಾರಣ ನಾನು ಅಭಿನಯಿಸಿದ 'ಸಾರಾವಜ್ರ' ಸಿನಿಮಾ ಕೂಡ ಪ್ರದರ್ಶನಗೊಳ್ಳುತ್ತಿದೆ. ಅ.1ರಂದು ಸಂಜೆ 7 ಗಂಟೆಗೆ ಈ ಸಿನಿಮಾ ಪ್ರದರ್ಶನಗೊಳ್ಳಲಿದೆ. ಅಪ್ಪು (ಪುನೀತ್ ರಾಜ್‌ಕುಮಾರ್) ಅವರು ನಮ್ಮ ಹೃದಯಲ್ಲಿ ಸದಾ ಇದ್ದೇ ಇರುತ್ತಾರೆ. ಕನ್ನಡ ಭಾಷೆ, ಕನ್ನಡ ಸಿನಿಮಾ ಮತ್ತು ಕನ್ನಡಿಗರು ಇರುವ ತನಕ ಅಪ್ಪು ಅಮರ. ಕನ್ನಡ ಚಿತ್ರರಂಗದ ಮೇಲೆ ನಿಮ್ಮ ಆಶೀರ್ವಾದ ಇರಲಿ ಎಂದರು.

ಚಂದನವನದ ತಾರೆಯರು ಮೂಲೆಗುಂಪು: ಪುನೀತ್ ರಾಜ್‌ಕುಮಾರ್ ಮತ್ತು ಸಂಚಾರಿ ವಿಜಯ್ ಸ್ಮರಣಾರ್ಥ ಅವರ ಭಾವಚಿತ್ರಗಳನ್ನು ವೇದಿಕೆಯ ಹಿಂಭಾಗದ ಬ್ಯಾನರ್‌ನಲ್ಲಿ ಅನಾವರಣಗೊಳಿಸಲಾಗಿತ್ತು. ಈ ಬಗ್ಗೆ ಸಭಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಆದರೆ ಮತ್ತೊಂದು ವಿಚಾರದಲ್ಲಿ ಅಪಸ್ವರವೂ ಎದ್ದಿತು.

ಚಿತ್ರೋತ್ಸವ ಉದ್ಘಾಟನೆಯಾದ ಹಿನ್ನೆಲೆಯಲ್ಲಿ ಕಾರ್ಯಕ್ರಮದ ವೇದಿಕೆಯಲ್ಲಿದ್ದ ನಟಿಯರಾದ ಅನು ಪ್ರಭಾಕರ್, ಅಮೃತ ಅಯ್ಯಂಗಾರ್ ಮತ್ತು ಕಾವ್ಯಶೆಟ್ಟಿ ಅವರಿಂದ ಉದ್ಘಾಟನೆ ನೆರವೇರಿಸಿದ್ದರೆ ಸೂಕ್ತವಿತ್ತು ಎಂಬ ಅಭಿಪ್ರಾಯ ಕೆಲ ಸಭಿಕರಿಂದ ವ್ಯಕ್ತವಾಯಿತಲ್ಲದೆ, ತಾರೆಯರನ್ನು ಆಹ್ವಾನಿಸಿ ಮೂಲೆಗುಂಪು ಮಾಡಿದ್ದಾರೆ ಎಂಬ ಅಪಸ್ವರವೂ ಅನೇಕರಿಂದ ಕೇಳಿಬಂದಿತು.

ಶಾಸಕ ಎಲ್.ನಾಗೇಂದ್ರ ಮೇಯರ್ ಶಿವಕುಮಾರ್, ಉಪಮೇಯರ್ ರೂಪ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥ ಸ್ವಾಮಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಇನ್ನಿತರರಿದ್ದರು.



ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲೂ ಕಿರಿಕಿರಿ!

ಮೈಸೂರು,ಸೆ.26(ಪಿಎಂ)– ದಸರಾ ಚಲನಚಿತ್ರ ಉಪಸಮಿತಿ ಪದಾಧಿಕಾರಿಯೊಬ್ಬರು ಹಾಗೂ ಪೊಲೀಸರ ನಡುವಿನ ಸಣ್ಣ ವಾಕ್ಸಮರಕ್ಕೆ ಕಲಾಮಂದಿರ ಆವರಣ ಸಾಕ್ಷಿಯಾಯಿತು.

ಚಲನಚಿತ್ರೋತ್ಸವ ಚಾಲನೆ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದ ಅತಿಥಿಗಳನ್ನು ಉಪಸಮಿತಿ ಪದಾಧಿಕಾರಿಗಳು ಹೂಗುಚ್ಛ ನೀಡಿ ಸ್ವಾಗತಿಸುತ್ತಿದ್ದರು. ಅಂತೆಯೇ ನಟಿ ಕಾವ್ಯಶೆಟ್ಟಿ ಅವರನ್ನು ಸ್ವಾಗತಿಸುವ ವೇಳೆ ಸಣ್ಣದೊಂದು ಇಂತಹ ವಾಕ್ಸಮರ ನಡೆದು ಕೆಲಕಾಲದಲ್ಲೇ ತಿಳಿಗೊಂಡಿತು.

ಕಾವ್ಯಶೆಟ್ಟಿ ಅವರನ್ನು ಸ್ವಾಗತಿಸುವ ವೇಳೆ 'ನೂಕು ನುಗ್ಗಲು ಮಾಡಿಕೊಳ್ಳಬೇಡಿ' ಎಂದು ಪೊಲೀಸರು ಹೇಳಿದಾಗ, ದಸರಾ ಚಲನಚಿತ್ರ ಉಪಸಮಿತಿ ಉಪಾಧ್ಯಕ್ಷ ಪ್ರಕಾಶ್ ಪಾಟೀಲ್ (ಅಧಿಕಾರೇತರರು), 'ನಾನು ಉಪಸಮಿತಿ ಉಪಾಧ್ಯಕ್ಷ ಸ್ಥಾನದಲ್ಲಿದ್ದೇನೆ. ನನಗೇ ಈ ರೀತಿ ಹೇಳುತ್ತೀರಾ? ಎಂದು ತುಸು ಏರುಧ್ವನಿಯಲ್ಲಿ ಪ್ರಶ್ನಿಸಿದ್ದಾರೆ. ಇದರಿಂದ ಸ್ಥಳದಲ್ಲಿದ್ದ ಪಿಎಸ್‌ಐ ಅವರು, 'ನಾವು ನಮ್ಮ ಕರ್ತವ್ಯ ಮಾಡಲು ಬಿಡಿ. ಈ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಲಕಾಲದಲ್ಲಿ ಪರಸ್ಪರರೂ ಸಮಾಧಾನಗೊಂಡರು.

ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರಿಂದ ಬೆಟ್ಟದ ಹೂ ಚಿತ್ರ ವೀಕ್ಷಣೆ

ಮೈಸೂರು, ಸೆ.26– ಅಪ್ಪು ದಿನದ ಮೈಸೂರು ದಸರಾ–2022 ಹಾಗೂ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಆಯೋಜಿಸಲಾಗಿರುವ ಅಂಗವಾಗಿ ಡಾ. ಪುನೀತ್ ರಾಜಕುಮಾರ್ ಅವರು ಬಾಲನಟರಾಗಿ ನಟಿಸಿರುವ ಬೆಟ್ಟದ ಹೂ ಚಿತ್ರವನ್ನು ಸೆಪ್ಟೆಂಬರ್ 28 ರುದು ಬೆಳಗ್ಗೆ 9.30 ಗಂಟೆಗೆ ಶಕ್ತಿಧಾಮ ಮಕ್ಕಳೊಂದಿಗೆ ಡಾ.ಪುನೀತ್ ರಾಜಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ವೀಕ್ಷಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿತ್ಯ ನಾಲ್ಕು ಪ್ರದರ್ಶನ

ಮೈಸೂರು,ಸೆ.26(ಪಿಎಂ)– ಸೆ.27ರಿಂದ ಅ.3ರವರೆಗೆ ದಸರಾ ಚಲನಚಿತ್ರೋತ್ಸವ ನಡೆಯಲಿದ್ದು, ಮಾಲ್ ಆಫ್ ಮೈಸೂರ್‌ನಲ್ಲಿರುವ ಐನಾಕ್ಸ್‌ನ 3 ಪರದೆಗಳಲ್ಲಿ ಭಾರತೀಯ ಚಿತ್ರಗಳು, ಕನ್ನಡ ಚಿತ್ರಗಳು ಹಾಗೂ ವಿಶ್ವ ಚಿತ್ರಗಳು ಪ್ರದರ್ಶನಗೊಳ್ಳಲಿವೆ ಅಂತೆಯೇ ಬಿಎಂ ಹ್ಯಾಬಿಟ್ಯಾಟ್ ಮಾಲ್‌ನಲ್ಲಿರುವ ಡಿಆರ್‌ಸಿಯ ಒಂದು ಪರದೆಯಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ನಡೆಯಲಿದೆ.

ಎಲ್ಲಾ ಪರದೆಗಳಲ್ಲೂ ಪ್ರತಿದಿನ ನಾಲ್ಕು ಪ್ರದರ್ಶನ ನಡೆಯಲಿದೆ. ಸಿನಿಮಾಗಳನ್ನು ವೀಕ್ಷಿಸಲು ಟಿಕೆಟ್ ಮತ್ತು ಪಾಸ್ ವ್ಯವಸ್ಥೆ ಮಾಡಿದ್ದು, ಒಂದು ದಿನಕ್ಕೆ ಚಿತ್ರಗಳನ್ನು ವೀಕ್ಷಿಸಲು 100 ರೂ. ಟಿಕೆಟ್ ವ್ಯವಸ್ಥೆ ಇದೆ. ಇಡೀ ಚಲನಚಿತ್ರೋತ್ಸವ ವೀಕ್ಷಿಸಲು ವಿದ್ಯಾರ್ಥಿಗಳಿಗೆ ತಲಾ 300 ರೂ. ಹಾಗೂ ಸಾರ್ವಜನಿಕರಿಗೆ ತಲಾ 500 ರೂ.ಗಳ ಪಾಸ್ ವ್ಯವಸ್ಥೆ ಮಾಡಲಾಗಿದೆ.

ಅಪ್ಪು ಬಗ್ಗೆ ಕವನ ವಾಚನ

ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ಆರ್.ರಘು ಕೌಟಿಲ್ಯ ಪುನೀತ್ ರಾಜ್‌ಕುಮಾರ್ ಸ್ಮರಣೆಯಲ್ಲಿ ತಾವು ರಚಿಸಿರುವ ಎರಡು ಕವನ ವಾಚಿಸಿ ಗಮನ ಸೆಳೆದರು. ಅಪ್ಪು ಅವರನ್ನು ಕಳೆದುಕೊಂಡ ಕನ್ನಡ ನಾಡು ಇನ್ನು ಅವರನ್ನು ಮರೆತಿಲ್ಲ. ಮುಖ್ಯಮಂತ್ರಿ ಗಳು ನ.1ರಂದು ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪುರಸ್ಕಾರ ನೀಡುತ್ತಿದ್ದಾರೆ ಎಂದು ಅಗಲಿದ ಅಪ್ಪುವನ್ನು ಸ್ಮರಿಸಿದರು.

'ಅಪ್ಪು ಅಣ್ಣಾವರ ಸಂದೇಶ...
ಅಪ್ಪು ಕನ್ನಡದ ಸಂಕೇತ...
ಅಪ್ಪು ಸಂಸ್ಕೃತಿಯ ಪ್ರತೀಕ..
ಅಪ್ಪು ಸಂಸ್ಕಾರ ಪುನೀತ...
ಅಪ್ಪು ರಾಜಪ್ರೀತಿಯ ಜನರ ವಿನೀತ'

ಎಂಬ ಕವನ ವಾಚಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು. ಮತ್ತೊಂದು ಕವನ ವಾಚಿಸಿದ ಅವರು,

ಮುತ್ತುರಾಜನ ಕಂದ
ನೀ, ಮುತ್ತು ಕಂದ...
ಕನ್ನಡದ ಮನೆಗೆ ಸದಾ ಆನಂದ...
ರಾಜರಥದಿ ಕರುನಾಡಪಥದಿ
ಆಗು ನೀ ರಾಜಕುಮಾರ...
ಒಪ್ಪುವರು, ಅಪ್ಪುವರು,
ಶತಕೋಟಿ ಜನರು,
ಇತಿಹಾಸ ಬರೆವ ಪುನೀತ ನೀನು'

ಎಂದು ವಾಚಿಸಿ ಮತ್ತೊಮ್ಮೆ ಸಭಿಕರ ಚಪ್ಪಾಳೆಗೆ ಭಾಜನರಾದರು.

ತೊರೆದು ಜೀವಿಸಬಹುದೇ
ಅಪ್ಪ–ಅಮ್ಮನ ಚರಣಗಳ
ತೆರಳಿರುವೆ ನಾ ಅಲ್ಲಿಗೆ...
ನಾ ತೊರೆದ ಕನಸುಗಳ
ನೀವಿದ್ದು ಪೊರೆಯಿರಿ
ಕನ್ನಡದ ಮನಸುಗಳು
ಮುದುಡದಂತೆ ನೀರೆರೆಯಿರಿ

ಎಂದು ಕವನಗಳನ್ನು ವಾಚಿಸುವ ಮೂಲಕ ಆರ್.ರಘು ಅಪ್ಪುವನ್ನು ಸ್ಮರಿಸಿ, ಸಭಿಕರ ಮೆಚ್ಚುಗೆ ಗಳಿಸಿದರು.

ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯಲ್ಲಿ

ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ

ರೈತರ ಹಿತಕ್ಕನುಗುಣವಾಗಿ ನಿರಾಣಿ ಶುಗರ್ಸ್‌ನಿಂದ ಕೆಲಸ: ಸಚಿವ ಮುರುಗೇಶ್ ಆರ್.ನಿರಾಣಿ ಭರವಸೆ


ಚುಂಚನಕಟ್ಟೆಯ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಸಚಿವ ಮುರುಗೇಶ್ ಆರ್.ನಿರಾಣಿ ಚಾಲನೆ ನೀಡಿದರು. ಶಾಸಕ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮತ್ತಿತರರಿದ್ದರು.

ನಿರಾಣಿ ಶುಗರ್ಸ್‌ಗೆ ರೈತರು ಸಹಕರಿಸಿ: ಸಾ.ರಾ

ಚುಂಚನಕಟ್ಟೆ: ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿದ್ದ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸಲು ನಾನು ಪ್ರಾಮಾಣಿಕವಾಗಿ ಶ್ರಮಿಸಿದ ಫಲವಾಗಿ ಕಾರ್ಖಾನೆ ಇಂದು ಆರಂಭವಾಗಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಾರ್ಖಾನೆ ಮಾರಾಟ ಮಾಡಲು ಪ್ರಯತ್ನಿಸಿ ಆ ವಿಚಾರದಲ್ಲಿ ಸಹಕಾರ ನೀಡುವಂತೆ ನನ್ನ ಮೇಲೆ ಒತ್ತಡ ಹೇರಲಾಗಿತ್ತು. ಆದರೆ ನಾನು ರೈತರ ಹಿತದೃಷ್ಟಿಯಿಂದ ಆ ಪ್ರಸ್ತಾಪ ತಿರಸ್ಕರಿಸಿದ್ದರಿಂದ ನಮ್ಮ ಕಾರ್ಖಾನೆ ಉಳಿಯಿತು ಎಂದು ತಿಳಿಸಿದರು. ಪ್ರಸಕ್ತ ವರ್ಷ ಕಾರ್ಖಾನೆಯಿಂದ ರೈತರಿಗೆ ಸ್ವಲ್ಪಮಟ್ಟಿನ ತೊಂದರೆಯಾದರೂ ಭವಿಷ್ಯದಲ್ಲಿ ಎಲ್ಲರಿಗೂ ಅನುಕೂಲವಾಗಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ರೈತ ಬಾಂಧವರು ನಿರಾಣಿ ಶುಗರ್ಸ್‌ಗೆ ಎಲ್ಲಾ ರೀತಿಯ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಚುಂಚನಕಟ್ಟೆ, ಸೆ.26– ಇಲ್ಲಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ನಿರಾಣಿ ಶುಗರ್ಸ್ ಮಾಲೀಕರೂ ಆದ ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ಆರ್.ನಿರಾಣಿ, ಶಾಸಕ ಸಾ.ರಾ.ಮಹೇಶ್ ಮತ್ತು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ರೈತರೊಡಗೂಡಿ ಯಂತ್ರಕ್ಕೆ ಕಬ್ಬು ಹಾಕುವ ಮೂಲಕ ಅಧಿಕೃತವಾಗಿ ಚಾಲನೆ ನೀಡಿದರು.

ಕಳೆದ 10 ವರ್ಷಗಳಿಂದ ಸ್ಥಗಿತಗೊಂಡಿದ್ದ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ ನೀಡುತ್ತಿದ್ದಂತೆಯೇ ಈ ಭಾಗದ ರೈತರು ಹಾಗೂ ಸಾರ್ವಜನಿಕರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಅಲ್ಲದೇ ಕಾರ್ಖಾನೆ ಆರಂಭಕ್ಕೆ ಶ್ರಮಿಸಿದ ಶಾಸಕ ಸಾ.ರಾ.ಮಹೇಶ್ ಪರ ಘೋಷಣೆ ಕೂಗಿದರು.

ನಂತರ ಮಾತನಾಡಿದ ಸಚಿವ ಮುರುಗೇಶ್ ಆರ್.ನಿರಾಣಿ, ಚುಂಚನಕಟ್ಟೆ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್ ರೈತರ ಹಿತಕ್ಕೆ ಅನುಗುಣವಾಗಿ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದ ಅವರು, ಸರ್ಕಾರದ ನಿಯಮಾನುಸಾರ ನಮ್ಮ ಕಂಪನಿ ಬದ್ಧತೆಯಂತೆ ಕೆಲಸ ಮಾಡುತ್ತದೆ ಎಂದರು.

ಪ್ರಸ್ತುತ ಕಾರ್ಖಾನೆ 1,250 ಟನ್ ಕಬ್ಬು ಅರೆಯಲಿದ್ದು, ಮುಂದಿನ ದಿನಗಳಲ್ಲಿ ಅದನ್ನು 5 ಸಾವಿರ ಟನ್ ಸಾಮರ್ಥ್ಯಕ್ಕೆ ಏರಿಸುವ ಗುರಿ ಹೊಂದಲಾಗಿದೆ. ಇದರ ಜತೆಗೆ ಉಪ ಉತ್ಪನ್ನಗಳನ್ನು ಇಲ್ಲಿ ತಯಾರಿಸಲಾಗುತ್ತದೆ ಎಂದರು. ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 7 ರಿಂದ 14 ದಿನಗಳೊಳಗೆ ಹಣ ಪಾವತಿಸುವ ಜೊತೆಗೆ ಸಮಾಜಮುಖಿ ಕಾರ್ಯ ಹಮ್ಮಿಕೊಳ್ಳಲು ಕಂಪನಿ ಯೋಜನೆ ರೂಪಿಸಿದ್ದು, ರೈತರ ಕುಟುಂಬಕ್ಕೆ ಆರ್ಥಿಕವಾಗಿ ಸಹಾಯವಾಗುವ ಕೆಲಸ ಮಾಡುತ್ತೇವೆಂದು ಪ್ರಕಟಿಸಿದರು.

ರೈತರು ನಮ್ಮ ಮೇಲೆ ನಂಬಿಕೆಯಿಟ್ಟು ಸಕಾಲಕ್ಕೆ ಕಬ್ಬು ಸರಬರಾಜು ಮಾಡಿದರೆ ಸಕ್ಕರೆ ಕಾರ್ಖಾನೆ ಜೊತೆಗೆ ಇಲ್ಲಿ ಗ್ರೂಪ್ ಆಫ್ ಇಂಡಸ್ಟ್ರೀಸ್ ಮಾಡಿ ಸಾವಿರಾರು ಮಂದಿಗೆ ಉದ್ಯೋಗ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್ ಕಂಪನಿಯವರು ಉತ್ತಮವಾಗಿ ನಡೆಸಿಕೊಂಡು ಹೋಗುವ ನಂಬಿಕೆ ಇದ್ದು, ಎಲ್ಲರೂ ಅವರಿಗೆ ಸಹಕಾರ ನೀಡಬೇಕು ಎಂದರು.

ಈ ವೇಳೆ ಪುರಸಭೆ ಸದಸ್ಯ ಕೆ.ಪಿ.ಪ್ರಭುಶಂಕರ್, ನಗರ ಬಿಜೆಪಿ ಅಧ್ಯಕ್ಷ ಯು.ಕೃಷ್ಣಭಟ್, ತಾಲೂಕು ಬಿಜೆಪಿ ಅಧ್ಯಕ್ಷ ಮಂಜುನಾಥ್, ಕುಪ್ಪೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಹಳಿಯೂರು ಗ್ರಾಪಂ ಅಧ್ಯಕ್ಷ ಹೆಚ್.ಆರ್. ದಿನೇಶ್, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಎಪಿಎಂಸಿ ಮಾಜಿ ಸದಸ್ಯ ಬಿ.ಆರ್. ಕುಚೇಲ, ನಿರಾಣಿ ಗ್ರೂಪ್ ಶಿವಾನಂದ ಯರಗಟ್ಟಿ, ಜಿ.ಎಂ.ಬೋರೇಗೌಡ, ನಾಗೇಗೌಡ, ಶ್ರೀನಿವಾಸ್, ಮುಖಂಡರಾದ ಸಿ.ಜಿ.ಬಾಬು, ನವೀನ, ನಾಗರಾಜು, ಸಾಲಿಗ್ರಾಮ ತಹಸೀಲ್ದಾರ್ ಮೋಹನ್ ಕುಮಾರ್, ಪಿಡಿಓ ಸುನೀಲ್ ಮತ್ತಿತರರಿದ್ದರು.

ಹೈಕಮಾಂಡ್ ಸೂಚಿಸಿದ ಕಡೆ ಸ್ಪರ್ಧೆ



ನಂಜನಗೂಡು, ಸೆ.26– ಕಾಂಗ್ರೆಸ್ ಹೈಕಮಾಂಡ್ ತಾಲೂಕಿನ ವರುಣಾ, ಕೊಪ್ಪಳ, ಕೋಲಾರ ಸೇರಿದಂತೆ ಬಾದಾಮಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹೇಳಿದರೂ ಚುನಾವಣೆಗೆ ಸ್ಪರ್ಧಿಸಲು ಸಿದ್ಧನಿದ್ದೇನೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಚಿಕ್ಕಹೊಮ್ಮ ಗ್ರಾಮದ ಕೆರೆಗೆ ಸೋಮವಾರ ಬಾಗಿನ ಅರ್ಪಿಸಿ ನಂತರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವರುಣಾ ಕ್ಷೇತ್ರದಿಂದ ಗೆದ್ದು ಮುಖ್ಯಮಂತ್ರಿಯಾಗಿದ್ದೆ. 2023ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಬಹುಮತ ಪಡೆಯಲಿದ್ದು, ಮತ್ತೆ ಮುಖ್ಯಮಂತ್ರಿಯಾಗುತ್ತೇನೆ. ಈ ಕ್ಷೇತ್ರವನ್ನು ಮರೆಯುವುದಿಲ್ಲ. ಮುಂದೆ ಹೆಚ್ಚಿನ ಅನುದಾನ ನೀಡಿ ನಿಮ್ಮ ಅಪೇಕ್ಷೆಗಳನ್ನು ಈಡೇರಿಸುತ್ತೇನೆ ಎಂದು ಭರವಸೆ ನೀಡಿದರು.

ನಮ್ಮ 13 ಶಾಸಕರನ್ನು ಖರೀದಿಸಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಅಭಿವೃದ್ಧಿ ಮಾಡದೆ ಲೂಟಿಯಲ್ಲಿ ತೊಡಗಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಚಿಕ್ಕಹೊಮ್ಮ ಕೆರೆ ತುಂಬಿಸಲು ಯೋಜನೆ ಅನುಷ್ಠಾನಗೊಳಿಸಲಾಗಿತ್ತು. ಆದರೆ ಕೆರೆ ತುಂಬಿಸಲು ಇಷ್ಟು ಕಾಲ ಬೇಕಿರಲಿಲ್ಲ. ಸರ್ಕಾರದ ಖಜಾನೆ ಖಾಲಿಯಾಗಿದೆ. ನನ್ನ ಕಾಲದಲ್ಲಿ ಖಜಾನೆ ತುಂಬಿತ್ತು. ಗುತ್ತಿಗೆದಾರರಿಗೆ ನೀಡಿದ ಚೆಕ್ ಬೌನ್ಸ್ ಆಗುತ್ತಿರಲಿಲ್ಲ. ಈಗ ಸರ್ಕಾರದ ಚೆಕ್‌ಗಳು ಬೌನ್ಸ್ ಆಗುತ್ತಿವೆ. ಗುತ್ತಿಗೆದಾರರು ಶೇ.40 ಕಮಿಷನ್ ನೀಡಬೇಕಾಗಿದೆ. ಈ ಸರ್ಕಾರದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇವರಿಗೆ ಬಡವರಿಗೆ ಒಂದು ಮನೆ ಕಟ್ಟಿಕೊಡಲು ಸಾಧ್ಯವಾಗಿಲ್ಲ. ಮುಂದೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ. ನಾವು ಜನರ ಕಷ್ಟಗಳಿಗೆ ಸ್ಪಂದಿಸುತ್ತೇವೆ ಎಂದರು.

ಈ ವೇಳೆ ಮಾಜಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕ ಯತೀಂದ್ರ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ನಾಗೇಶ್, ಗ್ರಾಪಂ ಅಧ್ಯಕ್ಷ ಗುರುಸ್ವಾಮಿ, ಶೃತಿ, ಮಹದೇವು, ನಂಜುಂಡೇಗೌಡ, ನಾಗರಾಜು, ಗುರುಸಿದ್ದಯ್ಯ, ರಾಜು, ಇದ್ದರು.

1.56 ಲಕ್ಷ ರೂ. ಲಾಭಾಂಶದಲ್ಲಿ ಹೆಮ್ಮಿಗೆ ಪಿಎಸಿಎಸ್



ತಿ.ನರಸೀಪುರ, ಸೆ.26– ಪ್ರಸಕ್ತ ಸಾಲಿನಲ್ಲಿ ಸಂಘ 1,56,422 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಹೆಮ್ಮಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ರಾಮೇಗೌಡ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ 492 ಸದಸ್ಯರಿಗೆ ಕೃಷಿ ಚಟುವಟಿಕೆ ಕೈಗೊಳ್ಳಲು ಕೆಸಿಸಿ ಸಾಲವಾಗಿ 5,69,36,000 ರೂ. ನೀಡಲಾಗಿದೆ. 9,01,600 ರೂ.ಗಳನ್ನು ಮಧ್ಯಮಾವಧಿ ಸಾಲವಾಗಿ ನೀಡುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಿ ಕೊಡಲಾಗಿದೆ ಎಂದರು.

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡರ ಸಹಕಾರದಿಂದ ನೀಡಲಾದ 5 ಲಕ್ಷ ರೂ.ಗಳನ್ನು ಸಂಘದ ಕಟ್ಟಡ ನವೀಕರಣಕ್ಕೆ ವಿನಿಯೋಗಿಸಲಾಗಿದೆ. ಸರ್ಕಾರದಿಂದ ಯಾವುದೇ ಸಬ್ಸಿಡಿ ಬಾರದ ಹಿನ್ನೆಲೆಯಲ್ಲಿ ಕಳೆದ ಬಾರಿಯ ಲಾಭಾಂಶಕ್ಕಿಂತ ಈ ಬಾರಿ ನಿವ್ವಳ ಲಾಭದಲ್ಲಿ ಇಳಿಕೆ ಕಂಡಿದೆ ಎಂದರು. ನಿರ್ದೇಶಕ ಸೋಮಣ್ಣ ಮಾತನಾಡಿ, ಸಹಕಾರಿಗಳು ಸಂಘದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಸಿಇಓ ಹೆಚ್.ಎಸ್.ರಂಜನ್ ಕುಮಾರ್ ಸಂಘದ ವಾರ್ಷಿಕ ವರದಿ ಮಂಡಿಸಿದರು. ಈ ವೇಳೆ ಸಂಘದ ಮಾಜಿ ಅಧ್ಯಕ್ಷ ಹೆಚ್.ವಿ. ಶೇಷಾದ್ರಿ, ನಿರ್ದೇಶಕರಾದ ಕೆ.ಎಸ್.ಮಹದೇವಸ್ವಾಮಿ, ಪುಟ್ಟಸ್ವಾಮಿ, ಮಹದೇವಪ್ಪ ಹೆಚ್.ಸಿ. ಹೆಮ್ಮಯ್ಯ, ಚೌಡಮ್ಮ, ಹೆಚ್.ಆರ್.ಶಿವಕುಮಾರ್, ಕಮಲಮ್ಮ, ಹಿರಿಯ ಸಹಕಾರಿಗಳಾದ ಶಿವಮಲ್ಲಪ್ಪ, ಮಾದೇಗೌಡ, ದೇವರಾಜಪ್ಪ ಪರಪ್ಪ ಚಿಕ್ಕ ಹೊನ್ನಯ್ಯ, ದೊಡ್ಡಯ್ಯ, ದೇವರಾಜು ಸೇರಿದಂತೆ ಇತರರಿದ್ದರು.


ಪಿರಿಯಾಪಟ್ಟಣದ ರೋಟರಿ ಸಂಸ್ಥೆ ವತಿಯಿಂದ ಇತ್ತೀಚೆಗೆ ಶಿಕ್ಷಕರಾದ ಬಿ.ಎಂ.ಶಿವಸ್ವಾಮಿ ಹಾಗೂ ಕೆ.ಎಸ್. ನಾಗರಾಜ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ರೋಟರಿ ಅಧ್ಯಕ್ಷ ರೊ.ಸತ್ಯನಾರಾಯಣ, ಮಾಜಿ ಸಹಾಯಕ ರಾಜ್ಯಪಾಲ ಬಿ.ವಿ.ರೊ.ಜವರೇಗೌಡ, ವಲಯ ಸೇನಾನಿ ರೊ.ಚಂದ್ರು, ಕಾರ್ಯದರ್ಶಿ ರೊ.ವಿನಯ್ ಶೇಖರ್, ರೊ. ಡಾ.ಪ್ರಕಾಶ್ ಬಾಬುರಾವ್, ರೊ.ಬಸವೇಗೌಡ, ರೊ.ರಾಜೇಗೌಡ, ರೊ.ಪುರುಷೋತ್ತಮ್, ರೊ.ಹೆಗಡೆ, ರೊ.ಪ್ರಸಾದ್, ರೊ.ನಾಗರಾಜ್ ಇತರರಿದ್ದರು.

ಕೋಟೆಯಲ್ಲಿ ಗ್ರಾಮೀಣ ದಸರಾ ಕ್ರೀಡಾಕೂಟಕ್ಕೆ ಚಾಲನೆ



ಹೆಚ್.ಡಿ.ಕೋಟೆ, ಸೆ.26– ವಿಶ್ವವಿಖ್ಯಾತ ಮೈಸೂರು ದಸರಾವನ್ನು ಆದಿವಾಸಿ ಮಹಿಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಉದ್ಘಾಟಿಸಿರುವುದು ನಾಡಿಗೆ ಸಂದ ಗೌರವ ಎಂದು ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಗ್ರಾಮೀಣ ದಸರಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಆದಿವಾಸಿ ಮಹಿಳೆ ಮೂಲಕ ದಸರಾಕ್ಕೆ ಚಾಲನೆ ಕೊಡಿಸಿದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಕೊರೊನಾದಿಂದಾಗಿ ಕಳೆದ 2 ವರ್ಷಗಳಿಂದ ಗ್ರಾಮೀಣ ಕ್ರೀಡಾಕೂಟ ಹಾಗೂ ದಸರಾ ನಡೆದಿರಲಿಲ್ಲ. ಈ ಬಾರಿ ಸಾಂಪ್ರದಾಯಿಕವಾಗಿ ಅರ್ಥಪೂರ್ಣವಾಗಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಆಚರಿಸಲಾಗುವುದು ಎಂದರು.

ಗ್ರಾಮೀಣ ದಸರಾ ಕ್ರೀಡಾಕೂಟ ಅಂಗವಾಗಿ ನಡೆದ ಗ್ರಾಮೀಣ ಕ್ರೀಡೆಯಲ್ಲಿ ಮಹಿಳೆಯರು, ಪುರುಷರು ಹಾಗೂ ಯುವಕರು ಬಹಳ ಉತ್ಸಾಹದಿಂದ ಭಾಗವಹಿಸಿರುವುದು ಖುಷಿಯ ವಿಚಾರ ಎಂದರು. ಈ ವೇಳೆ ಪುರುಷರಿಗಾಗಿ ಗುಂಡು ಎಸೆತ, ಕೆಸರು ಗದ್ದೆ ಓಟ, ಗೋಣಿ ಚೀಲದ ಓಟ, ಮೂರು ಕಾಲಿನ ಓಟ, ಗೊಬ್ಬರ ಮೂಟೆ ಹೊತ್ತು ಓಡುವುದು, ಮಹಿಳೆಯರಿಗಾಗಿ ಗುಂಡು ಎಸೆತ, ಚಮಚದಲ್ಲಿ ನಿಂಬೆಹಣ್ಣು ಇಟ್ಟು ಓಡುವುದು, ಒಂಟಿ ಕಾಲಿನ ಓಟ ಏರ್ಪಡಿಸಲಾಗಿತ್ತು

ಕಾರ್ಯಕ್ರಮದಲ್ಲಿ ತಾಪಂ ಇಓ ರಾಜೇಶ್ ಜೆರಾಲ್ಡ್, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಬಿಇಓ ಉದಯಕುಮಾರ್, ಕೃಷಿ ಅಧಿಕಾರಿ ರಂಗಸ್ವಾಮಿ, ಟಿಎಚ್‌ಓ ಡಾ.ರವಿಕುಮಾರ್, ಸಿಡಿಪಿಓ ಆಶಾ, ಬಿಆರ್‌ಸಿ ಕೃಷ್ಣಯ್ಯ, ಹಿಂದೂ ಶ್ರೀ, ದೈಹಿಕ ಶಿಕ್ಷಣ ಅಧಿಕಾರಿ ರಾಮ ಪ್ರಸಾದ್, ಕಂದಾಯ ಅಧಿಕಾರಿ ಮಹೇಶ್, ಮಹದೇವಯ್ಯ, ಸಂತೋಷ್ ನಾಗ್, ಹರೀಶ್, ರಾಜೇಶ್, ಮುಖಂಡರಾದ ಹೆಚ್.ಸಿ.ಮಂಜುನಾಥ್, ರಾಜೇಗೌಡ, ಕಾರ್ತಿಕ್, ಸುರೇಂದ್ರ ಅಶೋಕ್ ಇದ್ದರು.

ಭಾರತ್ ಜೋಡೋ ಯಾತ್ರೆ: ಹುಣಸೂರಿಂದ 8 ಸಾವಿರ ಮಂದಿ ಭಾಗಿ

ಹುಣಸೂರು, ಸೆ.26– ಅ.1ರಂದು ಆಗಮಿಸುವ ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸಲು ಹುಣಸೂರಿಂದ 8 ಸಾವಿರ ಮಂದಿ ಕಾಂಗ್ರೆಸ್ ಕಾರ್ಯಕರ್ತರು ತೆರಳಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರಿನಿಂದ ಬೇಗೂರಿಗೆ ತೆರಳಲು ಪ್ರತಿ ಗ್ರಾಮಗಳಿಂದ ಆಗಮಿಸುವ ಕಾರ್ಯಕರ್ತರಿಗಾಗಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿದ್ದು, ಬೇಗೂರಿಗೆ ತೆರಳಿ ಅಲ್ಲಿಂದ ಕಡಕೊಳ ಮಾರ್ಗವಾಗಿ ಮೈಸೂರು ವರೆಗೆ ಕಾರ್ಯಕರ್ತರು ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರೊಂದಿಗೆ ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಬಿಳಿಕೆರೆ ಬ್ಲಾಕ್ ಅಧ್ಯಕ್ಷ ದೇವರಾಜ್, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕಲ್ಕುಣಿಕೆ ರಾಘು ಇದ್ದರು.

ದ್ರೌಪದಿ ಮುರ್ಮು ರಾಷ್ಟ್ರಪತಿಯಾಗಲು ಸಂವಿಧಾನ ಕಾರಣ

ಕಾರ್ಯದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ



ನಂಜನಗೂಡು, ಸೆ.26– ಆದಿವಾಸಿ ಮಹಿಳೆ ದ್ರೌಪದಿ ಮುರ್ಮು ರಾಷ್ಟ್ರಪತಿಯಾಗಲು, ನಾನು ಮುಖ್ಯಮಂತ್ರಿಯಾಗಲು ಅಂಬೇಡ್ಕರ್ ನೀಡಿದ ಸಂವಿಧಾನವೇ ಕಾರಣ ಎಂದು ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಕಾರ್ಯ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ ದಲಿತರ ವಿಮೋಚನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅವಕಾಶ ವಂಚಿತರಾದ ಹಿಂದುಳಿದ ವರ್ಗದವರು, ರೈತರು, ಮಹಿಳೆಯರು, ಕಾರ್ಮಿಕರು, ಶ್ರಮಿಕ ವರ್ಗದವರ ವಿಮೋಚನೆ, ಸಮಾನತೆಗಾಗಿ ಹೋರಾಟ ನಡೆಸಿದವರು ಎಂದರು.

ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆ ಸೃಷ್ಟಿಯಾಗಲು ಜಾತಿ ವ್ಯವಸ್ಥೆ ಜಡತ್ವ ಹೊಂದಿರುವುದೇ ಕಾರಣ. ಅದು ಚಲನಶೀಲವಾಗಿ ಎಲ್ಲರಿಗೂ ಸಮಾನ ಅವಕಾಶ ದೊರಕಿ ಸಮ ಸಮಾಜ ನಿರ್ಮಾಣವಾಗಲು ಶಿಕ್ಷಣ ಪ್ರಮುಖ ಅಸ್ತ್ರ, ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಶ್ರಮಿಕರಿಗೆ ಶಿಕ್ಷಣ ದೊರೆತು ರಾಜಕೀಯ ಸ್ಥಾನಮಾನ, ಮಾನವೀಯ ಸಮಾಜ ನಿರ್ಮಾಣವಾಗಲು ಡಾ.ಬಿ.ಆರ್. ಅಂಬೇಡ್ಕರ್ ಕಾರಣ. ಆದಿವಾಸಿ ಮಹಿಳೆ ದ್ರೌಪದಿ ಮುರ್ಮು ರಾಷ್ಟ್ರಪತಿಯಾಗಲು, ನಾನು ಮುಖ್ಯಮಂತ್ರಿಯಾಗಲು ಅಂಬೇಡ್ಕರ್ ಸಂವಿಧಾನವೇ ಕಾರಣ. ಮನುಸ್ಮೃತಿ ಸಂವಿಧಾನದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥರಾಗಲು ಸಾಧ್ಯವೇ? ಆರ್‌ಎಸ್‌ಎಸ್ ಸ್ಥಾಪನೆಯಾದಾಗಿನಿಂದ ಮುಖ್ಯಸ್ಥ ಸ್ಥಾನ ಬರೀ ಒಂದೇ ಜಾತಿಗೆ ಸೀಮಿತವಾಗಿದೆ. ಅಲ್ಲದೆ ಎಸ್ಸಿ, ಎಸ್ಟಿ ವರ್ಗದವರ ಕಲ್ಯಾಣಕ್ಕಾಗಿ ಎಸ್‌ಇಪಿ, ಟಿಎಸ್‌ಪಿ ಅನುದಾನ ನಿಗದಿ ಮಾಡಿ ಕಾನೂನು ಜಾರಿ ಮಾಡಿದೆ. ಆದರೆ ಬಿಜೆಪಿ ಸರ್ಕಾರ ಅನುದಾನ ಕಡಿಮೆ ಮಾಡಿರುವುದಲ್ಲದೆ, ಎಸ್‌ಇಪಿ ಟಿಎಸ್‌ಪಿ ಮೀಸಲಿಟ್ಟ ಅನುದಾನ ವರ್ಗಾವಣೆ ಮಾಡಿಕೊಂಡು ದ್ರೋಹವೆಸಗಿದೆ ಎಂದು ಟೀಕಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಜ್ಞಾನದ ಸಂಕೇತ, ಅವರ ಪ್ರತಿಮೆ ಸ್ಥಾಪಿಸಿ ಬರೀ ಪೂಜೆಗೆ ಮಾತ್ರ ಸೀಮಿತಗೊಳಿಸದೆ ಅವರ ಸಿದ್ಧಾಂತ, ಹೋರಾದ ಮಾರ್ಗವನ್ನು ಅರ್ಥಮಾಡಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕು. ವರುಣಾ ಕ್ಷೇತ್ರ ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ ಕ್ಷೇತ್ರ. ಈ ಕ್ಷೇತ್ರದ ಜನರನ್ನು ನಾನು ಯಾವತ್ತೂ ಮರೆಯಲ್ಲ. ಉಪಕಾರ ಮಾಡಿದವರನ್ನು ಸ್ಮರಣೆ ಮಾಡಬೇಕಾಗಿರುವುದು ಮನುಷ್ಯನ ಕರ್ತವ್ಯ ಎಂದರು.

ಶಾಸಕ ಡಾ.ಯತೀಂದ್ರ ಮಾತನಾಡಿ, ಅಂಬೇಡ್ಕರ್ ಅವರ ಸಂವಿಧಾನವಿಲ್ಲದಿದ್ದರೆ ನಾವೆಲ್ಲ ದಾಸ್ಯದ ಬದುಕು ನಡೆಸಬೇಕಿತ್ತು. ಸಂವಿಧಾನದಿಂದ ಸಮಾನತೆ, ಶಿಕ್ಷಣ, ರಾಜಕೀಯ ಸ್ಥಾನಮಾನ ದೊರಕಿದೆ ಎಂದರು.

ಸಮಾರಂಭದಲ್ಲಿ ಜ್ಞಾನಪ್ರಕಾಶ್ ಸ್ವಾಮೀಜಿ, ಬಂತೆ ಬೋಧಿರತ್ನ ಮಾತನಾಡಿದರು. ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಮಹಾಪೌರ ಪುರುಷೋತ್ತಮ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡರಾದ ಸದಾನಂದ, ಸಿದ್ದವೀರಪ್ಪ, ರಂಗಸ್ವಾಮಿ, ಬಸವಣ್ಣ, ಸಿದ್ದಯ್ಯಸ್ವಾಮಿ, ಜಯಶಂಕರ, ಗುರುಸ್ವಾಮಿ, ರಾಜೇಂದ್ರ, ಶಿವಲಿಂಗಯ್ಯ, ಕೃಷ್ಣಕುಮಾರ್ ಇದ್ದರು.

> ಸಂವಿಧಾನದಿಂದ ಕೇವಲ ಎಸ್ಸಿ, ಎಸ್ಟಿ ವರ್ಗ ಮಾತ್ರವಲ್ಲದೇ, ಎಲ್ಲಾ ವರ್ಗದವರೂ ಲಾಭ ಪಡೆದಿದ್ದಾರೆ. ಪ್ರಸ್ತುತ ಸಂವಿಧಾನ ಅಪಾಯದಲ್ಲಿದೆ. ಸಂವಿಧಾನ ಕಳೆದುಕೊಂಡರೆ ಮನುಸ್ಮೃತಿ ಸಂವಿಧಾನವಾಗಲಿದೆ. ನಾವು ಸಂವಿಧಾನ ಗಟ್ಟಿಗೊಳಿಸುವ ಕೆಲಸ ಮಾಡಬೇಕಿದೆ. ನಮ್ಮನ್ನು ರಾಜಕೀಯ, ಶಿಕ್ಷಣ, ಸಮಾನತೆಯಿಂದ ದೂರ ಇರಿಸಿದವರು ನಮ್ಮ ಆದರ್ಶವಾಗಿದ್ದಾರೆ. ಮೌಢ್ಯತೆಗೆ ಜೋತು ಬಿದ್ದು ನಿಜವಾದ ಶತ್ರುಗಳನ್ನು ಗುರ್ತಿಸುವಲ್ಲಿ ಸೋತು ಅಂಬೇಡ್ಕರ್ ಸಂಘರ್ಷ ಮರೆತಿದ್ದೇವೆ. ಅಂಬೇಡ್ಕರ್ ಹೋರಾಟದ ದಾರಿ ನಮಗೆಲ್ಲಾ ಸ್ಫೂರ್ತಿ.
>
> – ಸತೀಶ್ ಜಾರಕಿಹೊಳಿ, ಮಾಜಿ ಸಚಿವ.

ಲಕ್ಷಾಂತರ ರೂ. ಮೌಲ್ಯದ ಮರಗಳ ವಶ: ಮೂವರ ಬಂಧನ

ಹೆಚ್.ಡಿ.ಕೋಟೆ, ಸೆ.26– ಪಟ್ಟಣದ ಬೆಳಗನಹಳ್ಳಿ ರಸ್ತೆಯ ಮನೆಯೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಲಕ್ಷಾಂತರ ರೂ. ಮೌಲ್ಯದ ಸಾಗುವಾನಿ ಮರಗಳನ್ನು ವಶಪಡಿಸಿಕೊಂಡಿರುವ ಮೇಟಿಕುಪ್ಪೆ ವನ್ಯಜೀವಿ ವಲಯದ ಅರಣ್ಯಾಧಿಕಾರಿ ಹರ್ಷಿತ್ ಮತ್ತು ಸಿಬ್ಬಂದಿ ಮೂವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲೂಕಿನ ಸೋನಹಳ್ಳಿ ಹಾಡಿ ನಿವಾಸಿ ದಾಸ, ಸಿದ್ದೇಗೌಡ ಮತ್ತು ಹೆಚ್.ಡಿ.ಕೋಟೆ ಪಟ್ಟಣದ ಮಂಜುಶೆಟ್ಟಿ ಬಂಧಿತರು. ಕಳೆದ 3 ದಿನಗಳ ಹಿಂದೆ ಸೋನಹಳ್ಳಿ ಹಾಡಿಯ ದಾಸನನ್ನು ಮರಗಳ್ಳತನದ ಆರೋಪದ ಮೇಲೆ ಅರಣ್ಯ ಅಧಿಕಾರಿಗಳು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. ಈ ವೇಳೆ ಆತ ಸೋನಹಳ್ಳಿಯ ಸಿದ್ದೇಗೌಡನ ಹೆಸರು ಹೇಳಿದ್ದ ಎನ್ನಲಾಗಿದೆ. ಬಳಿಕ ಸಿದ್ದೇಗೌಡನನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಆತ ಕೊಟ್ಟ ಮಾಹಿತಿ ಮೇರೆಗೆ ಸೋಮವಾರ ಮುಂಜಾನೆ ಅರಣ್ಯ ಇಲಾಖೆ ಸಿಬ್ಬಂದಿ, ಮಂಜುಶೆಟ್ಟಿ ಮನೆ ಮೇಲೆ ದಾಳಿ ನಡೆಸಿ ಆತನನ್ನು ಬಂಧಿಸಿ ಮರ ವಶಪಡಿಸಿಕೊಂಡಿದ್ದಾರೆ.


ನಂಜನಗೂಡು ತಾಲೂಕಿನ ಹೆಗ್ಗಡಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು. ಈ ವೇಳೆ ಅಧ್ಯಕ್ಷ ಕೆ.ವಿ.ಶಿವಬಸಪ್ಪ, ನಿರ್ದೇಶಕರಾದ ಡಿ.ಎಂ.ಶಿವಪ್ರಕಾಶ್, ಮಲ್ಲೇಶ್, ಬಸವಶೆಟ್ಟಿ, ಸಿ.ಚಿಕ್ಕರಂಗನಾಯಕ, ರೇವಣ್ಣ, ಚಿಕ್ಕನಿಂಗಮ್ಮ, ಮಹದೇವಸ್ವಾಮಿ, ಕಮಲಮ್ಮ, ನಾಗಮ್ಮ, ಸಿಇಓ ಹೆಚ್.ಎಸ್.ರವಿ ಸೇರಿದಂತೆ ಇತರರಿದ್ದರು.

ಎನ್.ಚಿಕ್ಕೇಗೌಡ ನಿಧನ



ತಿ.ನರಸೀಪುರ, ಸೆ.26– ತಾಲೂಕಿನ ಯರಗನಹಳ್ಳಿ ಗ್ರಾಮದ ನಿವಾಸಿ ಎನ್.ಚಿಕ್ಕೇಗೌಡ (75) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನರಂಜನೆಯ ತಾಣ ದಸರಾ ವಿಶೇಷ ವಸ್ತುಪ್ರದರ್ಶನ ತೆರೆದಿದೆ ಬನ್ನಿ...

ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ಉದ್ಘಾಟನೆ



ದಸರಾ ವಸ್ತುಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಡಿಸಿ ಡಾ.ಬಗಾದಿ ಗೌತಮ್, ಉಪ ಮೇಯರ್ ಜಿ.ರೂಪ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಮತ್ತಿತರರಿದ್ದರು.

ಮೈಸೂರು, ಸೆ.26(ಎಂಕೆ)– ದಸರಾ ವಸ್ತು ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಟೇಪ್ ಕತ್ತರಿಸಿ, ದೀಪ ಬೆಳಗಿಸುವ ಮೂಲಕ ದಸರಾ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, 3 ತಿಂಗಳ ಕಾಲ ನಡೆಯುವ ದಸರಾ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದ್ದು, ಹಿಂದೆಂದಿಗಿಂತಲೂ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ ಎಂದರು.

ಮಿರ್ಲೆ ಶ್ರೀನಿವಾಸಗೌಡ ಅವರು, ದಸರಾ ಪ್ರಾಧಿಕಾರದ ಅಧ್ಯಕ್ಷರಾದ ಬಳಿಕ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುವುದರ ಜೊತೆಗೆ ಉತ್ತಮವಾಗಿ ಆಯೋಜನೆ ಮಾಡಿದ್ದಾರೆ. ಹಲವು ಇಲಾಖೆಗಳ ಮಳಿಗೆಗಳಿದ್ದು, ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಉದ್ಘಾಟನೆಗೂ ಮುನ್ನವೇ ಕಾವೇರಿ ಕಲಾ ಗ್ಯಾಲರಿ ವೀಕ್ಷಣೆಗೆ ಅವಕಾಶ ನೀಡುವ ಮೂಲಕ ಪ್ರವಾಸಿಗರ ಆಕರ್ಷಿಸುವ ವ್ಯವಸ್ಥೆ ಮಾಡಲಾಗಿದೆ ಎಂದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಈ ವರ್ಷದ ದಸರಾ ವಸ್ತು ಪ್ರದರ್ಶನವನ್ನು ಬಹಳ ವ್ಯವಸ್ಥಿತವಾಗಿ ಆಯೋಜಿಸಿದ್ದು, ಆಕರ್ಷಣೀಯವಾಗಿದೆ. ಉದ್ಘಾಟನೆಗೂ ಮುನ್ನವೇ ಶೇ.80ರಷ್ಟು ಮಳಿಗೆಗಳನ್ನು ತೆರೆದಿದ್ದು, ವ್ಯಾಪಾರಸ್ಥರಿಗೆ, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಹೊಸತನ: ದಸರಾ ವಸ್ತು ಪ್ರದರ್ಶನಕ್ಕೆ ಹೊಸತನ ನೀಡಲಾಗಿದೆ. 'ಸ್ಯಾಂಡ್ ಮ್ಯೂಸಿಯಂ' ಮತ್ತು 'ಲೇಸರ್ ಶೋ' ಪ್ರಮುಖ ಆಕರ್ಷಣೆಯಾಗಿದೆ. ಡಾ.ಪುನೀತ್ ರಾಜ್‌ಕುಮಾರ್ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರ ಮರಳು ಶಿಲ್ಪ ಕಲಾಕೃತಿ ರೂಪಿಸಲಾಗಿದೆ. ಡಿಜಿಟಲ್ ಮೊಬೈಲ್ ಆ್ಯಪ್, ಎರಡು ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, 60ಕ್ಕೂ ಹೆಚ್ಚು ಬಗೆಯ ಅಮ್ಯೂಸ್‌ಮೆಂಟ್ ಐಟಂಗಳನ್ನು ಅಳವಡಿಸಲಾಗಿದೆ. ಅಲ್ಲದೆ ಪ್ರಾಧಿಕಾರದ ಮುಂಭಾಗ ಕಾಂಕ್ರಿಟ್ ಹಾಗೂ ರಸ್ತೆ ಡಾಂಬರೀಕರಣ ಸೇರಿ ಶಾಶ್ವತ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ವಿವರಿಸಿದರು. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಉಪ ಮೇಯರ್ ಜಿ.ರೂಪ, ಪಾಲಿಕೆ ಸದಸ್ಯೆ ಛಾಯಾದೇವಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಕಾರ್ಯದರ್ಶಿ ಗಿರಿಧರ್ ಮತ್ತಿತರರು ಉಪಸ್ಥಿತರಿದ್ದರು.



ವಾರ್ತಾ ಮತ್ತು ಸಂಪರ್ಕ ಇಲಾಖೆಯ 'ನವ ಭಾರತಕ್ಕಾಗಿ ನವ ಕರ್ನಾಟಕ' ಮಳಿಗೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವೀಕ್ಷಿಸಿದರು.

ಉದ್ಘಾಟಕರು ಚಕ್ಕರ್..!

ದಸರಾ ವಸ್ತು ಪ್ರದರ್ಶನ ಉದ್ಘಾಟಿಸಬೇಕಾಗಿದ್ದ ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಾದ ಆನಂದ್ ಸಿಂಗ್ ಚಕ್ಕರ್ ಹಾಕಿದ್ದರು. ಇದರಿಂದ ಜಿಲ್ಲಾ ಉಸ್ತುವಾರಿ ಸಚಿವರೇ ಉದ್ಘಾಟಿಸಬೇಕಾಗಿ ಬಂತು. ಬಹುತೇಕ ಎಲ್ಲಾ ದಸರಾ ಕಾರ್ಯಕ್ರಮಗಳು ಜಿಲ್ಲಾ ಉಸ್ತುವಾರಿ ಸಚಿವರಿಂದಲೇ ಉದ್ಘಾಟನೆಯಾಗಿದ್ದು, ಆಯಾ ಇಲಾಖೆಯ ಸಚಿವರು ಉದ್ಘಾಟನಾ ಸಮಾರಂಭಗಳಲ್ಲಿ ಭಾಗವಹಿಸದೆ ತಮ್ಮ ಜವಾಬ್ದಾರಿ ಮರೆತಂತೆ ಕಾಣುತ್ತಿತ್ತು. ಅಲ್ಲದೆ ಸ್ಥಳೀಯ ಜನಪ್ರತಿನಿಧಿಗಳನ್ನು ಮೂಲೆಗುಂಪು ಮಾಡಿರುವುದು ಎದ್ದು ಕಾಣುತ್ತಿತ್ತು.

ಮಳಿಗೆಗಳ ಉದ್ಘಾಟನೆ...

ಬಳಿಕ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪ್ರವಾಸೋದ್ಯಮ ಇಲಾಖೆಯ 'ಅಂಜನಾದ್ರಿ ಬೆಟ್ಟ', ವಾರ್ತಾ ಮತ್ತು ಸಂಪರ್ಕ ಇಲಾಖೆಯ 'ನವ ಭಾರತಕ್ಕಾಗಿ ನವ ಕರ್ನಾಟಕ' ಮಳಿಗೆಗಳು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸ್ಮಾರಕಗಳ ಸಂರಕ್ಷಣೆ ಕುರಿತ ಛಾಯಾಚಿತ್ರ ಪ್ರದರ್ಶನ, ಪುಸ್ತಕಗಳ ಮಾರಾಟಕ್ಕೆ ಚಾಲನೆ ನೀಡಲಾಯಿತು.

ಪೇಸಿಎಂ ಅಭಿಯಾನದಿಂದ ಬಿಜೆಪಿ ತತ್ತರ

- ಪಕ್ಷದ ಮೀಡಿಯಾ ಹಾಗೂ ಸೋಷಿಯಲ್ ಮೀಡಿಯಾ ವಿಭಾಗದ ವಿರುದ್ಧ ವಾಗ್ದಾಳಿ
- ಇದುವರೆಗೂ ಪರಿಣಾಮಕಾರಿಯಾಗಿದ್ದ ಈ ವಿಭಾಗದ ನಿಷ್ಕ್ರಿಯತೆಗೆ ಆತಂಕ

ಬೆಂಗಳೂರು, ಸೆ. 26(ಕೆಎಂಶಿ)– ಕಾಂಗ್ರೆಸ್ ಪಕ್ಷದ ರಣತಂತ್ರ ನಿಪುಣ ಸುನೀಲ್ ಕನುಗೋಳು ಅವರು ರೂಪಿಸಿದ್ದೆನ್ನಲಾದ ಪೇಸಿಎಂ ಆಪ್ ರಾಷ್ಟ್ರಮಟ್ಟದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮುಜುಗರ ತರುತ್ತಿದ್ದಂತೆಯೇ ಪಕ್ಷದ ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾ ವಿಭಾಗದ ಬಗ್ಗೆ ಬಿಜೆಪಿಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.



ಮುಖ್ಯಮಂತ್ರಿಯವರ ಇಲ್ಲವೇ ಸರ್ಕಾರದಲ್ಲಿರುವವರ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ನಿಖರ ದಾಖಲೆಗಳಿಲ್ಲದಿದ್ದರೂ ಕಾಂಗ್ರೆಸ್ ಪಕ್ಷದ ರಣತಂತ್ರ ನಿಪುಣ ಸುನೀಲ್ ಕನುಗೋಳು ಅವರ ಮಿದುಳಿನ ಕೂಸು ಎನ್ನಲಾದ ಪೇಸಿಎಂ ಆಪ್ ಬಿಜೆಪಿ ಸರ್ಕಾರದ ಇಮೇಜ್‌ಗೆ ಘಾಸಿ ಉಂಟು ಮಾಡಿರುವುದು ಪಕ್ಷದ ಒಳವಲಯಗಳಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆಯಲ್ಲದೆ, ಬಿಜೆಪಿಯ ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾ ವಿಭಾಗದ ವೈಫಲ್ಯದಿಂದಾಗಿ ನಾವು ಇವತ್ತು ಮುಖ ಮುಚ್ಚಿಕೊಳ್ಳುವ ಸ್ಥಿತಿ ಬಂದಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಈ ಹಿಂದೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದ ಬಿಜೆಪಿಯ ಮೀಡಿಯಾ ಸೆಲ್ ಕೆಲವರ ಸ್ವಪ್ರತಿಷ್ಠೆಯ ಕಾರಣದಿಂದಾಗಿ ಶಕ್ತಿ ಕಳೆದುಕೊಂಡಿದ್ದು,ಪೇಸಿಎಂ ಮಾದರಿಯಲ್ಲೇ ಕಾಂಗ್ರೆಸ್‌ನ ಮೀಡಿಯಾ ಸೆಲ್ ಇನ್ನೊಂದು ಹೊಡೆತ ಹಾಕಿದರೆ ರಾಜ್ಯದ ಜನರ ಮುಂದೆ ಬಿಜೆಪಿಯ ವರ್ಚಸ್ಸು ಕುಸಿದು ಹೋಗುತ್ತದೆ ಎಂಬುದು ಇಂತಹವರ ಮಾತು.

ವಸ್ತುಸ್ಥಿತಿ ಎಂದರೆ ಈ ಹಿಂದೆ ಬಿಜೆಪಿಯ ಮೀಡಿಯಾ ಸೆಲ್ ಅತ್ಯಂತ ಪರಿಣಾಮಕಾರಿಯಾಗಿತ್ತು. ಪ್ರತಿಪಕ್ಷಗಳು ಒಂದು ಆರೋಪ ಮಾಡಿದರೆ, ಆ ಆರೋಪಕ್ಕೆ ತಕ್ಕ ಉತ್ತರ ನೀಡುತ್ತಿದ್ದವಲ್ಲದೆ, ತಾವು ಮಾಡಿದ ಆರೋಪ ನಿಖರ ಗುರಿ ತಲುಪಲಾರದ ಬಗ್ಗೆ ಪ್ರತಿಪಕ್ಷಗಳು ತಲೆ ಕೆಡಿಸಿಕೊಳ್ಳುವಂತೆ ಮಾಡುತ್ತಿದ್ದವು.


ಈ ಮುಂಚೆ ಮೀಡಿಯಾ ಸೆಲ್ ಎಂಬುದು ಮುದ್ರಣ ಮತ್ತು ಟಿವಿ ಚಾನೆಲ್ಲುಗಳ ಮೇಲೆ ಅವಲಂಭಿತವಾಗಿ ದ್ದಾಗ ಮಾಧ್ಯಮ ವಿಭಾಗದ ವಕ್ತಾರರಾಗಿ ಹಿರಿಯ ನಾಯಕರಾದ ಆಯನೂರು ಮಂಜುನಾಥ್, ಗೋ. ಮಧುಸೂದನ್ ಮತ್ತು ಪ್ರಕಾಶ್ ಶೇಷರಾಘವಾಚಾರ್, ಎ.ಹೆಚ್.ಆನಂದ್ ಅವರಂತಹ ಘಟಾನುಘಟಿಗಳು ತಮಗಿದ್ದ ಮಾಧ್ಯಮ ಸಂಪರ್ಕದಿಂದ ಪಕ್ಷದ ಇಮೇಜ್ ಹೆಚ್ಚಲು ನೆರವಾಗುತ್ತಿದ್ದರು. ಕಾಲಕ್ರಮೇಣ ಡಿಜಿಟಲ್ ತಂತ್ರಜ್ಞಾನವೂ ಸೇರಿದಾಗ ಮೀಡಿಯಾ ಸೆಲ್ ಸ್ವರೂಪ ವಿಸ್ತೃತವಾಯಿತಲ್ಲದೆ ಎಲ್ಲ ದಿಕ್ಕುಗಳಿಂದ ವಿರೋಧಿಗಳನ್ನು ಇಕ್ಕಟ್ಟಿಗೆ ಸಿಲುಕಿಸಲು, ಪಕ್ಷ ಮತ್ತು ಸರ್ಕಾರದ ಇಮೇಜ್ ಹೆಚ್ಚಿಸುವ ಕೆಲಸವಾಗತೊಡಗಿತು.

ಆದರೆ ಇದು ಪರಿಣಾಮಕಾರಿಯಾಗುತ್ತಿದ್ದಂತೆಯೇ ಪತ್ರಿಕೆಗಳು ಮತ್ತು ಟಿವಿ ಚಾನೆಲ್ಲುಗಳ ಮೂಲಕ ಪಕ್ಷಕ್ಕೆ ಶಕ್ತಿ ತುಂಬುತ್ತಿದ್ದ ಮಾಧ್ಯಮ ವಿಭಾಗದಲ್ಲಿ ಪಕ್ಷದ ವಕ್ತಾರರಾಗಿದ್ದ ಆಯನೂರು ಮಂಜುನಾಥ್, ಗೋ.ಮಧೂ ಸೂಧನ್ ಮತ್ತು ಮೀಡಿಯಾ ಸ್ಪೆಷಲಿಸ್ಟುಗಳಾದ ಪ್ರಕಾಶ್ ಶೇಷರಾಘವಾಚಾರ್, ಎ.ಹೆಚ್.ಆನಂದ್ ತರದವರು ತೆರೆಯ ಹಿಂದೆ ಸರಿದರು.

ಹೀಗಾಗಿ ತಂತ್ರಜ್ಞಾನದ ಮೂಲಕ ಮಾಧ್ಯಮ ವಿಭಾಗದ ಸ್ವರೂಪ ಬದಲಾಯಿತಲ್ಲದೆ,ಸಾಮಾಜಿಕ ಜಾಲತಾಣಗಳ ಮೂಲಕ ಪರಿಣಾಮಕಾರಿ ಕೆಲಸ ಮಾಡಬಹುದು ಎಂಬ ಭಾವನೆಯನ್ನು ಬಿತ್ತಲಾಯಿತು. ವಿಪರ್ಯಾಸ ವೆಂದರೆ ಸಂಘಪರಿವಾರದ ಪ್ರಮುಖ ನಾಯಕರೊಬ್ಬರ ಹೆಸರು ಹೇಳುವ ವ್ಯಕ್ತಿಯೊಬ್ಬರು ಬಿಜೆಪಿಯ ಸೋಷಿ ಯಲ್ ಮೀಡಿಯಾ ಸೆಲ್ ತಮ್ಮಿಚ್ಛೆಯಂತೆ ನಡೆಯಬೇಕು ಎಂಬ ತೀರ್ಮಾನಕ್ಕೆ ಬಂದರು ಎಂಬುದು ಹಲವರ ಅಸಮಾಧಾನ. ಇವರಿಂದಾಗಿ ಬಿಜೆಪಿಯ ಸಾಮಾಜಿಕ ಜಾಲ ತಾಣ ವಿಭಾಗದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದ ವಿನೋದ್ ಕುಮಾರ್ ಅವರು ಮುನಿಸಿಕೊಂಡು ಕೆಲಸ ಬಿಟ್ಟರು.ಆದರೆ ಇದುವರೆಗೆ ಅವರ ಜಾಗಕ್ಕೆ ಅವರಷ್ಟೇ ಪ್ರಭಾವಿಯಾದ ಮತ್ತೊಬ್ಬರು ಬಂದಿಲ್ಲ ಎಂಬುದು ಬಿಜೆಪಿಯಲ್ಲಿ ಕೇಳಿ ಬರುತ್ತಿರುವ ಮಾತು. ವಿನೋದ್ ಕುಮಾರ್ ಅವರು ಬಿಜೆಪಿಯ ಹಿರಿಯ ನಾಯಕ ರಾಮಚಂದ್ರ ಗೌಡರ ಪುತ್ರನ ಆಪ್ತ ಎಂದು ಹೇಳಲಾಗಿದ್ದು, ಅವರು ಕಾರ್ಯ ನಿರ್ವಹಿಸುವವರೆಗೆ ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ಆಗಲೀ, ಜೆಡಿಎಸ್ ಆಗಲಿ ಧುಮುಕಿದ ಕೂಡಲೇ ದಂಡಿಯಾಗಿ ತಿರುಗೇಟು ನೀಡುವ ಕೆಲಸವಾಗುತ್ತಿತ್ತು. ಆದರೆ ಈಗ ಸಾಮಾಜಿಕ ಜಾಲತಾಣ ವಿಭಾಗದಲ್ಲಿ ವಿನೋದ್‌ಕುಮಾರ್ ಇಲ್ಲ, ಅಲ್ಲಿಗೆ ಪ್ರಕಾಶ್ ಶೇಷರಾಘವಾಚಾರ್, ಎ.ಹೆಚ್.ಆನಂದ್ ಅವರಂತ ವರೂ ತೆರೆಯ ಹಿಂದೆ ಸರಿದ ಪರಿಣಾಮವಾಗಿ ಬಿಜೆಪಿಯ ಮೀಡಿಯಾ ಸೆಲ್ ಎಂಬುದು ಅಕ್ಷರಶಃ ಬಳಲುತ್ತಿದೆ.

ಉತ್ತರಪ್ರದೇಶದಲ್ಲಿ ಟ್ರಾಕ್ಟರ್ ಪಲ್ಟಿ: 10 ಮಂದಿ ದುರ್ಮರಣ

ಲಖನೌ: ಸೀತಾಪುರದಿಂದ 47 ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಟ್ರ್ಯಾಕ್ಟರ್–ಟ್ರಾಲಿ ಪಲ್ಟಿಯಾಗಿ ಕೊಳಕ್ಕೆ ಬಿದ್ದ ಪರಿಣಾಮ ಕನಿಷ್ಠ 10 ಜನರು ಸಾವನ್ನಪ್ಪಿದ ಘಟನೆ ಸೋಮವಾರ ಉತ್ತರಪ್ರದೇಶದ ಲಖನೌ ಸಮೀಪ ನಡೆದಿದೆ. ಕೊಳದಲ್ಲಿ ಬಿದ್ದ ಇನ್ನೂ 37 ಜನರನ್ನು ರಕ್ಷಿಸಲಾಗಿದ್ದು, ಇಟೌಂಜಾ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಲಖನೌ ಕುವಾರಾವಾನ್ ರಸ್ತೆಗೆ ಹೋಗುವ ಮಾರ್ಗದಲ್ಲಿ



ಇಟೌಂಜಾ ಪ್ರದೇಶದ ಮುಖ್ಯರಸ್ತೆಯಿಂದ ಟ್ರ್ಯಾಕ್ಟರ್–ಟ್ರಾಲಿ ಸ್ಕಿಡ್ ಆಗಿ ಅಪಘಾತ ಸಂಭವಿಸಿದೆ. ಮೃತಪಟ್ಟವರಲ್ಲಿ ಇಬ್ಬರು ಹದಿಹರೆಯದ ಹುಡುಗಿಯರು ಸೇರಿದಂತೆ ಹಲವಾರು ಮಹಿಳೆಯರಿದ್ದಾರೆ. ಇದುವರೆಗೆ 34 ಜನರನ್ನು ಕೊಳದಿಂದ ತೆಗೆಯಲಾಗಿದೆ. ರಾಜ್ಯ ವಿಪತ್ತು ಪರಿಹಾರ ಪಡೆ(ಎಸ್‌ಡಿಆರ್‌ಎಫ್) ತಂಡವು ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದೆ. ಗಾಯಾಳುಗಳನ್ನು ಇಟೌಂಜಾ ಸಿಎಚ್‌ಸಿಗೆ ದಾಖಲಿಸಲಾಗಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸೂರ್ಯಪಾಲ್ ಗಂಗ್ವಾರ್ ಹೇಳಿದ್ದಾರೆ.

PUBLIC NOTICE

My client intends to purchase the below mentioned "Schedule property" from H.S. Shivanna, S/o H.S. Shivakanthappa, a resident of No. 29, 5th Main Road, Jayalakshmipuram, Mysore-12. Originally the agricultural property bearing Sy No.69/1, measuing to an extent of 7 Acres out of which 0.14 Guntas B Kharab land was purchased by Shivanna H.S. under a registered sale deed dated: 22-2-1973 from K. Shivegowda, S/o Late Kunnegowda, Chamundegowda, K. Madaiah under the document number 3281 of Book 1. Subsequently, the khatha was mutated in the name of H.S. Shivanna, and the Survey number was rephodied as 69/1A3 H.S. Shivanna after obtaining conversion order from the Deputy Commissioner vide reference number ALN (1) 612/2006-07 dated: 14-9-2007, and after obtaining approved Layout plan from MUDA, Mysore dated: 4-1-2016 has formed 80 different dimension sites, out of which the Schedule Property is the one which was formed by H.S. Shivanna in the name of PALM GARDENIA.

If any person/s, heirs of H.S. Shivanna or K. Shivegowda, Chamundegowda, K. Madaiah or H.S. Shivaknathappa and their family members, Banks, agreement holders, interest holders, charge holders, or other authority/s, Chits, any body claiming any sort of right, title, interest, charges or claims or any suit is pending on the above mentioned property of any kind whatsoever nature over the notice "Schedule Property" please do notify the same to the under signed within Seven days from the date of this public notice, attaching all the relevant documents substantiating such right & claims. If, no such objections are received within Seven days, my client will proceed to purchase the Schedule property. After the expiry of the said Ten days notice period, my client shall be at liberty not to entertain any complaint or claims.

SCHEDULE PROPERTY

All that is part and parcel of the vacant site bearing No. 32, curved out of Sy.No. 69/1A3, situated at PALM GARDENIA, Belavadi Village, Yelawala Hobli, Mysore Tq site measuring to an extent of East to West 9 mtrs and North to South 12 mtrs totally 108 sq. mtrs and the property is bounded on East by site bearing Number 33, West by Site number 31, North by 9 mtrs Road and South by Site number 63.

Sd/- Subramanya. J., Advocate
No. 890/4, 1st Floor, 1st Main, Lakshmipuram,
Mysore-570 004. Mob: 9844154581
Email: advocate.subramanya@gmail.com
Place: Mysore. Date: 23-9-2022